ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

(ಸಂಯುಕ್ತ ಸಂಚಿಕೆ)

ಸಂಪುಟ 24 ಸಂಚಿಕೆ 3–4
ಜುಲೈ–ಡಿಸೆಂಬರ್ 1995

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore. Vol. 24 No. 3 & 4, July—December 1995

ವಾರ್ಷಿಕ ಚಂದಾ :	ರೂ. 15–00	
ವಿದ್ಯಾರ್ಥಿಗಳಿಗೆ	ರೂ. 10–00	(ದೃಢೀಕರಣ ಪತ್ರವನ್ನು ಕಳುಹಿಸಬೇಕು)
ಅಜೀವ ಸದಸ್ಯತ್ವ	ರೂ. 150–00	

ಪ್ರಕಾಶಕರು :
ಎಸ್. ಕೆಂಡಗಣ್ಣಸ್ವಾಮಿ
ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು

ಮುದ್ರಕರು :
ಎಸ್. ಎಂ. ಹೊನ್ನಪ್ಪ
ನಿರ್ದೇಶಕ (ಕಾರ್ಯನಿರ್ವಾಹಕ)
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು

ಪರಿವಿಡಿ

ಎಲ್ಲರಿಗು ದೊರಕಲಿ (ಕವನ) 1
ಡಾ॥ ಕಮಲಾ ಹಂಪನಾ

ಕೊಪ್ಪಳದ ಹೊಸ ಶಾಸನಗಳು 2
ಡಾ॥ ಹಂಪ. ನಾಗರಾಜಯ್ಯ
ಎಂ. ಜಿ. ಮಂಜುನಾಥ

ಬಯಕೆಯ ಹಾದಿಯಲ್ಲಿ (ಕವನ) 45
ಶಿವರತ್ನ ಅ. ನ. ಹಳ್ಳಿ

ಕುಂದಾದ್ರಿಯ ನಿಷಧಿ ಶಾಸನ 47
ಜಿ. ಕೆ. ದೇವರಾಜಸ್ವಾಮಿ

ಪ್ರಾಚೀನ ಗಂಟೆಗಳ ವೈವಿಧ್ಯತೆ 51
ಎಂ. ಎಲ್. ಶಿವಶಂಕರ್

ಕಳೆದು ಹೋದ ಗೆಳತಿಗೆ (ಕವನ) 59
ಸವಿತಾ ರೆಡ್ಡಿ

ಸೋಸಲಿಯ ವೀರೇಶಾಂಕಿತ ಅಪ್ರಕಟಿತ ಸ್ವರವಚನ 61
(ಸಂ) ಎಸ್. ಶಿವಣ್ಣ

ಲಂಕೇಶರ 'ತೆರೆಗಳು' ಒಂದು ವಿವರಣಾತ್ಮಕ ಅಧ್ಯಯನ 63
ಹೊ. ನ. ನೀಲಕಂಠೇಗೌಡ

ಸಮಯದ ಗೊಂಬೆ (ಕವನ) 70
ತಲಘಟ್ಟಪುರ ನಟರಾಜ

ಕಾಳಾಮುಖ ಚತುರಾಚಾರ್ಯರು 72
ಡಾ॥ ಬಸವಲಿಂಗ ಸೊಪ್ಪಿನಮಠ

ವಿಶಿಷ್ಟಾದ್ವೈತ ದರ್ಶನ ಮೂಲಾಂಶಗಳು 79
ಡಾ॥ ಟಿ. ಬಿ. ಬಸವರಾಜು

ಮಣ್ಣಿಯ ಮಿಥುನ ಶಿಲ್ಪಗಳು 85
ಆರ್. ಜಗದೀಶ್

ನುಡಿನಮನ (ಕವನ) 87
ಎಂ. ಬೈರೇಗೌಡ

ಗಾಂಧೀಜಿಯವರ ಧರ್ಮದರ್ಶಿತ್ವ ಸಿದ್ಧಾಂತ 89
ಡಾ॥ ಎಂ. ಪಿ. ಭುವನೇಶ್ವರ ಪ್ರಸಾದ್

ನಮ್ಮ ಶಾಸ್ತ್ರಕಲೆಗಳು ಮತ್ತು ಶಿಕ್ಷಣ 99
ಎ. ಓ. ಆವಲಮೂರ್ತಿ

ಋತು ಪರ್ವ (ಕವನ) 106
ಟಿ. ಯಲ್ಲಪ್ಪ

ಕಾಮ್ಯುನ 'ತಪ್ಪಿದ ಎಳೆ'–ಒಂದು ವಿವೇಚನೆ 108
ಬಿ. ಸಿ. ರಾಜಕುಮಾರ್

ಯೋಗವು ಆತ್ಮೋನ್ನತಿಯ ಮಾರ್ಗ 112
ಡಾ॥ ಚಂದ್ರಮೌಳಿ ನಾಯ್ಕರ್

ಅನುಭಾವ ಕಂದಗಳು 120
ಡಾ॥ ವಿಜಯಕುಮಾರ ಮಹಾನುಭಾವಿಗಳು

ಮಂಥನ

ರವಳಿ ಘೋಷಿಸು – ಎಂದರೇನು ? 124
ಎಂ. ಮಾಧವ ಪೈ

ಎಲ್ಲರಿಗು ದೊರಕಲಿ

ಡಾ. ಕಮಲಾ ಹಂಪನಾ

ನಾ ಬರೆದೆ ನಿಮಗಾಗಿ
ನಾ ಬರೆದೆ ನನಗಾಗಿ
ನಾ ಬರೆದೆ ಜನಕಾಗಿ
ನಾ ಬರೆದೆ ಜಗಕಾಗಿ
ಎಲ್ಲರಿಗು ತಲುಪಲಿ ನನ್ನ ಈ ಕವನ

ಶತ್ರುತ್ವ ತೊಲಗಲಿ
ಮಿತ್ರತ್ವ ಉಳಿಯಲಿ
ಭ್ರಾತೃತ್ವ ಬೆಳೆಯಲಿ
ಎಲ್ಲರಿಗು ದೊರಕಲಿ ನನ್ನ ಈ ಕವನ

ಸಹನೆಯ ಬಿತ್ತೋಣ
ಶಾಂತಿಯ ಬೆಳೆಯೋಣ
ಮಾನವತೆ ಉಳಿಸೋಣ
ಎಲ್ಲರಿಗು ಸೇರಲಿ ನನ್ನ ಈ ಕವನ

ಕೊಪ್ಪಳದ ಹೊಸ ಶಾಸನಗಳು

ಡಾ. ಹಂಪ. ನಾಗರಾಜಯ್ಯ
ಎಂ. ಜಿ. ಮಂಜುನಾಥ

ಇತ್ತೀಚೆಗೆ 1992 ರಲ್ಲಿ ರಾಯಚೂರು ಜಿಲ್ಲೆಯ ಕೊಪ್ಪಳದಲ್ಲಿನ ಕೋಟೆಯ ಒಂದು ಬುರುಜು ಕುಸಿದು ಬಿದ್ದಾಗ ಅಲ್ಲಿದ್ದ ಕೆಲವು ಶಾಸನಗಳು ಪತ್ತೆಯಾದವು. ಇವುಗಳ ಬಗ್ಗೆ ಮೊದಲು ಜನರ ಗಮನ ಸೆಳೆದವರು ಪ್ರೊ॥ ಅಲ್ಲಮಪ್ರಭು ಬೆಟ್ಟದೂರು ಅವರು 12–1–1993 ರ 'ಕನ್ನಡ ಪ್ರಭ' ದಿನಪತ್ರಿಕೆಯಲ್ಲಿ ಈ ಶಾಸನ ಗಳು ದೊರೆತ ಬಗ್ಗೆ ಲೇಖನ ಬರೆದರು. ತರುವಾಯ ಶ್ರೀ ಬಿ. ಆರ್. ತುಬಾಕಿ, ಬಿ. ಸಿ. ಪಾಟೀಲ, ಎಂ. ಎಂ. ಕಂಬಾಳಿಮಠ ಮುಂತಾದವರೊಡಗೂಡಿ ಇಲ್ಲಿಯ 19 ಶಾಸನಗಳ ಪಡಿಯಚ್ಚುಗಳನ್ನು ತೆಗೆದು ಅಧ್ಯಯನಕ್ಕಾಗಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕಳಿಸಿದರು. ಆದರೆ ಈ ಶಾಸನಗಳ ಪಾಠ ಪ್ರಕಟವಾಗಲಿಲ್ಲ. ಆನಂತರ 22–1–93ರ 'ಸಂಜೆವಾಣಿ' ಯಲ್ಲಿ ಡಾ॥ ರು. ಮ. ಷಡಕ್ಷರಯ್ಯ ಈ ಶಾಸನಗಳ ಬಗ್ಗೆ ಒಂದು ಲೇಖನ ಬರೆದರು. ಇದೇ ರೀತಿ ಕೊಪ್ಪಳದ ಸ್ಥಳೀಯ ಪತ್ರಕರ್ತರೂ ಸಹ ಈ ಹೊಸ ಶಾಸನಗಳ ಬಗ್ಗೆ ಸ್ಥಳೀಯ ಪತ್ರಿಕೆಯೊಂದರಲ್ಲಿ ಲೇಖನ ಬರೆದರು. ಶಾಸನ ತಜ್ಞರಾದ ಮೈಸೂರಿನ ಡಾ॥ ಎಸ್. ನಂಜುಂಡಸ್ವಾಮಿ ಯವರೂ ಈ ಶಾಸನಗಳ ಪಡಿಯಚ್ಚನ್ನು ತೆಗೆದುಕೊಂಡರು. ಆದರೆ ಈ ಶಾಸನಗಳ ಪಠ್ಯವನ್ನು ಮಾತ್ರ ಯಾರೂ ಪ್ರಕಟಿಸಲಿಲ್ಲ.

ತದನಂತರ ಕೊಪ್ಪಳದ ಆರು ಹೊಸ ಶಾಸನಗಳ ಬಗ್ಗೆ ಎಂ. ಜಿ. ಮಂಜುನಾಥ ಮತ್ತು ಡಿ. ಸ್ಮಿತಾ ರೆಡ್ಡಿ ಇವರಿಬ್ಬರೂ ಜಂಟಿಯಾಗಿ ಇತಿಹಾಸ ಅಕಾಡೆಮಿಯ ಸಂಡೂರು ಸಮ್ಮೇಳನದಲ್ಲಿ ಒಂದು ಸಂಶೋಧನ ಪ್ರಬಂಧ ಮಂಡಿಸಿದರು. ಅವರ ಆ ಸಂಪ್ರಬಂಧವು ಇತಿಹಾಸದರ್ಶನದ ಹತ್ತನೆಯ ಸಂಪುಟದಲ್ಲಿ ಪ್ರಕಟವಾಯಿತು ಇಷ್ಟಾದರೂ ಕೊಪ್ಪಳದ ಉಳಿದ ಯಾವ ಹೊಸ ಶಾಸನವೂ ಇದುವರೆಗೆ ಪ್ರಕಟ ವಾಗಲಿಲ್ಲ.

ಈ ಎಲ್ಲ ಹಿನ್ನೆಲೆಯನ್ನು ಮನಗಂಡು ಕೊಪ್ಪಳದಲ್ಲಿ ದೊರೆತ ಎಲ್ಲ ಹೊಸ ಶಾಸನಗಳ ಪಠ್ಯವನ್ನೂ ಅವುಗಳ ಐತಿಹಾಸಿಕ, ಸಾಂಸ್ಕೃತಿಕ, ಧಾರ್ಮಿಕ ಮಹತ್ವವನ್ನೂ ಕುರಿತು ಇದೇ ಮೊದಲಬಾರಿಗೆ ಇಲ್ಲಿ ಪ್ರಕಟಿಸುತ್ತಿದ್ದೇವೆ. ಎಂ. ಜಿ. ಮಂಜುನಾಥ

ಅವರು ಎರಡುಸಲ ಕೊಪ್ಪಳಕ್ಕೆ ಹೋಗಿ ಕ್ಷೇತ್ರಕಾರ್ಯ ಮಾಡಿ ಈ ಹೊಸ ಶಾಸನಗಳ ಪಡಿಯಚ್ಚುಗಳನ್ನು ತಂದು ಅವುಗಳ ಪಾಠವನ್ನು ಸಿದ್ಧಗೊಳಿಸಿದರು. ಈ ಕಾರ್ಯದಲ್ಲಿ ಪೂರ್ಣ ಸಹಕಾರ ನೀಡಿದ ವಿದ್ವಾಂಸರಾದ ಶ್ರೀ ಅಲ್ಲಮಪ್ರಭು ಬೆಟ್ಟದೂರು, ಶ್ರೀ ಬಿ. ಆರ್. ತುಬಾಕಿ, ಶ್ರೀ ಹೊ. ನ. ನೀಲಕಂಠೇಗೌಡ, ಶ್ರೀ ಆರ್. ಜಗದೀಶ್ ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ.

ಕೊಪ್ಪಳದಲ್ಲಿ ಈಗ ಹೊಸದಾಗಿ ಪತ್ತೆಯಾದ ಎಲ್ಲ ಶಾಸನಗಳೂ ಬಳಪದ ಕಲ್ಲಿನ ಸ್ತಂಭಗಳಮೇಲೆ ಕಂಡರಿಸಲ್ಪಟ್ಟಿವೆ. ಈ ಶಾಸನ ಸ್ತಂಭಗಳು ಸುಮಾರು ಒಂದೂವರೆ ಅಡಿ ಅಗಲ ಹಾಗೂ ಎರಡರಿಂದ ಎರಡೂವರೆ ಅಡಿ ಎತ್ತರವಾಗಿವೆ. ಇವುಗಳಲ್ಲಿನ ಲಿಪಿಯು ತುಂಬಾ ಸುಂದರವಾಗಿದ್ದು ಪಡಿಯಚ್ಚುಗಳ ಸಹಾಯವೇ ಇಲ್ಲದಂತೆ ಓದಬಹುದಾಗಿದೆ. ಇವುಗಳಲ್ಲಿ ಬಹುತೇಕ ಶಾಸನಗಳ ಭಾಷೆ ಕನ್ನಡ ವಾಗಿದ್ದರೂ ಕೆಲವು ಸಂಸ್ಕೃತ ಭಾಷೆಯವೂ ಇವೆ. ಈ ಶಾಸನಗಳಿರುವ ಸ್ತಂಭಗಳನ್ನು ತುಂಡರಿಸಿ ಕೋಟೆಯನ್ನು ಕಟ್ಟಲು ಬಳಸಿರುವುದರಿಂದ ಕೆಲವು ಶಾಸನಗಳ ಭಾಗಗಳು ತುಂಡಾಗಿ ಅಸಮಗ್ರವಾಗಿವೆ. ಈ ಶಾಸನಗಳಲ್ಲಿ ಬಹುಪಾಲು ಕಲ್ಯಾಣಿ ಚಾಲುಕ್ಯರ, ಒಂದೆರಡು ಗಂಗ ಮತ್ತು ರಾಷ್ಟ್ರಕೂಟರ ಕಾಲದವುಗಳಾಗಿರುವುದೊಂದು ವಿಶೇಷದ ಸಂಗತಿಯಾಗಿದೆ.

ಶಾಸನಗಳ ಶಿಲ್ಪ ; ಇಲ್ಲಿಯ ಕೆಲವು ಶಾಸನಗಳ ಮೇಲ್ಭಾಗದಲ್ಲಿ ಖಡ್ಗಾಸನ (ಕಾಯೋತ್ಸರ್ಗ) ಭಂಗಿಯಲ್ಲಿರುವ ತೀರ್ಥಂಕರರ ಶಿಲ್ಪಗಳಿವೆ. ಇನ್ನು ಕೆಲವು ಶಾಸನಗಳ ಮೇಲೆ ಕಾಯೋತ್ಸರ್ಗ ಭಂಗಿಯಲ್ಲಿರುವ ತೀರ್ಥಂಕರರ ಪಾದಗಳ ಬಳಿಯಲ್ಲಿ ಪರ್ಯಂಕಾಸನದಲ್ಲಿ (ಪಲ್ಯಂಕಾಸನ) ವ್ಯಾಖ್ಯಾನ ಮುದ್ರೆಯಲ್ಲಿ ಕುಳಿತು ಸಲ್ಲೇಖನ ವ್ರತ ಬೋಧಿಸುತ್ತಿರುವ ಹಾಗೂ ಕೈಗಳನ್ನು ಮುಗಿದು ಕುಳಿತಿರುವ ವ್ರತಧಾರಿಯ ಉಬ್ಬು ಶಿಲ್ಪಗಳಿವೆ.

ಜೈನ ಮುನಿ/ಕಂತಿ/ಶ್ರಾವಕ/ಶ್ರಾವಕಿಯರಿಗೆ ಅತ್ಯಂತ ಪವಿತ್ರ ತೀರ್ಥ ಸ್ಥಳವಾಗಿ ಪರಿಗಣಿಸಲ್ಪಟ್ಟ ಕೊಪ್ಪಳವು 'ಕೊಪಣಾಚಲ', ಮಹಾತೀರ್ಥ ಎಂದು ಸ್ತುತಿಸಲ್ಪಡು ತ್ತಿತ್ತು. ಹಲವಾರು ಮಂದಿ ಜೈನ ಶ್ರೇಷ್ಠರನ್ನು ಕೊಪಣಾಚಲಕ್ಕೆ ಹೋಲಿಸುತ್ತಿದ್ದ ಉದಾಹರಣೆಗಳಿವೆ. ರನ್ನ ಕವಿಯು 'ನೆಗಟ್ಟಿ' ಕೋಪಣಾಚಲದಂತೆ ಪವಿತ್ರಮತ್ತಿ ಮಬ್ಬೆಯ ಚರಿತಂ' ಎಂದು ಅತ್ತಿಮಬ್ಬೆಯನ್ನು ಕೋಪಣಾಚಲಕ್ಕೆ ಹೋಲಿಸಿರುವು ದನ್ನು ಈ ಸಂದರ್ಭದಲ್ಲಿ ನೆನೆಯಬಹುದು.

ಕೊಪ್ಪಳದಲ್ಲಿ ಅಶೋಕನ ಎರಡು ಲಘು ಪ್ರಸ್ತರಗಳು ಗವಿಮಠ ಮತ್ತು ಪಾಲ್ಕಿಗುಂಡು ಎಂಬಲ್ಲಿ ದೊರೆತಿರುವುದರಿಂದ ಕೊಪ್ಪಳವು ಕ್ರಿ. ಪೂ. 3ನೆಯ ಶತಮಾನದ ವೇಳೆಗೇ ಒಂದು ನಗರವಾಗಿತ್ತೆಂದು ಊಹಿಸಬಹುದು. ಕೊಪಣಪುರ ವರಾಧೀಶ್ವರರೆಂದು ಶಿಲಾಹಾರರ ಒಂದು ಶಾಖೆಯ ಅರಸರು ತಮ್ಮನ್ನು ಕರೆದು

ಕೊಂಡಿದ್ದಾರೆ. ಕೊಪ್ಪಳವನ್ನು ಶಾಸನಗಳಲ್ಲಿ ಹಾಗೂ ಸಾಹಿತ್ಯ ಕೃತಿಗಳಲ್ಲಿ ಕೊಪಣ, ಕುಪಿಣ, ಕುಪಿನ, ಆದಿತೀರ್ಥ, ವಿದಿತ ಮಹಾ ಕೊಪಣನಗರ ಮುಂತಾಗಿ ಬಣ್ಣಿಸ ಲಾಗಿದೆ. ಇಲ್ಲಿ ಒಂದಾನೊಂದು ಕಾಲದಲ್ಲಿ 722 ಬಸದಿಗಳು, 24 ಜೈನ ಸಂಘಗಳೂ ಇದ್ದವೆಂಬುದಾಗಿ ಐತಿಹ್ಯಗಳಿವೆ. ಕೊಪ್ಪಳವು ಯಾಪನೀಯ ಪಂಥದ ಒಂದು ಪ್ರಮುಖ ಕೇಂದ್ರವಾಗಿದ್ದುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

ಪ್ರಸ್ತುತ ಸಂಪ್ರಬಂಧದಲ್ಲಿ ಕೊಪ್ಪಳದಲ್ಲಿ ಸಿಕ್ಕಿದ ಹೊಸ ಶಾಸನಗಳ ಪೂರ್ಣ ಪಾಠವನ್ನು ಆಯಾ ಶಾಸನಗಳ ಒಕ್ಕಣೆ ಪಡೆದಿರುವ ಸಾಂಸ್ಕೃತಿಕ ಆಯಾಮದ ಮಹತ್ವವನ್ನು ಅನ್ಯಾನ್ಯ ಪೂರಕ ಶಾಸನಗಳ ಆಧಾರಗಳ ಬೆಳಕಿನಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ. ಆ ಮೂಲಕ ಈ ಶಾಸನಗಳನ್ನು ತಜ್ಞ ಚರಿತ್ರಕಾರರ ಸಂವಾದಗಳಿಗೆ ಬಾಗಿಲು ತೆರೆಯಲಾಗಿದೆ. ಮೊದಲು ಶಾಸನಪಾಠ, ಆಮೇಲೆ ಆಯಾ ಶಾಸನದಲ್ಲಿ ಉಲ್ಲೇಖಿತನಾದ ವ್ಯಕ್ತಿಗೆ ಸಂಬಂಧಿಸಿದ ಉಪಲಬ್ಧ ಮಾಹಿತಿಯ ಜಿಜ್ಞಾಸೆ ಈ ಕ್ರಮ ವನ್ನು ಪ್ರಸ್ತುತ ಸಂಪ್ರಬಂಧದಲ್ಲಿ ಅನುಸರಿಸಲಾಗಿದೆ.

ಸ್ತಂಭದ ಒಂದನೆಯ ಮುಖ

1.

1 ಸ್ವಸ್ತ್ಯತಿಶಯ ವಿಶೇಷ ಗುಣ
2 ಗಣಾಳಂಕೃತಂ ಸತ್ಯ ಶೌಚಸಂ
3 ಪನ್ನಂ ಕಲಿಕಾಲ ಕರ್ಣ್ನಾಶ್ರಿ
4 ತ ಕಲ್ಪವೃಕ್ಷಂ ಪತಿಕಾರ್ಯದಕ್ಷಂ
5 ಪಿರಿದಿತ್ತು ಮಱೆವಂ ನಯುವಂ
6 ಮೆಱೆವಂ ಪತಿಹಿತಾಂಜನೇಯಂ

2ನೆಯ ಮುಖ

7 ಗುರುಗಳ್ ಶ್ರೀ ನ[ಯನ]
8 ನ್ದಿ ಮುನೀಶ್ವರರುಂ ಅಪ್ರ[ತಿಮ]
9 ವಲ್ಲಭಂ ಪುತ್ರನತಿ ಸ್ಥಿರ
10 ಮತಿ ಗುಣದ ಬೆಡಂಗಂಧರೆ
11 ಯೊಳಿದೇಂ... ಕಬ್ಬೆಪು
12 ಣಾಧಿಕೆಯಾ॥ ಶ್ರೀಕೊಣ್ಡಕುನ್ದಾ
13 ನ್ವಯದ ದೇಸಿಗಗಣದ ನಯ
14 ನನ್ದಿಭಟ್ಟಾರಕರ ಗುಡ್ಡಂ ದಣ್ಡನಾ
15 ಯಕ ಗುಣದ ಬೆಡಂಗಂ [ನಾರಾ]

3ನೆಯ ಮುಖ

16 ಯಣಂ ನೀತಿ ಪಾರಾಯಣತ
17 ದೀಯಕ ಮಲ್ಲಂ ಕೀರ್ತಿಗೆನಲ್ಲಂ
18 ಗಣ್ಡ ಪ್ರಚಣ್ಡಂ ಪರಚ್ಛೇದಿಗಣ್ಡಂ
19 ಜಿನ ಪದಾಂಬುಜ ಭೃಂಗಂಶ್ರೀಮ
20 ದ್ದಣ್ಡನಾಯಕ ಗುಣದೀಪಾದೀಶಂ
21 ಶಕವರ್ಷ 953ನೆಯ ಪ್ರಜೋತ್ಪತ್ತಿ
22 ಸಂವತ್ಸರದ ಮಾಘ ಶುದ್ಧಂತದಿ
23 ಗೆ ಮಂಗಳವಾರದನ್ದು ವೀರಸ
24 ನ್ಯಸನ ವಿಧಾನದಿಂ ರತ್ನತ್ರಯಂ
25 ಗಳನಾರಾಧಿಸಿದಂ[1]

ಈ ಶಾಸನದ ತೇದಿ ಶಕ 953ನೆಯ ಪ್ರಜೋತ್ಪತ್ತಿ ಸಂವತ್ಸರದ ಮಾಘ ಶುದ್ಧ ತದಿಗೆ ಮಂಗಳವಾರವು ಕ್ರಿ.ಶ. 1031ರ ನವೆಂಬರ್ 30ಕ್ಕೆ ಸರಿಹೊಂದುತ್ತದೆ. ಸಮಸ್ತ ಪ್ರಶಸ್ತಿ ಪಾಠದೊಂದಿಗೆ ದಂಡನಾಯಕ ಗುಣದೀಪಾದೀಶನನ್ನು ಅವನ ಸಾಮಾಜಿಕ ಸ್ಥಾನದ ವ್ಯಕ್ತಿತ್ವ ಎದ್ದು ಕಾಣುವಂತೆ ಈ ಸ್ತಂಭಶಾಸನದ ಮೂರು ಮುಖಗಳ ಒಕ್ಕಣೆಯಲ್ಲಿ ಬಿಡಿಸಲಾಗಿದೆ. ಆತನು ನಯನನ್ದಿ ಮುನಿಯ (ಭಟಾರ) ಶಿಷ್ಯ (ಗುಡ್ಡ). ಗುಣದ ಬೆಡಂಗನಾದ ದಂಡನಾಯಕ ಗುಣದೀಪಾದೀಶನು ಜಿನ ಪದಾಂಬುಜ (ತೀರ್ಥಂಕರರ ಅಡಿದಾವರೆಗಳಲ್ಲಿ) ಭೃಂಗನೆನಿಸಿದ್ದನು. ಆ ಜಿನಭಕ್ತನು 30-11-1031ರಂದು ಮಂಗಳವಾರ ವೀರಸನ್ಯಸನ ವಿಧಾನದಿಂದ ರತ್ನತ್ರಯಗಳನ್ನು ಆರಾಧಿಸಿ ಮುಡಿಪಿದನು. ಆತನ ಗುರುಗಳಾದ ನಯನನ್ದಿ ಭಟ್ಟಾರಕರನ್ನು ಕುರಿತು ಅನ್ಯ ಶಾಸನಗಳಿವೆ : SII·XVIII·71 ಕ್ರಿ.ಶ. 1066. ಮೋಟೆಬೆನ್ನೂರು [ಧಾರವಾಡ ಜಿಲ್ಲೆ]. ಆನೆ ವೆಡಂಗ, ಇಜ್ಜಿವಬೆಂಡಗ, ಗುಣದ ಬೆಡಂಗ[ಗಿ], ಸಹಜ ವೆಡಂಗಿ, ಮುಂತಾದ ಬಿರುದುಗಳು ಚಾಳುಕ್ಯರ ಕಾಲದ ಶಾಸನಗಳಲ್ಲುಂಟು. ಈ ಶಾಸನವು ಚಾಲುಕ್ಯ ಚಕ್ರಿ ಜಗದೇಕಮಲ್ಲ ಜಯಸಿಂಹನ [1016-42] ಕಾಲದ್ದು. ಆದ್ದರಿಂದ ಪ್ರಸ್ತುತ ಶಾಸನದಲ್ಲಿನ ಗುಣದೀಪಾದೀಶನು ಚಾಲುಕ್ಯರ ಅಥವಾ ಅವರ ಮಾಂಡಲಿಕರಲ್ಲಿ ಯಾರಾದರೊಬ್ಬರ ದಂಡನಾಯಕನಾಗಿದ್ದಿರಬಹುದೆಂದು ಊಹಿಸ ಬಹುದು.

---

1 ಎಂ. ಜಿ. ಮಂಜುನಾಥ, ಡಿ. ಸೀತಾರೆಡ್ಡಿ, ಇತಿಹಾಸದರ್ಶನ. ಸಂ. 10 ಪುಟ 88

ಒಂದನೇ ಮುಖ

2. 1 ....
2 ಚನ್ದ್ರಮ ಜಿನಸಾಸನಾ
3 ಯು ಸ್ವಸ್ತಿ ಶಕವರ್ಷ
4 913 ವಿಕೃತ ಸಂ
5 ವತ್ಸರದ ಜೇಷ್ಟಬ
6 ಹುಳ ಏಕಾದಸಿ ಸು
7 ಕ್ರವಾರ ಕೊಣ್ಡಕೊ
8 ನ್ದಾನ್ವಯದ ಬಳಾತ್ಕಾರ
9 ಣದ ನೇಮಿಚನ್ದ್ರಭ
10 ಟಾರರ ಸಿಸಿತಿಯು
11 ರು ಜಕ್ಕಿಯಬ್ಬೆಕ
12 ನ್ತಿಯರು...
13 ಬ್ಬೆ ಕಂತಿಯರ ಮಗಳ್
14 ...ಬ್ಬೆ ಸನ್ಯಸನಂಗೆಯ್ದರ್

2ನೇ ಮುಖ

15 [ಇರ್ವರುಂ][1] ಕೂಡಿಮುಡಿ
16 ಪಿದರ್ ರೇವಕಬ್ಬೆಮೂ
17 ಜಗವನ್ದಿತೆ...
18 [ನಿಸಿಧಿ][1] ಕಲ್ಲಂನಿಱಿ
19 [ಸಿದಳ್][1]

ಈ ಶಾಸನದಲ್ಲಿನ ತೇದಿಯು ಕ್ರಿ.ಶ. 991ರ ಮೇ 12 ಶುಕ್ರವಾರಕ್ಕೆ ಸರಿಯಾಗಿ ಹೊಂದುತ್ತದೆ. ಈ ಶಾಸನದ ಪ್ರಾರಂಭದ ಒಂದು ಸಾಲು ಪೂರ್ತಿ ನಷ್ಟವಾಗಿದೆ ; ಇದು ಜೈನ ಶಾಸನಗಳ ಆರಂಭದಲ್ಲಿ ಬರುವ ಒಂದು ಜಿನಸ್ತುತಿ ಶ್ಲೋಕವಾಗಿದೆ. ನೇಮಿಚಂದ್ರ ಭಟಾರರ ಶಿಷ್ಯೆಯರಾದ ಇಬ್ಬರು ಕಂತಿಯರು ಸನ್ಯಸನಂಗೆಯ್ದು ಮುಡಿಪಿದ್ದಕ್ಕೆ ಮೂಜಗವನ್ದಿತೆಯಾದ ರೇವಕಬ್ಬೆಯು ನಿಸಿಧಿಕಲ್ಲನ್ನು ನಿರ್ಮಿಸಿದಳು ; ಪ್ರಾಯಃ ಈ ರೇವಕಬ್ಬೆ ಒಬ್ಬ ಶ್ರಾವಕಿಯೆಂದು ತೋರುತ್ತದೆ. ಮುಡಿಪಿದ ಇಬ್ಬರು ಕಂತಿಯರಲ್ಲಿ ಒಬ್ಬರ ಹೆಸರು ತ್ರುಟಿತವಾಗಿದೆ. ಮತ್ತೊಬ್ಬಾಕೆ ಜಕ್ಕಿಯಬ್ಬೆ

1. ಊಹಾಪಾಠಗಳು [ ]

ಕಂತಿಯರು. ಈ ಶಾಸನೋಕ್ತ ಕೊಣ್ಡಕುನ್ದಾನ್ವಯದ ಬಳಾತ್ಕಾರಗಣದ ನೇಮಿಚನ್ದ್ರ ಭಟಾರರು ಯಾರು ಎಂಬುದು ಚಿಂತನೀಯ. ಏಕೆಂದರೆ ಈ ಶಾಸನ ರಚನೆಯಾದ ಕಾಲವಮಾನದಲ್ಲಿ ಇದೇ ಹೆಸರಿನ ಇತರ ಆಚಾರ್ಯರೂ ಇದ್ದರು. ಚಾಮುಣ್ಡರಾಯನ ಗುರುಗಳು ಸಿದ್ಧಾಂತ ಚಕ್ರವರ್ತಿ ನೇಮಿಚಂದ್ರಾಚಾರ್ಯರು. ನೇಮಿಚಂದ್ರಃ ವಿಭೂತಿ ಸೈದ್ಧಾಂತಿಕ ಸಾರ್ವಭೌಮಃ ಚಾಮುಂಡರಾಜಾರ್ಚಿತ ಪಾದಪದ್ಮಃ (ನಗರ ತಾಲ್ಲೂಕಿನ ಬಸದಿಯೊಂದರ ಶಾಸನ, ಶಿವಮೊಗ್ಗ ಜಿಲ್ಲೆ) ರನ್ನಕವಿಯ ಅಜಿತ ಪುರಾಣದಲ್ಲಿ (ಕ್ರಿ. ಶ. 993) ಒಂದು ಪದ್ಯದಲ್ಲಿ (12–21) ಕಾನೂರ್ಗಣಕ್ಕೆ ಸೇರಿದ ನೇಮಿಚಂದ್ರಮುನಿಯ ಸ್ಮರಣೆಯಿದೆ: ಈ ಮುನಿಯ ಶಿಷ್ಯನಾದ ಅಯ್ಯಣನಲ್ಲಿ ದಾನಚಿಂತಾಮಣಿ ಅತ್ತಿಮಬ್ಬೆಯ ಮಗನಾದ ಅಣ್ಣಿಗದೇವನು ವಿದ್ಯೆ ಕಲಿತನು. ಆದರೆ ಕೊಪ್ಪಳದ ಈ ಹೊಸ ಶಾಸನೋಕ್ತ ನೇಮಿಚಂದ್ರ ಭಟಾರರು ಯಾರೆಂಬುದು ಚಿಂತನಾರ್ಹ ಸಂಗತಿಯಾಗಿದೆ.

3 (ಶಾಸನಸ್ತಂಭವನ್ನು ಎರಡು ತುಂಡುಗಳಾಗಿ ತುಂಡರಿಸಲಾಗಿದೆ)
(1ನೇ ತುಂಡಿನ ಮೊದಲ ಭಾಗದ ಕೆಲವು ಸಾಲು ತ್ರುಟಿತವಾಗಿವೆ)

1 ಗಣ್ಡಬೀತರಂಕಣ್ಣಾಗಳ್ ॥ ಮಾಣ್ಡಳಿಕಮಕುಟ
2 ಮಣಿಗಣಮಣ್ಡಿತಪಾಳಾಚನಣಭವಾಸಂಕಾ
3 ಶಗ್ಗಣ್ಣವಿಮುಕ್ತಾಚಾರ್ಯ್ಯರ್ಪ್ಪಣ್ಡಿತಜನಕಾಳಾ
4 ಕನಿಕಳರತಿಗಂಭೀರರ್ ॥............

ಎರಡನೇ ತುಂಡಿನ ಒಂದನೇ ಮುಖ

5 ....
6 ಗುಣಗಣ......ಗಳಸಾ
7 ಧಿಸಿ ಕೊಣ್ಡರ್ಪಣ್ಡಿತವಿಮುಕ್ತಿಲಕ್ಷ್ಮಿ
8 ಯುಂ ॥ ಸ್ವಸ್ತಿಸಕಕಾಳಾಕ್ರಾನ್ತಸಂವ
9 ತ್ಸರಂ ಪ್ರವರ್ತ್ತಿಸೆ ತಳ್ದಪೌಷ್ಯಾನ್ತರದಮಾಘ
10 ಬಹುಳ 9 ಬೃಹಸ್ಪತಿವಾರದಂದುಶ್ರೀಮ
11 ದ್ಗಣ್ಡವಿಮುಕ್ತ ಭಟ್ಟಾರಕರ್ಮುಕ್ತಿಯುಂ ಸಾಧಿ
12 ಸಿ ಕೊಣ್ಡರ್ ಶ್ರೀ

ಎರಡನೇ ತುಂಡಿನ ಎರಡನೇ ಮುಖ

13 ....
14 ಮಾಡಿಸಿದಳ್

15 ಬಳಗಾಜಿಗಣದ
16 ಗಣ್ಡವಿಮು
17 ಕ್ತ ದೇವರ್

ಈ ಶಾಸನದ ತೇದಿ ಕ್ರಿ.ಶ. 1038ರ ಫೆಬ್ರುವರಿ 2 ಗುರುವಾರಕ್ಕೆ ಹೊಂದಿಕೊಳ್ಳುತ್ತದೆ. ಶಾಸನದ ಮೊದಲ ತುಂಡಿನ ಮೊದಲ ನಾಲ್ಕು ಸಾಲುಗಳಲ್ಲಿ ಒಂದು ಸುಂದರವಾದ ಕಂದಪದ್ಯವಿದೆ. ಗಣ್ಡವಿಮುಕ್ತಾಚಾರ್ಯ ಮುನಿಯಪಾದಗಳಿಗೆ ಮಾಂಡಳಿಕರು ಎರಗುತ್ತಿದ್ದರು; ಪಂಡಿತ ಮಂಡಳಿ ಗೌರವಿಸುತ್ತಿತ್ತು. ಎಂಬ ವಿವರವು ಈ ಮುನಿ ಹೊಂದಿದ್ದ ಗಣ್ಯ ಸ್ಥಾನವನ್ನು ಸೂಚಿಸುತ್ತದೆ. ಪ್ರಾಯಃ 5 ರಿಂದ 8ನೆಯ ಸಾಲಿನಲ್ಲಿಯೂ ಒಂದು ಕಂದ ಪದ್ಯದ ರಚನೆಯಿದ್ದಂತಿದೆ. ಬಳಗಾಜಿಗಣದ ಗಣ್ಡವಿಮುಕ್ತ ದೇವರು (ವಿಮುಕ್ತ ಭಟ್ಟಾರಕರು ಪಣ್ಡಿತ ಮರಣವನ್ನು ಪಡೆದರು. ಮತ್ತು ಅವರ ಶಿಷ್ಯೆ ಈ ನಿಸಧಿಯನ್ನು ಮಾಡಿಸಿದಳೆಂಬುದು ಒಟ್ಟು ಶಾಸನದ ಸಾರಾಂಶ. 'ಮಾಡಿಸಿದಳ್' ಎಂದು ಮಧ್ಯಮ ಪುರುಷ ಸ್ತ್ರೀಲಿಂಗ ಏಕವಚನ ರೂಪ ದಲ್ಲಿರುವ ಹೇಳಿಕೆಯಿಂದ ಆ ಅಜ್ಞಾತ ಮಹಿಳೆಯು ಶ್ರಾವಕಿಯೆಂದು ಹೇಳಬಹುದು. ಈ ಶಿಷ್ಯೆಯ ಹೆಸರಿರುವ ಸಾಲು ತ್ರುಟಿತವಾಗಿದೆ.

ಗಣ್ಡ ವಿಮುಕ್ತ ಭಟ್ಟಾರಕರು (ವಿಮುಕ್ತ ದೇವರು) ಬಳಗಾಜಿಗಣಕ್ಕೆ ಸೇರಿದ ವರು ಶಾಸನಗಳಲ್ಲಿ ವಳಗಾಜಗಣ (EI.XV.23.AD.1071-72. ಗಾವರವಾಡ. (ಧಾರವಾಡ ಜಿಲ್ಲೆ/ಗದಗ ತಾಲ್ಲೂಕು) ಬಳಗಾಜಗಣ [EC.VII(1902) ಶಿಕಾರಿಪುರ 120. ಕ್ರಿ.ಶ. 1048 ಪು. 325] ಎಂಬ ಎರಡೂ ರೂಪಗಳುಂಟು; ಕೊಪ್ಪಳದ ಈ ಹೊಸ ಶಾಸನ ಮಾಲೆಯಲ್ಲಿ ಬಳಗಾಜಿದಂತೆ ಬಳಾತ್ಕಾರಗಣವ ಉಲ್ಲೇಖವೂ ಬಂದಿವೆ. (ಸಂಖ್ಯೆ 2 ಮತ್ತು 20) ಇವೆರಡೂ ಒಂದೇ ಮೂಲದ ರೂಪಗಳೆ ಎಂಬುದು ಚಿಂತನೀಯ.

ಗಣ್ಡವಿಮುಕ್ತದೇವ/ಭಟ್ಟಾರಕ ಎಂಬ ಹೆಸರಿನ ಆಚಾರ್ಯರು ಕೆಲವರು ಇದ್ದಾರೆ: 1 SII.XV.496 ಸು. 9ನೆಯ ಶ. ಐಹೊಳೆ (ಬಿಜಾಪುರ ಜಿಲ್ಲೆ/ಹುನಗುಂದ ತಾ.) ಪು. 348. 2 ARIE 1961-62 B-113. 1041 ಬೋಧನ (ಆಂಧ್ರ: ನಿಜಾಮಾಬಾದು ಜಿಲ್ಲೆ) 3 S.I.I. XI-i, 78 ಕ್ರಿ.ಶ. 1045 ಮುಗದ (ಧಾರವಾಡ ಜಿಲ್ಲೆ) 4 EI.XV. No. 23 P 337 ft. 1071-72 ಅಣ್ಣಿಗೇರಿ (ಧಾರವಾಡ ಜಿಲ್ಲೆ) 5 EI. XX. 47 ಕ್ರಿ.ಶ. 1074 ಲಕ್ಷ್ಮೇಶ್ವರ ಪು. 55 6 EC. VIII (1984) 134 (V ಅಗೂ 99) 1079-80. ಸುಳ ಗೋಡು ಸೋಮವಾರ ಹಾಸನ ಜಿಲ್ಲೆ/ಅರಕಲಗೂಡು ತಾಲ್ಲೂಕು) ಪು. 187.

ನೇಮಿಚಂದ್ರ ಕವಿಯ ನೇಮಿನಾಥ ಪುರಾಣದಲ್ಲಿಯೂ ಒಬ್ಬ ಗಂಡ ವಿಮುಕ್ತ ಮುನಿಯ ಪ್ರಸ್ತಾಪವಿದೆ. [1–92]. ಗಂಡ ವಿಮುಕ್ತರೆಂದರೆ ನಿರ್ಗ್ರಂಥರು, ದಿಗಂಬರ ಮುನಿ ಎಂದರ್ಥ. ಇವರೆಲ್ಲರೂ ಭಿನ್ನರು. ಇವರಲ್ಲಿ ಬೋದನ ಮತ್ತು ಮುಗದ ಶಾಸನೋಕ್ತರೂ ಮತ್ತು ಕೊಪ್ಪಳದ ಹೊಸ ಶಾಸನೋಕ್ತರೂ ಸಮಕಾಲೀನ ರಾದರೂ ಪ್ರತ್ಯೇಕ ಸ್ಥಳಗಳಲ್ಲಿ ಸಮಾಧಿ ಮರಣ ಪಡೆದ ಬೇರೆ ಬೇರೆ ಮುನಿಗಳು. ದಿವಾಕರಣಂದಿ ಮುನಿಯ ಶಿಷ್ಯರಾದ ಮಲಧಾರಿ ಮುನಿಗೂ ಗಂಡವಿಮುಕ್ತದೇವ ಎಂಬ ಹೆಸರಿದೆ [EC.II.135 (117) 1123 ಪು. 81] ಹೀಗೆ ಒಂದೇ ಹೆಸರಿನ ಹಲವು ಮುನಿಗಳು ಇರುವುದರಿಂದ ನಿರ್ಧಿಷ್ಟ ವ್ಯಕ್ತಿಯನ್ನು ಎಚ್ಚರದಿಂದ ಗುರುತಿಸ ಬೇಕಾಗುತ್ತದೆ.

4


1 ಸ್ವಸ್ತಿ ಸಕವರ್ಷ 939ನೆಯ ಕ್ರೋಧಿಸಂವ
2 ತ್ಸರದ ವೈಸಾಖ ಬಹುಳ ಅಷ್ಟಮಿಸು
3 ಕ್ರವಾರದಂದು ಕ್ರಾಣೂರ್ಗ್ಗಣದ ವಿಮ
4 ಳಚನ್ದ್ರ ಭಟಾರರ ಶಿಷ್ಯ ದೇವಣನ್ದಿ
5 ಭಟಾರರ್ಸುರ್ಗ್ಗಲೋಕಕ್ಕೆ ಪೋದರ್ತಮ್ಮ
6 ಗುರುಗಳ್ ದೇವಣನ್ದಿ ಭಟಾರರ್ಗ್ಗೆದೇಯ
7 ಕಬ್ಬೆ ಕನ್ತಿಯರ್ ನಿಸಿಧಿಗೆ ಮಾಡಿಸಿ
8 ದರ್ಪರೋಕ್ಷ ವಿನಯಂ



ದೇವಣನ್ದಿ ಭಟಾರಕರ ನಿಷಧಿ

ಈ ಶಾಸನದ ತೇದಿ ಕ್ರಿ.ಶ. 1025ರ ಏಪ್ರಿಲ್ 23 ಶುಕ್ರವಾರಕ್ಕೆ ಸರಿ

ಹೊಂದುತ್ತದೆ. ಕ್ರಾಣೂರ್ಗಣದ ವಿಮಳ ಚಂದ್ರ ಭಟ್ಟಾರಕರ ಶಿಷ್ಯ ದೇವಣನ್ದಿ ಭಟಾರರು ಸುರಲೋಕಕ್ಕೆ ಹೋದರು, ಅವರಶಿಷ್ಯೆ ದೇಯಕಬ್ಬೆ ಕನ್ತಿಯರು ನಿಸಿಧಿಗೆಯನ್ನು ಪರೋಕ್ಷ ವಿನಯವಾಗಿ ಮಾಡಿಸಿದರು. EC.VI. ಮೂಡಗೆರೆ 11. ಸು. 990 ಮತ್ತು EI.XV.23. 1071–72. ಗಾವರವಾಡದ ಶಾಸನೋಕ್ತ ವಿಮಳ ಚಂದ್ರ ಮುನಿಗೂ ಈ ಪ್ರಸ್ತುತ ಶಾಸನದಲ್ಲಿ ಬರುವ ವಿಮಳ ಚಂದ್ರ ಮುನಿಗೂ ನಾಮ ಸಾದೃಶ್ಯವೇ ಹೊರತು ಸಂಬಂಧವಿಲ್ಲ. ಹಾಗೆಯೇ S.I.I. XVIII. 71.1066. ಮೋಟೇಬೆನ್ನೂರು (ಧಾರವಾಡ ಜಿಲ್ಲೆ/ರಾಣಿಬೆನ್ನೂರು ತಾಲ್ಲೂಕು) ಪು. 65-67 ಶಾಸನದಲ್ಲಿ ಬರುವ ದೇವಣನ್ದಿ ಭಟ್ಟಾರಕರಿಗೂ ಈ ಕೊಪ್ಪಳದ ಶಾಸನೋಕ್ತ ದೇವಣ್ಣನ್ದಿ ಭಟಾರರಿಗೂ ಯಾವ ಸಂಬಂಧವೂ ಇಲ್ಲ. ಇಂತಹ ಪರೋಕ್ಷ ವಿನಯದ ಶಾಸನಗಳು ಹಲವಾರು ಸಿಗುತ್ತವೆ.



ರೇವಸೆಟ್ಟಿ. ನೊಳಂಬ ಸೆಟ್ಟಿ, ಮದುರಾನ್ತಕ ಸೆಟ್ಟಿಯವರ ನಿಷಧಿ ಶಾಸನ

5

ಒಂದನೇ ಮುಖ

1 ಸ್ವಸ್ತಿ ಶಕ 946 ನೆಯ ರಕ್ತಾಕ್ಷಿ ಸಂವ

2 ತ್ಸರದ ಪರಿನಿರ್ವ್ವಾಣ ಮಹಾಕಲ್ಯಾಣದೋಳ್ ಕೆಲ್ಲಂ

3 ಗೆಱೆಯ ರೇವಸೆಟ್ಟಿ ರತ್ನತ್ರಯಂಗಳಸಾಧಿಸಿದಂ ॥

4 ರೇವಸೆಟ್ಟಿಯ ಮಗಂ ನೊಳಂಬಸೆಟ್ಟಿ ರುಧಿರೋದ್ಗಾರಿ
5 ಸಂವತ್ಸರದೊಳ್ ಸಾಧಿಸಿದಂ॥ ಶ್ರೀ ನೊಳಂಬಸೆ
6 ಟ್ಟಿಯಳಿಯಂ ಮಧುರಾನ್ತಕ ಸೆಟ್ಟಿ ಪ್ರಮಾಥಿ
7 ಸಂವತ್ಸರದ ಪರಿನಿರ್ವ್ವಾಣ ಕಲ್ಯಾಣದನ್ತು
8 ಸಾಧಿಸಿದಂ ॥ ವಿನಯದ ನಿಧಿ ನಯದ
9 ತವರ್ಮ್ಮನೆ ಪುಣ್ಯದ ಪುಂಜಮುಜ್ಜ್ವಿನಾಗರ
10 ಮೀತಂ ಮನುಮಾರ್ಗದ ಮೊದಲಿಗನೆನೆ ಮನುಜಂ
11 ಬಣ್ಣಿಸದೊನೊಳನೆ ಮಧುರಾನ್ತಕನಂ ॥

ಎರಡನೇ ಮುಖ

12 ಶ್ರೀ ಮನು ನಿಭನ್‌ರೇವ ಸೆಟ್ಟಿಯರತ
13 ನೂಭವಂನೇಮ ಚನ್ದ್ರ ಸಿದ್ಧಾನ್ತ[ತ]ಪೋ
14 ಧನ ಚರಣಕಮಳ ಮಧುಕರ
15 ನ್ ವಿನಯದ ನಿಧಿ ನೊಳಂಬ ಸೆಟ್ಟಿ
16 ಯೆ ನೆಗಟ್ದಂ ॥ ವಿಶದಮತಿ.

....

ಸ್ತಂಭ ತುಂಡಾಗಿದೆ

ಈ ಶಾಸನದ ತೇದಿ ಶಕ 946 ರಕ್ತಾಕ್ಷಿ ಸಂವತ್ಸರವು ಕ್ರಿ.ಶ. 1024ಕ್ಕೂ, ರುದಿರೋದ್ಗಾರಿ ಸಂವತ್ಸರವು ಕ್ರಿ.ಶ. 1023ಕ್ಕೂ ಮತ್ತು ಪ್ರಮಾಥಿ ಸಂವತ್ಸರವು ಕ್ರಿ.ಶ. 1039ಕ್ಕೂ ಹೊಂದಿಕೆಯಾಗುತ್ತದೆ. ಈ ಶಾಸನವು ಕ್ರಿ.ಶ. 1039ರಲ್ಲಿ ರಚನೆಯಾಗಿ ಸ್ಥಾಪಿತವಾಗಿದೆಯೆಂದು ಹೇಳಬಹುದು.

ಇವರಲ್ಲಿ ಮೂರು ಬೇರೆ ಬೇರೆ ಕಾಲಗಳಲ್ಲಿ ಮೂವರು ಶ್ರಾವಕರು ರತ್ನತ್ರಯಗಳನ್ನು ಸಾಧಿಸಿದರು. ಅಂದರೆ ಮುಡಿಪಿದರು. ಅವರಲ್ಲಿ ಹಿರಿಯನಾದ ಕೆಲ್ಲಂಗೆಱೆಯ ರೇವಸೆಟ್ಟಿಯು ಕ್ರಿ.ಶ. 1024ರಲ್ಲಿ ಮುಡಿಪಿದರೆ, ಆತನ ಮಗನಾದ ನೊಳಂಬಸೆಟ್ಟಿಯು ಅದಕ್ಕಿಂತ ಒಂದು ವರ್ಷ ಮುಂಚಿತವಾಗಿ ಅಂದರೆ ಕ್ರಿ.ಶ. 1023ರಲ್ಲಿಯೇ ಮುಡಿಪಿದ್ದುದಾಗಿ ತಿಳಿದುಬರುತ್ತದೆ. ಅನಂತರ ಕ್ರಿ.ಶ. 1039ರಲ್ಲಿ ಈ ನೊಳಂಬಸೆಟ್ಟಿಯ ಅಳಿಯನಾದ ಮಧುರಾನ್ತಕ ಸೆಟ್ಟಿಯು ಮರಣ ಹೊಂದಿದನು. 8ನೆಯ ಸಾಲಿನಿಂದ 11ನೆಯ ಸಾಲಿನವರೆಗೆ ಈ ಪಂಕ್ತಿಗಳಲ್ಲಿ ಈ ಅಳಿಯನನ್ನು ಚಿತ್ರಿಸಿರುವ ಕಂದಪದ್ಯ ರಚಿತವಾಗಿದೆ. ರೇವಸೆಟ್ಟಿಯ ಮಗನಾದ ನೊಳಂಬಸೆಟ್ಟಿಯು ನೇಮಿಚಂದ್ರ ಸಿದ್ಧಾನ್ತ ತಪೋಧನರ ಅಡಿದಾವರೆಗಳ ದುಂಬಿ ಎನಿಸಿದ್ದನು. (ಸಾಲು 11 ರಿಂದ 16) ಮುಂದಿನ ಶಾಸನ ಭಾಗ ಮುಕ್ಕಾಗಿದೆ. ಕೊಪ್ಪಳದ ಈ ಹೊಸ ಶಾಸನಮಾಲೆಯಲ್ಲಿ

ಬರುವ ಎರಡನೆಯ ಸಂಖ್ಯೆಯ ಶಾಸನೋಕ್ತರಾದ ಬಳಾತ್ಕಾರಗಣದ ನೇಮಿಚನ್ದ್ರ ಭಟಾರರೂ, ಈ ಶಾಸನದಲ್ಲಿ ಉಲ್ಲೇಖಿರಾದ ನೇಮಿಚನ್ದ್ರ ಸಿದ್ಧಾನ್ತ ತಪೋಧನರೂ ಅಭಿನ್ನರಾಗಿರಬಹುದೆ ಎಂಬುದು ಆಲೋಚನೀಯ ಅಂಶ. ಆ ಶಾಸನದ ಕಾಲ ಕ್ರಿ.ಶ. 991 ; ಅವರ ಶಿಷ್ಯನಾದ ನೊಳಂಬಸೆಟ್ಟಿಯು ನಿಧನನಾದದ್ದು ಕ್ರಿ.ಶ. 1023, ಹೀಗಾಗಿ ಸ್ಥಳೈಕ್ಯ, ಕಾಲೈಕ್ಯವೂ ಒಂದು ಹೊಂದಾಣಿಕೆಗೆ ಹೆಜ್ಜೆಹಾಕಿವೆ.

ಮನುಸವಾನನಾದ (ಮನುನಿಭನ್) ರೇವಸೆಟ್ಟಿಯು ಕೆಲ್ಲಂಗೆಱೆಯವನೆಂಬುದು ವಿಚಾರಣೀಯ. ಪ್ರಾಚೀನವೂ, ಪ್ರಸಿದ್ಧವೂ ಆದ ಕೆಲ್ಲಂಗೆಱೆಯವನೆಂಬುದು ವಿಚಾರ ಣೀಯ. ಪ್ರಾಚೀನವೂ ಪ್ರಸಿದ್ಧವೂ ಆದ ಕೆಲ್ಲಂಗೆಱೆಯು ಆದಿತೀರ್ಥವೆನಿಸಿತ್ತು, ಗಂಗರಿಂದ ನಿರ್ಮಿತವಾಗಿತ್ತು, ಶಾಸನಗಳಲ್ಲಿ ಇದರ ಬಗ್ಗೆ ಸಾಕಷ್ಟು ಮಾಹಿತಿ ಉಪ ಲಬ್ಧವಿದೆ: EC.11,476 (345) 1159, ಪು. 289-90, ಅಬೇ, 71 (64) 1163 ಪು. 30 ; EC.IX (1990) ಬೇ. 388 (V ಬೇ 123) ಕ್ರಿ.ಶ. 954 ಬಸ್ತಿಹಳ್ಳಿ (ಹಾಸನ ಜಿಲ್ಲೆ/ಬೇಲೂರು ತಾಲ್ಲೂಕು) ಪು. 352 ; ಅದೇ. ಬೇ323 (XV. ಬೇ. 343). 13. ಶತಮಾನ. ಹಳೇಬೀಡು, ಪು. 306 ; ಅದೇ, ಬೇ 321 (XV. ಬೇ. 342). 1265. ಹಳೇಬೀಡು, ಪು. 299 ಇತ್ಯಾದಿ.

6. 1. ಶ್ರೀ ಬೂತುಗ ಪೆರ್ಮ್ಮಾಡಿಯ ಮಗಳ್
   2. [ಸುಗ್ಗಿಯಬ್ಬ] ರಸಿಯುರಾರಾಧನಾ ವಿಧಾನದಿಂ ರ
   3. ತ್ನತ್ರಯಮಂ ಸಾಧಿಸಿ ಕೊಣ್ಡು ದೇವಲೋಕಕ್ಕೆ ಪೋ
   4. ದಳ್ ಚಲದಂಕಗಾರ್ತ್ತಿ

ಇದು ಅತೇದಿ ಶಾಸನ. ಶಾಸನದ ಲಿಪಿ ಸ್ವರೂಪದೊಂದಿಗೆ ಅಂತರ ಬಾಹ್ಯ ಪ್ರಮಾಣ ಗಳನ್ನು ಅವಲಂಬಿಸಿ ಈ ಶಾಸನದ ಕಾಲ ಕ್ರಿ.ಶ. ಸು. 974 ಎಂದು ಪರಿಗಣಿಸುವುದರಲ್ಲಿ ಸಮಂಜಸತೆ–ಔಚಿತ್ಯ ಕಾಣುತ್ತದೆ. ಈ ಶಾಸನದಲ್ಲಿ ನಮೂದಿತನಾಗಿರುವ ಬೂತುಗ ಪೆರ್ಮಾಡಿಯು ಗಂಗರ ಪ್ರಸಿದ್ಧ ಪುರುಷನಾದ ಇಮ್ಮಡಿ ಬೂತುಗನಾಗಿದ್ದಾನೆ. [938-61] ಈತನನ್ನು ಕುರಿತು ಹಲವಾರು ಶಾಸನಗಳು ದೊರೆತಿವೆ. EI.11.P. 171-172 EC.VII (1979) ಮದ್ದೂರು. 42. ಕ್ರಿ.ಶ. 949-50; 511.XI-i. 36. ಕ್ರಿ.ಶ. 942. ರೋಣ, ಅದೇ 37. ಕ್ರಿ.ಶ. 946. ಕುರತ್ತಕುಂಟೆ, ಅದೇ, 38. 950. ಸರೇಗಲ್ ; EI. XV. 1071-72. ಗಾವರವಾಡ–ಇತ್ಯಾದಿ]. ಬೂತುಗನ ಮಗಳಾದ ಸುಗ್ಗಿಯಬ್ಬರಸಿಯು 'ಆರಾಧನಾ' ವಿಧಾನದಿಂದ ಸಮ್ಯಕ್ ದರ್ಶನ ಜ್ಞಾನ ಚಾರಿತ್ರ್ಯಗಳಾದ ರತ್ನತ್ರಯಗಳನ್ನು ಸಾಧಿಸಿ ದೇವಲೋಕಕ್ಕೆ ಹೋದ ಚಲದಂಕಗಾರ್ತಿ ಎನಿಸಿದಳು. ಗಂಗರಾಜ ಇಮ್ಮಡಿ ಬೂತುಗ ಪೆರ್ಮಾಡಿಯು ನಂತರ ಅಧಿಕಾರಕ್ಕೆ ಬಂದ ಗಂಗರಾಜ ಮೂರನೆಯ ಮಾರಸಿಂಹನ ಸೋದರಿಯಾದ ಈಕೆಯನ್ನು ಉಲ್ಲೇಖಿಸುವ

ಕೆಲವು ಶಾಸನಗಳಿವೆ. 1. EC.VIII (1902) ಸೊರಬ 233. ಕ್ರಿ.ಶ. 1018. ವುದ್ರಿ (ಉದ್ಧರೆ: ಶಿವಮೊಗ್ಗ ಜಿಲ್ಲೆ/ಸೊರಬ ತಾಲ್ಲೂಕು) ಪು. 96-98. 2. Sheik Ali, B. 'History of Western Gangas' (1976) ಪು. 326.3. ಪಂ. ಕೈಲಾಶ-ಚಂದ್ರಶಾಸ್ತ್ರಿ), 'ಜೈನಧರ್ಮ'. ಕನ್ನಡ ಅನುವಾದ: ಪಂ. ಕೆ. ಭುಜಬಲಿಶಾಸ್ತ್ರಿ ಮತ್ತು ಬಿ. ದೇವಕುಮಾರ ಜೈನ್ (1969) ಪು. 65. ಸುಗ್ಗಿಯಬ್ಬರಸಿಯು ಉದ್ಧರೆಯಲ್ಲಿ ಪಂಚಬಸದಿಯನ್ನು ಮಾಡಿಸಿದ್ದಳಲ್ಲದೆ ರಿಷಿಯರಿಗೂ ಅಜ್ಜಿಕೆಯರಿಗೂ ಆಹಾರದಾನ ಕೊಡುತ್ತಿದ್ದಳೆಂದೂ ಆಕೆಯು ಗುರು ಮಾಘನಂದಿ ಮುನಿಯೆಂದೂ ಮೇಲೆ ಹೆಸರಿಸಿದ ಉದ್ಧರೆಯ ಶಾಸನವು ನಿರೂಪಿಸುತ್ತದೆ. ಇದರಿಂದ ಪ್ರತೀತವಾಗುವಂತೆ ಸುಗ್ಗಿಯಬ್ಬರಸಿಯು ನಿಷ್ಠಾವಂತ ಶ್ರಾವಕಿಯಾಗಿದ್ದಳು.

ಬೂತುಗನ ಮಗನಾದ ಮಾರಸಿಂಹನು ಕ್ರಿ.ಶ. 974ರಲ್ಲಿ ಬಂಕಾಪುರದಲ್ಲಿ ಅಜಿತಸೇನಾಚಾರ್ಯರ ಸನಿಹದಲ್ಲಿ ಸಲ್ಲೇಖನ ವ್ರತ ಸ್ವೀಕರಿಸಿ ಆರಾಧನಾವಿಧಿಯಿಂದ ಮುಡಿಪಿದನು. [EC. 11. (1973), 64 (59). ಪು. 20-24. ಪ್ರಾಯಃ ತನ್ನ ಸೋದರನ ಸಾವಿನಿಂದ ನೊಂದ ಸುಗ್ಗಬ್ಬೆಯು ಕೂಡಾ ಬಂಕಾಪುರದ ಹತ್ತಿರದ ಕೊಪಣ ತೀರ್ಥದಲ್ಲಿ ಆರಾಧನಾ ವಿಧಾನದಿಂದ (ಸಲ್ಲೇಖನ ವ್ರತದಿಂದ) ಸಮಾಧಿ ಮರಣ ಪಡೆದಿರಬಹುದೆಂಬ ಸಂಗತಿ ವಿದಿತವಾಗುತ್ತದೆ. ನಾಲ್ಕು ಪುಟ್ಟ ಸಾಲುಗಳ ಈ ಶಾಸನಕ್ಕೆ ದೊಡ್ಡ ಐತಿಹಾಸಿಕ ಮಹತ್ವವಿದೆ. ರಾಷ್ಟ್ರಕೂಟರ ಸಾಮ್ರಾಜ್ಯ ಅಸ್ತಂಗತವಾದದ್ದರ ಪರಿಣಾಮಗಳು ಪ್ರತಿಷ್ಠಿತ ಗಂಗರ ಮರಣಗಳಿಗೆ ಕಾರಣ ವಾಯಿತೆಂಬುದಕ್ಕೆ ಈ ಶಾಸನವೂ ಪುರಾವೆಯಾಗಿದೆ. ಜತೆಗೆ ಇಲ್ಲಿಯೇ ಪ್ರಸ್ತಾಪಿಸ ಬಹುದಾದ ಇನ್ನೊಂದು ಅಂಶವೆಂದರೆ ಈ ಸುಗ್ಗಿಯಬ್ಬರಸಿಯ ಗುರುಗಳಾದ ಮಾಘನಂದಿ ಮುನಿಯೂ ಕೊಪ್ಪಳ ಹೊಸ ಶಾಸನಗಳಲ್ಲಿ ಬರುವ ಮಾಘನಂದಿಗೂ ಏನಾದರೂ ಸಂಬಂಧ ಕಲ್ಪಿಸಬೇಕೆ ಎಂಬುದು.

7.

1) ಶಕ ನೃಪಕಾಳಾತೀತ ಸಂವತ್ಸರ ಶತಂ
2) ಗಳ್ 920ನೆಯ ವಿಳಂಬಿ ಸಂವತ್ಸರದ ವೈಶಾಖ
3) ಮಾಸದ ಶುದ್ಧ ಪಞ್ಚಮಿಯುಂ ಬೆಳಗಾರದ
4) ಶ್ರೀಮಜ್ಜಾಕಬ್ಬರಸಿಯರ್ [ಸಮಾಧಿ],ವಿಧಿ[ಯಿಂ],
5) [ಮುಡಿಪಿದರ್][1]

---

1. [ ] ಊಹಾಪಾಠಗಳು

ಈ ಶಾಸನದ ತೇದಿ ಕ್ರಿ.ಶ. 998ರ ಏಪ್ರಿಲ್ 4 ಸೋಮವಾರಕ್ಕೆ ಸರಿಯಾಗಿ ಹೊಂದಿಕೊಳ್ಳುತ್ತದೆ. ಬೆಳಗಾರದ ಜಾಕಬ್ಬರಸಿಯು ಸಮಾಧಿವಿಧಿಯಿಂದ ಮುಡಿಪಿದ್ದು ಈ ಶಾಸನದ ಸಾರಾಂಶ. ಇಲ್ಲಿ ಹೇಳಿರುವ ಬೆಳಗಾರ ಎಂಬುದು ಸ್ಥಳವಾಚಿಯೊ ಕುಲವಾಚಿಯೊ ಜೈನಮುನಿಗಣವಾಚಿಯೊ ಎಂಬುದು ಪರಿಭಾವನಾರ್ಹವಾಗಿದೆ. ಸಾಮಾನ್ಯ ರೇಫದ ಪ್ರಯೋಗವೂ, ಬೆಳಗಾರದ ಎಂದು ಷಷ್ಠ್ಯಂತವೂ ಸೇರಿಕೊಂಡು ಇದು ಸ್ಥಳವಾಚಿಯೆಂದು ತಿಳಿಯುವಂತಾಗಿದೆ. ಬಳೆಗಾಜಿಕ್ಕೂ ಈ ಬೆಳಗಾರಕ್ಕೂ ಏನೂ ಸಂಬಂಧವಿಲ್ಲವೆಂದು ತೀರ್ಮಾನಿಸುವುದೂ ಕಷ್ಟ. ಈ ಶಾಸನದಲ್ಲಿ ಹೇಳಲಾಗಿರುವ ಜಾಕಬ್ಬರಸಿಯ ಮತ್ತಾವುದೇ ವಿವರಗಳೂ ಉಪಲಬ್ಧವಿಲ್ಲ.

8)

1) ಸ್ವಸ್ತಿ ಶಕವರ್ಷ 909
2) ನೆಯ ಸರ್ವ್ವಜಿತ್ಸಂವ
3) ತ್ಸರದಾಶ್ವಯುಜ ಬ
4) ಹುಳಪಷ್ಟಿಯೊಳ್ ಚಂ
5) ದಬ್ಬೆ ಸುಗತಿಯ ಸಾ
6) ಧಿಸಿದಳ್॥ ಕರಕ
7) ಮಳಂ ಲಲಾಟ
(ಸ್ತಂಭ ಇಲ್ಲಿಗೆ ತುಂಡಾಗಿದೆ)

ಈ ಶಾಸನದ ತೇದಿಯು ಕ್ರಿ.ಶ. 987 ಅಕ್ಟೋಬರ್ 16 ಸೋಮವಾರಕ್ಕೆ ಹೊಂದಿಕೊಳ್ಳುತ್ತದೆ. ಸಂಗತಿಯನ್ನು ಪಡೆದ ಚಂದಬ್ಬೆಯು ಕಂತಿಯಾಗಿರದೆ ಗೃಹಿಣಿ (ಶ್ರಾವಕಿ)ಯಾಗಿದ್ದಳೆಂದು ಕಾಣುತ್ತದೆ. ಆಕೆಯನ್ನು ಪರಿಚಯಿಸುವ ಉಳಿದ ಭಾಗ ತ್ರುಟಿತವಾಗಿದೆ. ಸಾಯುವ ಸಮಯದಲ್ಲಿ ಮುಗಿದ ಕೈಗಳನ್ನು ಹಣೆಯ ಹತ್ತಿರವಿಟ್ಟು ಸಮಾಧಾನಿಯಾಗಿದ್ದಳೆಂದು ತಿಳಿದುಬರುತ್ತದೆ.

9)

1 ಸ್ವಸ್ತಿ ಸಕವರ್ಷ 941ನೆಯ ಸಿದ್ಧಾರ್ತ್ಥಿ
2 ಸಂವತ್ಸರದ ಚೈತ್ರ ಶುದ್ಧ ಪಂಚ
3 ಮಿ ಬೃಹಸ್ಪತಿ ವಾರದನ್ದು ಶ್ರೀ
4 ಮನ್ಮೌನಿ ಭಟ್ಟಾರಕರಾರಾಧನಾ
5 ವಿಧಾನದಿಂ ರತ್ನತ್ರಯಂಗಳಂ ಸಾಧಿ
6 ಸಿದರ್॥ ಪರದರ ಬಲ್ಲಹನೆನಿಸಿದ
(ಮುಂದಿನ ಭಾಗ ತುಂಡಾಗಿದೆ)

ಈ ಶಾಸನದ ತೇದಿ ಕ್ರಿ.ಶ. 1020ರ ಮಾರ್ಚ್ 11ನೆಯ ಗುರುವಾರಕ್ಕೆ ತಾಳೆಣೆ ಆಗುತ್ತದೆ. ಮೌನಿಭಟ್ಟಾರಕರು ಆರಾಧನಾ ವಿಧಾನದಿಂದ ರತ್ನತ್ರಯಂಗಳನ್ನು ಸಾಧಿಸಿದರು, ಅಂದರೆ ನಿಧನರಾದರು. ವರ್ತಕರಲ್ಲಿ ಜ್ಞಾನಿಯೆನಿಸಿದ ಒಬ್ಬ ವ್ಯಕ್ತಿಯು (ಆತನ ಹೆಸರಿರುವ ಭಾಗವಷ್ಟು ನಷ್ಟವಾಗಿದೆ). ಪ್ರಾಯಃ ಈ ಭಟ್ಟಾರಕರ ನೆನಪಿಗೆ ಪರೋಕ್ಷ ವಿನಯುವಾಗಿ ಈ ನಿಸಿಧಿಯನ್ನು ಮಾಡಿಸಿದ್ದಿರಬೇಕು. ಮೌನಿ ಭಟ್ಟಾರಕ ಎಂಬ ಹೆಸರಿನ ಮುನಿಗಳು ಕೆಲವರಿದ್ದಾರೆಂಬುದಕ್ಕೆ ಶಾಸನಗಳಲ್ಲೇ ಆಧಾರಗಳು ಸಿಗುತ್ತವೆ: 1. IA. XII. P. 222. AD. 901-902. ಐಹೊಳೆ 2. KI. 1. No. 14. ಅತೇದಿಶಾಸನ. 3. EC. IX (1990). ಬೇ 388 (V. ಬೇ. 123) ಕ್ರಿ.ಶ. 954. ಬಸ್ತಿಹಳ್ಳಿ (ಇದರಲ್ಲಿ ಕೆಲ್ಲಂಗೆರೆಯ ಹಿರಿಯ ಮೋನಿ ಭಟಾರ ಮತ್ತು ಕಿಱಿಯ ಮೋನಿ ಭಟಾರ ಎಂಬ ಇಬ್ಬರ ಪರಿಚಯವಿದೆ). 4. SII. XX. 18. AD. 980 ಸೌಂದತ್ತಿ ಪು. 17. 5. EC.II ಶ್ರವಣ ಬೆಳಗೊಳ. 10(8). ಕ್ರಿ. ಶ. 8ನೇ ಶತಮಾನ, ಅಗಟಿಯ ಮೋನಿ ಗುರುಗಳ ಉಲ್ಲೇಖವಿದೆ. 6. ಅದೇ. 23(10). ಕ್ರಿ.ಶ. 7ನೆಯ ಶತಮಾನದ ಶಾಸನದಲ್ಲಿ ಅದೆಯಜ಼ನಾಡ ಚಿತ್ತೂರ ಮೋನಿ ಗುರವಡಿಗಳ ಉಲ್ಲೇಖವಿದೆ. ಇವರೆಲ್ಲರಿಗಿಂತ ಭಿನ್ನರಾದ ಪ್ರಸ್ತುತ ಶಾಸನದಲ್ಲಿ ಹೇಳಿರುವ ಮೌನಿಭಟ್ಟಾರಕರ ಮತ್ತಾವುವೇ ವಿವರ ಗಳು ತಿಳಿಯದಾಗಿದೆ.

ಇದೇ ಕೊಪ್ಪಳ ಶಾಸನ ಮಾಲೆಯಲ್ಲಿಯೂ ಒಬ್ಬ ಮೌನಿಯೋಗಿಗಳ ಉಲ್ಲೇಖ ವಿದೆ. ಹೆಚ್ಚಿನ ಮುಂದುವರಿದ ಚರ್ಚೆಗೆ ಅಲ್ಲಿ ಗಮನಿಸಬಹುದು.

10)

1 ಭದ್ರಮಸ್ತು ಜಿನಶಾಸನಸ್ಯ
2 ಸ್ವಸ್ತಿ ಸಕವರ್ಷ 893 ಪ್ರಜೋತ್ಪ
3 ತ್ತಿ ಸಂವತ್ಸರದ ಸುದ್ದ ತ್ರಯೋದಸಿ
4 ಸೋಮಾದಿತ್ಯವಾರದನ್ದು ಶ್ರೀಮನ್ಮಹಾ

ಈ ಶಾಸನದ ತೇದಿ ಕ್ರಿ.ಶ. 971ರ ಜುಲೈ 9 ಭಾನುವಾರಕ್ಕೆ ಸೇರಿದ್ದಾಗಿದೆ. ಈ ಅವಧಿಯು ಕರ್ನಾಟಕದ ರಾಜಕೀಯವು ಅಸ್ಥಿರವಾಗಿದ್ದು ರಾಷ್ಟ್ರಕೂಟರ ಇಳಿಗಾಲ ವಾಗಿತ್ತು. ಆಗ ಮುಮ್ಮಡಿ ಕೃಷ್ಣನ ತಮ್ಮನಾದ ಖೊಟ್ಟಿಗನು ಆಳುತ್ತಿದ್ದನು. [967-72] ತೈಲಪನು ತರ್ದವಾಡಿಯ ಮಹಾಸಾಮಂತನಾಗಿದ್ದನು. [SII.XI-i. 40. ಕ್ರಿ.ಶ. 965. ನರಸಲಗಿ (ಬಿಜಾಪುರಜಿಲ್ಲೆ/ಬಾಗೇವಾಡಿ ತಾಲ್ಲೂಕು)] ಈ ನಿಸಧಿ ಶಾಸನದ ಕೇಂದ್ರ ವ್ಯಕ್ತಿಯ ಹೆಸರಾಗಲಿ, ನಿಸಧಿಕಲ್ಲು ನಿಲ್ಲಿಸಿದ ವ್ಯಕ್ತಿಯ ಹೆಸರಾಗಲಿ

ಉಳಿದು ಬಂದಿಲ್ಲ. ಶಾಸನದ ಮುಂದಿನ ಉತ್ತರಾರ್ಧವಷ್ಟೂ ಪೂರ್ತಿ ನಷ್ಟವಾಗಿದೆ. ಶಾಸನದ ಆರಂಭವು ಜಿನ ಶಾಸನಕ್ಕೆ ಮಂಗಳಾಚರಣೆ ಮಾಡಿದೆ; ಈ ಮೊದಲನೆಯ ಸಾಲು ಯಾವ ಮೂಲಕ್ಕೆ ಸೇರಿದ್ದೆಂಬುದನ್ನು ಮುಂದಿನ ಶಾಸನವನ್ನು ಪರಿಶೀಲಿಸುವ ಹಂತದಲ್ಲಿ ವಿವರಿಸಲಾಗುವುದು. ಈ ಶಾಸನದ ನಾಲ್ಕನೆಯ ಪಾದಾಂತ್ಯವು 'ಶ್ರೀಮನ್ಮಹಾ' ಎಂದಿರುವುದರಿಂದ 'ಶ್ರೀಮನ್ಮಹಾ [ಮಂಡಳೇಶ್ವರ]' ಎಂದಿರ ಬಹುದಾದ ಸಾಧ್ಯತೆಯನ್ನು ಆಲೋಚಿಸಬಹುದು; ಆದರೆ ಆಗಲೂ ಆ ಮಹಾ ಮಂಡಲೇಶ್ವರನು ಯಾರೆಂಬುದು ಗೊತ್ತಾಗುವುದಿಲ್ಲ.

11)

1 ಭದ್ರ ಮಸ್ತು ಜಿನ
2 ಶಾಸನಾಯ ಸ್ವಸ್ತಿ
3 ಶಕವರ್ಷ 956 ನೆ
4 ಯ ಭಾವ ಸಂವತ್ಸ
5 ರದ ಫಾಲ್ಗುಣ ಸುದ್ಧ
6 ಪಾಡಿವಂ ಬೃಹಸ್ಪತಿ
7 [ವಾರದ]ನ್ದು ತಾ
(ಶಾಸನ ಸ್ತಂಭ ಇಲ್ಲಿಗೆ ತುಂಡಾಗಿದೆ.)

ಈ ಶಾಸನದ ತೇದಿ ಕ್ರಿ.ಶ. 1034–35 ರ ಫೆಬ್ರುವರಿ 13 ಗುರುವಾರಕ್ಕೆ ಸಮೀಕರಣ ಗೊಳ್ಳುತ್ತದೆ. (ಶಾಸನಕಾರ ವರ್ತಮಾನ ಸಂವತ್ಸರದ ಹೆಸರು ಹೇಳಿದ್ದಾನೆ). ಮೇಲಿನ 10ನೆಯ ಶಾಸನದಂತೆ ಈ ಶಾಸನದ ಕೇಂದ್ರ ವ್ಯಕ್ತಿಯ ಹೆಸರು ಸಂಪೂರ್ಣ ವಾಗಿ ಅನುಪಲಬ್ಧವಾಗಿದೆ. ಆದ್ದರಿಂದ ಇದು ಮುನಿಯ/ಶ್ರಾವಕನ/ಕಂತಿಯ ಶ್ರಾವಕಿಯ ಸಲ್ಲೇಖನವೆ ಎಂಬುದು ತಿಳಿಯುವುದಿಲ್ಲ. ಮೇಲಿನ ಶಾಸನದಂತೆಯೇ ಇಲ್ಲಿಯೂ ಆರಂಭದಲ್ಲಿ 'ಭದ್ರಮಸ್ತು ಜಿನ ಶಾಸನಾಯ' ಎಂದಿದೆ. ಇದು ಇನ್ನೂ ಕೆಲವು ಜೈನ ಶಾಸನಗಳಲ್ಲಿ ಇಷ್ಟು ಮಾತ್ರ ಬಳಕೆಯಾಗಿರುವುದುಂಟು ; EC.VI. ಚಿಕ್ಕ ಮಗಳೂರು 75. ಕಡವಂತಿ ಪು. 185.; 511. XI 94· 1059, ಡಂಬಳ ಪು, 89 ಇತ್ಯಾದಿ. ವಾಸ್ತವವಾಗಿ ಇದು ರಥೋದ್ಧತ ಶ್ಲೋಕದ ಆರಂಭ ಪಾದದ ಮೊದಲರ್ಧ ಭಾಗವಾಗಿದೆ. ಈ ಶ್ಲೋಕದ ಪೂರ್ತಿಪಾಠವನ್ನು ಒಂದು ಶಾಸನ ಉದಾಹರಿಸಿದೆ ;

ಭದ್ರಮಸ್ತು ಜಿನಶಾಸನಾಯ ಸಂಪದ್ಯತಾಂ ಪ್ರತಿ ವಿಧಾನ ಹೇತವೇ

ಅನ್ಯವಾದಿ ಮದಹಸ್ತಿ ಮಸ್ತಕ ಸ್ಫೋಟನಾಯ ಘಟನೇ ಪಟೀಯಸೇ ॥
[EC. VII (1989) ಮದ್ದೂರು 54. (111 ಮವ 31) ಕ್ರಿ.ಶ. 1117. ತಿಪ್ಪೂರು (ಮಂಡ್ಯ ಜಿಲ್ಲೆ/ಮದ್ದೂರು ತಾಲ್ಲೂಕು) ಪು. 282.]

12

1 … … ….
2 ನತ ಶೂರಂ ಚಲದಂಕಗಂ
3 ಡಂಮಹೀಪಂತತುತ್ರಕಂ
4 ಭಾಸಭೂಪತಿಗಂತತ್
5 ಪ್ರಿಯೆಕಾವಣಬ್ಬರಸಿ
6 ಗಂ ಸ್ತ್ರೀರತ್ನಮೆಂಬನ್ದದುಸ್ನ
7 ತಿಯಿಂದಂ ಬಲದೇವಿ ಪುಟ್ಟಿ
8 ಜಗದೇಕ ಚಾರುರಂಭಾ ಜಗದೇಕ
9 ಸತಿತಾಂ ಬೀರಲ ದೇವ ಪ
10 ತ್ನಿಯೆನಿಸಲ್ಕೆನೋನ್ತಳಲ್ಲ.



ಬಲದೇವಿಯ ನಿಷಧಿ ಶಾಸನ

11 ಳಿಂ॥ ಇನ್ನೆನೆ ಧಾತ್ರಿಯೊ
12 ಳ್ ನೆಗಟ್ದಿರಂ ಬಲದೇವಿ
13 ವಿಶಾಲ ನೇತ್ರೆಯಖಾಕಾನ್ತೆ
14 ಯೆನಿಪ್ಪಿನಂಶ್ರುತದೇವಿ
15 ಚಾಗಿಬಟಿಕ್ಕಮದ...
16 [ಸನ್ಯಸ]ನ ವಿಧಾನದೊಳೆ ಜಿನಪ
17 ದದ್ವಯುಂಗಳಂ ನೆನೆಯುುತ್ತ
18 ವಿ. ಪೂರಿತಳ್ ಕಂಪೆನಿ
19 ಸಿ. ಸುರೋತ್ತಮೆಯಾಗಿ
20 ಪುಟ್ಟಿದಳ್

ಸ್ಥಂಭದ ಎರಡನೆಯ ಮುಖ

21 ಸ್ವಸ್ತಿ ಸಕವರ್ಷ 909 ನೆ
22 ಯ ಸರ್ವ್ವ ಜಿತ್ಸಂವತ್ಸರದ
23 ಆಶ್ವಯುಜ ಬಹುಳ ಪಞ್ಚಮಿ
24 ಆದಿತ್ಯವಾರದಂದು ಬಲದೇ
25 ವಿ ಸುಗತಿಯಂ ಸಾಧಿಸಿದಳ್.

ಈ ಶಾಸನದ ತೇದಿ ಕ್ರಿ. ಶ. 987ರ ಅಕ್ಟೋಬರ್ 15 ಭಾನುವಾರಕ್ಕೆ ಹೊಂದಿಕೊಳ್ಳು ತ್ತದೆ. ಶಾಸನ ಸ್ತಂಭದ ಮೊದಲ ಭಾಗ ತುಂಡಾಗಿರುವುದರಿಂದ ಶಾಸನ ಪಾಠದ ಮೊದಲ ಕೆಲವು ಸಾಲುಗಳು ಲುಪ್ತವಾಗಿವೆ. ಈ ಶಾಸನದಲ್ಲಿ ಉಲ್ಲೇಖಿತನಾದ ಚಲದಂಕಗಂಡ ಮಹೀಪ (ರಾಜ)ನು ಯಾರೋ ತಿಳಿಯುವುದಿಲ್ಲ. ಆ ಮಹೀಪನ ಮಗ ಭಾಸ ಭೂಪತಿಯೂ, ಆತನ ಪ್ರಿಯೆ ಕಾವಣಬ್ಬರಸಿಯರ ಬಗ್ಗೆಯೂ ಮಾಹಿತಿಗಳು ಉಪಲಬ್ಧವಿಲ್ಲ. ಪ್ರಸ್ತುತ ಶಾಸನದ ಅವಧಿಯಲ್ಲಿ ಚಾಲುಕ್ಯ ಚಕ್ರವರ್ತಿ ಇಮ್ಮಡಿ ತೈಲಪನು (ಕ್ರಿ. ಶ. 973-997) ಅಧಿಕಾರದಲ್ಲಿದ್ದನು. ಪ್ರಾಯಃ ಪ್ರಸ್ತುತ ಶಾಸನೋಕ್ತರುದ ಭಾಸ ಭೂಪತಿ ಹಾಗೂ ಆತನ ತಂದೆ ತಂದೆ ಚಲದಂಕಗಂಡ ಇಮ್ಮಡಿ ತೈಲಪನ ಮಾಂಡಳಿಕರಲ್ಲಿ ಒಬ್ಬರಾಗಿದ್ದರಬಹುದೆಂದು ಊಹಿಸಬಹುದು. ಆದರೆ ಅವರು ಯಾವ ಪ್ರದೇಶದ ಅಧಿಕಾರಿಗಳಾಗಿದ್ದರೆಂಬುದು ಖಚಿತವಾಗುವುದಿಲ್ಲ. ಭಾಸ – ಕಾವಣಬ್ಬರಸಿಯರ ಮಗಳಾದ ಬಲದೇವಿಯು ಶ್ರುತದೇವಿ, ತ್ಯಾಗಿ ಸ್ತ್ರೀರತ್ನ ಎನಿಸಿ ಸನ್ಯಸನ ವಿಧಾನದಿಂದ ಜಿನರ ಚರಣ ಸ್ಮರಣೆ ಯಿಂದ ಮುಡಿಪಿದಳು. ಆಕೆಯ ಪತಿಯಾದ ಬೀರಲದೇವನ ವಿಚಾರವಾಗಿಯೂ ಮತ್ತಾವುದೇ ವಿವರಗಳು ದೊರೆತಿಲ್ಲ,

13

ಶಾಸನ ಸ್ತಂಭದ ಮೇಲ್ಭಾಗ ತುಂಡಾಗಿದೆ.


1 ಅಕಳಂಕ ಮುನಿ...
2 ಮಾಮದನ ದರ್ಪ್ಪಹರಃ॥ ವಿಭುದೈಕಮಿ
3 ತ್ರನಾಮೋದ್ದಾಮಃ ಶ್ರುತಸಾಗರಸ್ಯಗುರು
4 ತಾಪಸಃ। ಸಮ್ಯಕ್ಸಮಾಧಿ ವಿಧಿನಾಸಾಧ
5 ಯದುತ್ತಮಾರ್ತ್ಥಗತಿಃ॥ ಶಕ ಕಾಳಂ ಕ್ಷಯಮಕ್ಷೀರೇಂ
6 ದ್ರಮೇಣೇತಕ್ಕಾಧಾರ ಮಾಯ್ತುಬ್ದ ಮನ್ತ್ರೇಕರಂ ಸಾರ್ವ್ವರಿ ಜೇಷ್ಠ
7 ಮಾಸಮಸಿತಂ ಪಕ್ಷಂ ಮಹಾತ್ಮಾನ್ತ ಶಿತಕರಧಾರಮೆನರ್ಕ್ಕ
8 ಬಾರಸಿದಿಸಂ ನಕ್ಷಮಾರಯ್ದೊ ಳುತ್ತುಸಕಂ ಪೊಟ್ಟು ದಸು
9 ತ್ತುಸಕಂ ಮೃಗಶಿರಂ ಯೋಗಂ ಧ್ರುವಂ ಸಧ್ರುವಂ ॥ ಶುಭಕರಣಂ
10 ತೇ ತಿಳಮಿದು ವಿಭವದಿಣನ್ದಾಗಿ ಬಸ್ತು ನಿನ್ದ ನ ಮಳಶ್ರೀಭು
11 ವನ ಚನ್ದ್ರಮುನೀನ್ದ್ರ ಶುಭಗಕವೀನ್ದ್ರ ಸ್ಸಮುಕ್ತಿಯಂ
12 ಸಾಧಿಸಿದರ್ ॥



ಅಕಳಂಕ ಮುನಿ, ಶ್ರುತಸಾಗರ ಮುನಿ, ಭುವನ ಚಂದ್ರ ಮುನಿಗಳ ನಿಷಧಿ

ಈ ಶಾಸನದ ತೇದಿಶಾರ್ವರಿ ಸಂವತ್ಸರ ಜೇಷ್ಠಮಾಸ ಕೃಷ್ಣಪಕ್ಷ ಅರ್ಕವಾರ (ಭಾನುವಾರ) ಇದು ಕ್ರಿ.ಶ. 934 ಭಾನುವಾರಕ್ಕೆ ಸರಿಹೊಂದುತ್ತದೆ. ಅಕಳಂಕ ಮುನಿ, ಶ್ರುತಸಾಗರ ಮುನಿ, ಭುವನ ಚಂದ್ರಮುನಿ ಇವರು ಸಮಾಧಿವಿಧಿ ವಿಧಾನ

ದಿಂದ ಉತ್ತಮಾರ್ಥಗತಿಯಾದ ಮುಕ್ತಿಯನ್ನು ಸಾಧಿಸಿದರೆಂಬುದು ಈ ಶಾಸನದ ತಿರುಳು. 'ಅಕಳಂಕ'ರೆಂಬ ಹಲವಾರು ಮುನಿಗಳಿದ್ದುದನ್ನು ಶಾಸನಗಳು ದಾಖಲಿಸಿವೆ. ಹನ್ನೊಂದನೆಯ ಶತಮಾನಕ್ಕೆ ಸೇರಿದ ಶಾಸನವೊಂದರಲ್ಲಿ ಅಕಳಂಕ ಪಣ್ಡಿತ ಮುನಿಯ ಹೆಸರಷ್ಟೇ ಇದೆ [EC II 46(43) ಪು. 16] ವಾದೀಭಸಿಂಹ ಅಕಳಂಕದೇವ ಮುನಿಯಂತೂ ಪ್ರಖ್ಯಾತರಿದ್ದಾರೆ. [ಅದೇ. 569 (ಎಕV.ಚ.ಪ. 149) ಕ್ರಿ.ಶ. 1124 ಪು. 353] ಕಲ್ಕೇರಿಯ [ಧಾರವಾಡ ಜಿಲ್ಲೆ/ಮುಂಡರಗಿ ತಾಲ್ಲೂಕು] ಶಾಸನವೊಂದರಲ್ಲಿ ಒಬ್ಬ ಅಕಲಂಕ ಮುನಿಯ ಪ್ರಸ್ತಾಪವಿದೆ [ARSIE 1927-28 APP E.No. 51 ತೇದಿ ?] ಇವು ಯಾವುವೂ ಪ್ರಸ್ತುತ ಕೊಪ್ಪಳ ಶಾಸನದಲ್ಲಿ ಬರುವ ಅಕಳಂಕ ಮುನಿಗೆ ಸಂಬಂಧಪಟ್ಟಿಲ್ಲ. ಪ್ರಸ್ತುತ ಶಾಸನದ ಶ್ರುತಸಾಗರ ಮುನಿಗಳ ಬಗ್ಗೆ ಅಥವಾ ಭುವನ ಚಂದ್ರ ಮುನಿಗಳ ಬಗ್ಗೆಯೂ ಮತ್ತಾವುದೇ ವಿವರಗಳು ಉಪಲಬ್ಧವಿಲ್ಲ. ಶ್ರುತಸಾಗರರೆಂಬ ಮತ್ತೊಬ್ಬ ಮುನಿಗಳ ಉಲ್ಲೇಖ ಶ್ರವಣಬೆಳಗೊಳದ ಒಂದು ಶಾಸನದಲ್ಲಿ ದೊರೆಯುತ್ತದೆ. [EC II 421 (312) ಪು. 260] ಕ್ರಿ.ಶ. 1680] ಶ್ರವಣ ಬೆಳಗೊಳದ ಶಾಸನದಲ್ಲಿನ ಶ್ರುತಸಾಗರರಿಗೂ ಪ್ರಸ್ತುತ ಕೊಪ್ಪಳದ ಶಾಸನದ ಶ್ರುತಸಾಗರರಿಗೂ ಸಂಬಂಧವಿಲ್ಲ. ಇಬ್ಬರ ಮಧ್ಯೆ ಸುಮಾರು 700 ವರ್ಷಗಳ ವ್ಯತ್ಯಾಸವಿದೆ.



ಚಂಗಬ್ಬೆಯ ನಿಷಧಿ ಶಾಸನ

14

ಶಾಸನ ಸ್ತಂಭದ ಮೊದಲಭಾಗ ತುಂಡಾಗಿದೆ

1 ಗುರುಗಳ್ ಶ್ರೀ ಮಲಧಾರಿದೇ ವರಧಿಪಂರಾಯಂ
2 ಮಗಂಮಾಚಲಂಪರಮಶ್ರೀ ಜಿನರಾಜಧರ್ಮ್ಮಮ

3 ನಱಿವಿಂಕೈಕೊಣ್ಡಧರ್ಮ್ಮಂ ನಿರಂತರದಾನಂನಡೆದತ್ತುಶೀ
4 ಳಗುಣಮುಂಕೊಣ್ಡಾಡಿದಳನೂನ ಪೆಸರದುಂ ಜನ್ಮ
5 ದೊಳಂ ಕೃತಾರ್ತ್ಥ ಮೆನಿಸಲಾ ಚಂಗುಬೆಗೆನ್ನಿರದೆ
6 ...ರುಚಿನಿನಗೆ ದಿವದೊಳ್‌ದಾನಂಗೊಳ್ವನ್ನರಿಲ್ಲ ಚಂಗ[ಂಬೆ]

ಇದು ಅತೇದಿಶಾಸನ. ಶಾಸನದ ಲಿಪಿ ಸ್ವರೂಪವನ್ನು ನೋಡಿ ಇದು ಸು. 12ನೆಯ ಶತಮಾನದ ಆರಂಭ ಕಾಲದ್ದೆಂದು ನಿರ್ಣಯಿಸಬಹುದು. ಆರು ಸಾಲುಗಳಷ್ಟು ಮಾತ್ರ ಉಳಿದು ಬಂದಿರುವ ಈ ಶಾಸನದ ಒಕ್ಕಣೆಯು ಸ್ವಲ್ಪ ಅಶುದ್ಧವಾಗಿದ್ದರೂ ಇದೊಂದು ಮತ್ತೇಭ ವಿಕ್ರೀಡಿತ ವೃತ್ತವೆಂದು ತೋರುತ್ತದೆ. ಮಲಧಾರಿದೇವ ಮುನಿಯ ಶ್ರಾವಕಿ ಶಿಷ್ಯೆಯಾದ ಚಂಗಬ್ಬೆಯ ಸಾವನ್ನು ಈ ಶಾಸನ ನಿರೂಪಿಸಿದೆ. ಚಂಗಬ್ಬೆಯ ಶೀಲಗುಣ, ಜಿನಧರ್ಮಾನುರಕ್ತಿಯನ್ನು ಇಲ್ಲಿ ಕಿರಿದರಲ್ಲೇ ಕಂಡರಿಸ ಲಾಗಿದೆ. ಆಕೆಯ ಪತಿರಾಯನೂ, ಮಗ ಮಾಚಲನೂ ಯಾರೆಂಬುದು ತಿಳಿಯುವು ದಿಲ್ಲ. ಚಂಗಬ್ಬೆಯ ಗುರುಗಳಾದ ಮಲಧಾರಿ ದೇವರು ಕೂಡ ಯಾರೆಂಬುದು ಸರಿಯಾಗಿ ಗ್ರಹಿಕೆಯಾಗುವುದಿಲ್ಲ. ಇದೇ ಕೊಪ್ಪಳದ ಹೊಸ ಶಾಸನ ಮಾಲೆಯಲ್ಲಿ ಬರುವ ಬೇರೊಂದು ಶಾಸನದಲ್ಲಿಯೂ ಒಬ್ಬ ಮಲಧಾರಿದೇವನ ಉಲ್ಲೇಖವಿದೆ. ಅಲ್ಲದೆ ಮಲಧಾರಿದೇವರ ಹೆಸರಿನ ಮುನಿಗಳು ಹಲವರು ಬೇರೆ ಬೇರೆ ಪರಿಸರ ಮತ್ತು ಕಾಲಮಾನದಲ್ಲಿ ಆಗಿ ಹೋಗಿದ್ದಾರೆ. ಕರ್ಣಪಾರ್ಯನ ನೇಮಿನಾಥ ಪುರಾಣ (1–12) ಹಾಗೂ ನೇಮಿಚಂದ್ರನ ನೇಮಿನಾಥ ಪುರಾಣ (1-87 ರಿಂದ 91) ಕಾವ್ಯ ಗಳಲ್ಲೂ, ಶಾಸನಗಳಲ್ಲೂ [EC.II. 79 (69) 12 ಶತಮಾನ: SII. XVIII. 293 ಕ್ರಿ.ಶ. 1162 ಗುತ್ತಲ್ (ಧಾರವಾಡ ಜಿಲ್ಲೆ/ಹಾವೇರಿ ತಾಲ್ಲೂಕು) ಇತ್ಯಾದಿ] ಮಲಧಾರಿ ಮುನಿಯ ವರ್ಣನೆ ಬಂದಿದೆ. ಬಹುಶಃ ಇಲ್ಲಿ ಪ್ರಸ್ತಾಪಿತನಾಗಿರುವ ಮಲಧಾರಿ ಮುನಿಯೂ, ಶ್ರವಣಬೆಳಗೊಳ 79 (69ನೆಯ) ಶಾಸನೋಕ್ತ ಮಲಧಾರಿ ಮುನಿಯೂ ಒಬ್ಬರೇ ಆಗಿರಬಹುದಾದ ಸಾಧ್ಯತೆಯನ್ನು ಪರಿಶೀಲಿಸಬಹುದು; ಆದರೆ ಖಚಿತವಾಗಿ ಅಭಿನ್ನತೆಯನ್ನು ಸ್ಥಾಪಿಸಲು ಇನ್ನೂ ಬಲವಾದ ಆಧಾರಗಳು ಬೇಕು.

15

ಶಾಸನ ಸ್ತಂಭದ ಮೊದಲ ಭಾಗ ತುಂಡಾಗಿದೆ

1 ಮಿಟ್ಟಿನ್ವರ್ತ್ತಿನೇಮಿ [ಚಂದ್ರವಿಮು]
2 ಳ ಯೋಗಿ ಮುನಿಪಂಗಕ್ಕುಂ ಪೆಜಿರ್ಗ್ಗಕ್ಕುಮೋ
3 ಪುಳುಕಿತಗಜಪುಟ್ಟವಿಪ್ರುಳಸಕ್ಕೆ ಕೇಸರಿ
4 ಗಳೆನಿಸಿದುತ್ತಮಚರಿತಂ । ಜಿನಸಮಯದೀಪ
5 ಕರ್ಪ್ಪರ್ದಮ್ಮನನ್ನಿಸಿದ್ದಾನ್ತದೇವರವರಯೀ ಶಿಷ್ಯರ್ ।

6 ನ್ದ್ರಶ್ರೀಪಿಗು. ನಮೆಯ್ದೆ ಜಿನಸಿಳಾನ್ತ್ವಮಂತಿಳಿ
7 ಪೆಲಿನ್ದ್ರನನ್ದಿ ಸಿದ್ಧಾನ್ತದೇವರೆನೆ ಪದ್ಮನನ್ದಿ ಸಿದ್ಧಾ
8 ನ್ತದೇವರಜಿವಂನೆಗಟ್ಟಿದರ್ । ಇನ್ನುನೋ
9 ನ್ತ ರಿನ್ನು ಸಕಳಾಗಮ ಕೋವಿದರಿನ್ತಶೇಷಸಿದ್ಧಾನ್ತಸಮುನ್ನ
10 ತರಿನ್ತತಿ ವಿಚಿತ್ರ ಪವಿತ್ರ ಚರಿತ್ರ ಪಾತ್ರರಾರಿ
11 ನ್ನು ಪೆಜಿತ್ರ್ತಪೋನಿಧಿಗಳೆಂಬ ಪೊಗಟ್ತೆಯದೇಂಪ
12 ದ್ಮನಂದಿಸಿದ್ಧಾನ್ತ ಮುನೀಂದ್ರರಿಂ ಬೆಳಗಿತಪ್ರತಿ
13 ಶಾಸನಂ ಜೈನಶಾಸನಂ ॥

ಇದೊಂದು ಅತೇದಿಶಾಸನ ಪ್ರಾರಂಭದ ಪಾಠ ನಷ್ಟವಾಗಿದೆ. ಜಿನಸಮಯ ದೀಪಕರೆನಿಸಿದ ಪದ್ಮನನ್ದಿ ಸಿದ್ಧಾನ್ತದೇವಮುನಿಯ ಉನ್ನತ ವ್ಯಕ್ತಿತ್ವ ಮಹಿಮೆಯನ್ನು ಈ ಶಾಸನ ಬಿಡಿಸಿಟ್ಟಿದೆ. ಪವಿತ್ರ ಚರಿತ್ರರಾದ ತಪೋ ನಿಧಿಗಳೆಂಬ ಹೊಗಳಿಕೆಯಿರುವ ಇವರಂತಹ ಸಕಳಾಗಮಕೋವಿದರು ಹೆರರು ಯಾರಿದ್ದಾರೆಂದು ಶಾಸನಕಾರ ಪ್ರಶ್ನಿಸಿದ್ದಾನೆ. ಜೈನ ಶಾಸನವನ್ನು ಬೆಳಗಿದ ಈ ಪದ್ಮನಂದಿ ಸಿದ್ಧಾನ್ತದೇವರ ಶಿಷ್ಯ ಇನ್ದ್ರನನ್ದಿ ಸಿದ್ಧಾನ್ತದೇವರ ಹೆಸರೂ ಇದರಲ್ಲಿದೆ. ಪದ್ಮನಂದಿ ಸಿದ್ಧಾನ್ತದೇವನು ನೇಮಿ (ಚಂದ್ರ) ಮುನಿಯ ಶಿಷ್ಯನೆಂದು ತೋರುತ್ತದೆ. ಈ ಪದ್ಮನನ್ದಿ ಮುನಿಯುನ್ನು ಶಾಸನದಲ್ಲಿ 'ಜಿನಸಮಯ ದೀಪಕ'ನೆಂದು ಬಣ್ಣಿಸಲಾಗಿದೆ; ಜಿನ ಸಮಯ ದೀಪಕರ್ (ಜೈನ ಧರ್ಮವನ್ನು ಬೆಳಗಿದವರು) ಎಂಬುದರ ಪ್ರಥಮ ಪ್ರಯೋಗ ರನ್ನ ಕವಿಯದು. (ಅಜಿತ ಪುರಾಣ, 12-38) ಆದರೆ ರನ್ನನಿಗೆ ಸ್ಫೂರ್ತಿ ಪೊನ್ನಕವಿಯ ಶಾಂತಿ ಪುರಾಣದ 'ಜಿನಶಾಸನದೀಪಕ' ಎಂಬ ಪ್ರಯೋಗ (1-35). ಈ ಶಾಸನದಲ್ಲಿ ಪದ್ಮನನ್ದಿಯನ್ನು ಜಿನಶಾಸನ ದೀಪಕನೆಂದು ಹೇಳಿರುವಂತೆ ಇನ್ನೊಂದು ಶಾಸನದಲ್ಲಿ ಇನ್ದ್ರಕೀರ್ತಿ ಮುನಿಯನ್ನು 'ಜಿನಧರ್ಮ ದೀಪಕ'ನೆಂದು ಬಣ್ಣಿಸಲಾಗಿದೆ. (SII. ix-i-117. 1055.) ಕೋಗಳಿ (ಬಳ್ಳಾರಿ ಜಿಲ್ಲೆ/ಹಡಗಲಿ ತಾಲ್ಲೂಕು. ಪುಟ. 93] ಆದರಿಂದ ಆ ಇಂದ್ರ ಕೀರ್ತಿ ಮುನಿಯೂ ಈ ಇಂದ್ರನಂದಿಯೂ ಏಕವ್ಯಕ್ತಿ ಇರಬಹುದೆ ಎಂಬ ಭಾವನೆ ಬರುವುದು ಸಹಜ; ಚಾಳುಕ್ಯರ ತ್ರೈಳೋಕ್ಯಮಲ್ಲ ಸೋಮೇಶ್ವರ 1 ಚಕ್ರವರ್ತಿಗೆ ರಾಜಗುರುಗಳಾಗಿದ್ದ ಆ ಇಂದ್ರ ಕೀರ್ತಿಯನ್ನು ಇಲ್ಲಿಗೆ ಸಮೀಕರಿಸಲು ಸಾಧ್ಯವಿದೆ. ಜತೆಗೆ SII. XI. 123. ಕ್ರಿ.ಶ. 1080. ಹುನಗುಂದ/ಬಿಜಾಪುರಜಿಲ್ಲೆ, ಮತ್ತು SII. XX. 55. ಕ್ರಿ.ಶ. 1082. ಲಕ್ಷ್ಮೇಶ್ವರ/ಧಾರವಾಡಜಿಲ್ಲೆ ಶಿರಹಟ್ಟಿ ತಾಲ್ಲೂಕು) ಹಾಗೂ SII. IX-i-130. ಸು. 1050, ಕೋಗಳಿ–ಈ ಶಾಸನೋಕ್ತ ಇಂದ್ರ ನಂದಿ ಮುನಿ (—ಬ್ರತೀಶ–ಪಂಡಿತ) ಕುರಿತೂ ಪರಾಮರ್ಶೆ ಆಗಬೇಕು.

ಪದ್ಮಣಂದಿ ಸಿದ್ಧಾಂತಿ ದೇವರು ಯಾರೆಂಬುದು ಮೊದಲು ತೀರ್ಮಾನ ಆಗಬೇಕು; ಏಕೆಂದರೆ ಇದೇ ಹೆಸರಿನ ಮುನಿಗಳು ಕೆಲವರು 11-12 ನೆಯ ಶತಮಾನದಲ್ಲಿ ಕಂಡು ಬರುತ್ತಾರೆ; 1. ARIE 1960–61. B–82. 1087. ಪುಡೂರು (ಆಂಧ್ರ): ಮೆಹಬೂಬ್ ನಗರಜಿಲ್ಲೆ/ಗದ್ವಾಲ್‌ತಾಲ್ಲೂಕು); ಅದೇ, 1965-66 B-30. 1087; EC. VIII (1984) 135 (V. ಹೊಸ 16) 11–12. ಶ. ಗುಬ್ಬಿ (ಹಾಸನಜಿಲ್ಲೆ/ಹೊಸನಗರ ತಾಲ್ಲೂಕು.) ಪು. 96-97; SII. IX-i. 221· ಕ್ರಿ. ಶ. 1125. ತೊಗರ ಕುಂಟ. ಆಂಧ್ರ; ಅನಂತಪುರಜಿಲ್ಲೆ/ಧರ್ಮಾವರಂ ತಾಲ್ಲೂಕು) ಪು. 225. ಮತ್ತು EC. VIII–ii. (BLR) ಸೊರಬ 262. ಕ್ರಿ.ಶ. 1077. ಕುಪ್ಪಟೂರು (ಶಿವಮೊಗ್ಗ ಜಿಲ್ಲೆ/ಸೊರಬ ತಾಲ್ಲೂಕು) ಇತ್ಯಾದಿ. ಮೂಲಸಂಘದ ಕ್ರಾಣೂರುಗಣ ತಿಂತ್ರಿಣಿ ಗಚ್ಛದ ಪದ್ಮನನ್ದಿ ಸಿದ್ಧಾಂತದೇವನೂ ಈ ಕೊಪ್ಪಳ ಹೊಸಶಾಸನೋಕ್ತನೂ ಸಮಾನರೆಂದು ತಿಳಿಯಬಹುದು. ಆಧಾರ: ಸೊರಬ 262, 233, 140. ಮತ್ತು ಕರೀಂನಗರ 17 (IAP) ಶಾಸನಗಳು. ಹಾಗಿದ್ದಲ್ಲಿ ಈ ಮುನಿಯ ಕಾಲ ಕ್ರಿ.ಶ. ಹನ್ನೊಂದನೆಯ ಶತಮಾನದ ಉತ್ತರಾರ್ಧವಾಗುತ್ತದೆ. ಪ್ರಸ್ತುತ ಶಾಸನದ ಲಿಪಿ ಸ್ವರೂಪವೂ ಮೇಲಿನ ಹೇಳಿಕೆಯನ್ನು ಸಮರ್ಥಿಸುತ್ತದೆ. ಈ ಶಾಸನದಲ್ಲಿ 9 ನೆಯ ಸಾಲಿನಿಂದ 14 ನೆಯ ಸಾಲಿನವರೆಗೆ ಒಂದು

16


(ಶಾಸನ ಸ್ತಂಭದ ಮೊದಲಭಾಗ ತುಂಡಾಗಿದೆ)

1 ಚಾರಿತ್ರ್ಯ ಸಮೃದ್ಧಿ ಮಿಕ್ಕ
2 ವಿಜಯಶ್ರೀ ಕರ್ಮ್ಮ ವಿಚ್ಛಿತ್ತಿ। ಪೊ
3 ದ್ದಾರ್ಯ ತಾಮೆ ರಾಜನೀತಿಯೆನಿ
4 ಸುತ್ತಿರ್ಪ್ಪ ತಪೋರಾಜ್ಯದಿಂ ಭೂಚಕ್ರಂ
5 ಬೆಸಕೆಯ್ಕೆ ಸನ್ದಮುನಿಬೃನ್ದಾಧೀಶ್ವ
6 ರರ್ ಕೊಣ್ಡಕುನ್ದಾಚಾರ್ಯರಾತಪಸಾ

(ಶಾಸನ ಸ್ತಂಭ ಇಲ್ಲಿಗೆ ತುಂಡಾಗಿದೆ.)

ಇದು ಅತೇದಿ ಶಾಸನ ಪ್ರಾಯಃ 10-11ನೆಯ ಶತಮಾನದ್ದೆಂದು ಲಿಪಿಯ ಆಧಾರದಿಂದ ಹೇಳಬಹುದು. ಜೈನ ಆಚಾರ್ಯ ಪರಂಪರೆಯಲ್ಲಿ ಗೌರವಾರ್ಹ ಸ್ಥಾನ ಮಾನ್ಯರಾದ ಕೊಂಡ ಕುಂದ ಆಚಾರ್ಯರ ಸ್ತುತಿಗೆ ಈ ಹೊಸ ಶಾಸನ ನಿಂತು ಹೋಗಿದೆ. ಮೊದಲಿನ ಭಾಗ ಹಾಗೂ ಶಾಸನದ ಕೊನೆಯ ಕೆಲವು ಸಾಲುಗಳು ತ್ರುಟಿತವಾಗಿವೆ. ಒಬ್ಬ ಸಾಮ್ರಾಟನಿಗೂ ಈ ಕೊಂಡ ಕುಂದ ಮುನಿಗೂ ಸಾದೃಶ್ಯ ಕೊಟ್ಟಿರುವುದು ಶಾಸನದ ವೈಶಿಷ್ಟ್ಯ. ರಾಜನಿಗೆ ರಾಜ್ಯವಿರುವಂತೆ ಈ ಮುನಿಗೆ ತಪೋರಾಜ್ಯವಿದೆ. ಪ್ರಜೆಗಳು ರಾಜಾಜ್ಞೆಯನ್ನು ಪರಿಪಾಲಿಸಿದರೆ ಇಲ್ಲಿ ಭಕ್ತವೃಂದದ ಭೂಚಕ್ರವೇ

ಅಪ್ಪಣೆ ಪಾಲಿಸುತ್ತಿದೆ. ಹಗೆಗಳನ್ನು ರಾಜನು ಸೋಲಿಸಿ ವಿಜಯಲಕ್ಷ್ಮಿಯನ್ನು ಹೊಂದುವನು, ಈ ಮುನಿಯು ಕರ್ಮಗಳೆಂಬ ಶತ್ರುಗಳನ್ನು ಗೆದ್ದು ಮೋಕ್ಷಲಕ್ಷ್ಮಿಯನ್ನು ಹೊಂದುವನು. ರಾಜನಿಗೆ (ಭಂಡಾರ) ಸಮೃದ್ಧಿ ಇರುವಂತೆ ಈ ಮುನಿಗೆ ಚಾರಿತ್ರ್ಯವೇ ಸಮೃದ್ಧವಾಗಿದೆ. ಉದಾರತೆಯೇ ಈ ಮುನಿ ಅನುಸರಿಸುವ ರಾಜನೀತಿ.........ಇತ್ಯಾದಿ.



ಮಾಕಾಳಯ್ಯನ ನಿಷಧಿ ಶಾಸನ

17

ಶಾಸನ ಸ್ತಂಭದ ಒಂದನೇ ಮುಖ

1 ಶ್ರೀಮದಘಹರಣನಖಿಳ
2 ಕ್ಷೇಮಹಿತಂದಿವಿಜವಂದ್ಯನೆನೆ
3 ನೆಗಟ್ದಜಿತಸ್ವಾಮಿಪದಭಕ್ತನೆನಿ
4 ಸಿದನೀಮಹಿಯೊಳ
5 ಪಗತದುರಿತಂ । ಅರಯ್ದುರು
6 ಗುಣಗಣದೊಳುಪರಿಭಾವಿಪ

7 ದೇವಜಿನಾಧಾರಸಲ್ಲತಾಲೋ
8 ಕನೆಭಕ್ತನೆನ್ದಡೆಧಾರಿಣಿಯೊ
9 ಳ್ ಮಾಕಾಳಯ್ಯನ ಪೋಲಿಪರೆ ।
10 ತನ್ದೆ ಆಕಮ್ಮಯ್ಯನನಿನ್ದಿತೆ
11 ತಾಯಿ ಚಟ್ಟಕಬ್ಬೆಬಯೂರ [ಕಾ]
12 ಳಂತಾನೆನ್ದಡೆ ಜಿನವರಧರ್ಮದೊಳ
13 ಳಿದಮಾಕಾಳನಂಸರರೆ ಪೋಲಿಪರೆ
14 ಅಜಿದಾಯುಷ್ಯಮಂನಲವಿಂತಾ
15 ಜಿನ್ದುಭಯಪರಿಗ್ರಹಂಗಳುಮನ್

ಶಾಸನ ಸ್ತಂಭದ ಎರಡನೆಯ ಮುಖ

16 ರಿಪುವಂತೆ ಶ್ರೀ [ಮತ್ಕಾಳ]
17 ನೂ ಸನ್ಯಸನದಿಂತೋಜಿದಂತೆನಿ
18 ಯರ್ಕುಳ ನೆನಿಪಮಾಕಾಳ
19 ಯ್ಯಂದರಹತಪ
20 ರಮೇಶ್ವರಚರಣಸರೋಜ
21 ಗಳಂನಿಜಶಾನ್ತಗೃಹದಂ
22 ಗದೊಳೆಧರಿಸಿಮುತ್ತಂ
23 ದೊರೆಕೊಳೆಮಾಕಾಳನಿನ್ತು
24 ಸಾಧಿಸಿಕೊಣ್ಡಂ॥
25 ಸ್ವಸ್ತಿಸಕ ನೃಪಕಾಳಾತೀ
26 ತ ಸಂವತ್ಸರ ಶತಂಗ
27 ಳ್ 920ನೆಯ ವಿಳಂಬಿಸಂವ
28 ತ್ಸರಂ ಪ್ರವರ್ತ್ತಿಸೆತ.....
29 .ನ್ತರದ ಶ್ರಾವಣಸುದ್ಧ
30 ತ್ರಯೋದಸಿ ವಡ್ಡವಾರಸಂ[ದು]

ಶಾಸನಸ್ತಂಭದ ಮೂರನೆ ಮುಖ

31 ಬಯೂರ ಮಾಕಾಳಯ್ಯಂಸುಗತಿ
32 ಯ ಸಾಧಿಸಿಕೊಣ್ಡಂ॥ ಅವರಬ್ಬೆ
33 ಚಟ್ಟಕಬ್ಬೆ ನಿಸೀಧಿಕಾ ಸ್ಥಾಪನಂಗೆ
34 ಯ್ದಳ್॥ ಶ್ರೀ

ಈ ಶಾಸನದ ತೇದಿಯು ಕ್ರಿ.ಶ. 998ರ ಜುಲೈ 19 ಶನಿವಾರಕ್ಕೆ ಹೊಂದಿಕೆಯಾಗುತ್ತದೆ. ಹಡೆದ ತಾಯಿಯೇ ಪಡೆದ ಮಗನ ಮರಣಕ್ಕೆ ನಿಸಧಿಯನ್ನು ನಿಲ್ಲಿಸಿರುವುದು ಈ ಶಾಸನದ ದುರಂತ. ಕಮ್ಮಯ- ಚಟ್ಟಿಕಬ್ಬೆಯರ ಮಗನೂ ಅಜಿತ ತೀರ್ಥಂಕರ ಸ್ವಾಮಿಯ ಭಕ್ತನೂ ಆದ 'ಬಯೂರಿ'ನ ಮಾಕಾಳಯ್ಯನು ಸಲ್ಲೇಖನ ವ್ರತದಿಂದ ಸುಗತಿಯನ್ನು ಪಡೆದನು: ಹೆತ್ತಬ್ಬೆ ಚಟ್ಟಿಕಬ್ಬೆಯು ನಿಸಧಿಯನ್ನು ಸ್ಥಾಪಿಸಿದಳು. ಶಾಸನಕಾರನು ಇಲ್ಲಿ 'ನಿಸೀಧಿಕಾ' ಎಂಬ ಸಂಸ್ಕೃತ ರೂಪವನ್ನು ಬಳಸಿದ್ದಾನೆ; ನಿಸಧಿ ಶಬ್ದದ ನಿಷ್ಪತ್ತಿ ಕುರಿತ ಚರ್ಚೆಯಲ್ಲಿ ಈ ಪ್ರಯೋಗ ಮುಖ್ಯ ಉಲ್ಲೇಖವಾಗುತ್ತದೆ. ಈ ಶಾಸನದಲ್ಲಿ ಎರಡು ಸುಂದರವಾದ ಕಂದ ಪದ್ಯಗಳಿವೆ. ಪ್ರಸ್ತುತ ಶಾಸನದ ಮಾಕಾಳಯ್ಯನ ಬಗ್ಗೆ ಸಮಕಾಲೀನ ಚಾಳುಕ್ಯರ ಇತರ ಶಾಸನಗಳಿಂದ ಮಾಹಿತಿ ದೊರೆತರೂ ದೊರೆಯಬಹುದು. ತಾಯಿಗೆ ಮರಣೋತ್ತರ ಸಂಸ್ಕಾರ ಕ್ರಿಯೆ ಮಾಡುವುದು ಲೋಕ ರೂಢಿ ಇದ್ದೇ ಇದೆ. ಆದರೆ ಇಲ್ಲಿ ತಾಯಿಯೇ ತನ್ನ ಮಗನ ನೆನಪಿಗೆ ನಿಸಧಿಯನ್ನು ನಿಲ್ಲಿಸಿದ್ದಾಳೆ.


18

ಶಾಸನ ಸ್ತಂಭದ ಮೊದಲ ಭಾಗ ತುಂಡಾಗಿದೆ

1 ಪತಿಯೊಳುದಾ್ಾಮಂ ಮಿತ್ರರೊಳನುನಯ
2 ಮಂ ವೈರಿ ವೀರಾಂಗನಾ ಸಂತತಿಯೊಳಾಮೋದ
3 ಮಂದೀಕ್ಷಾವಿಧಿಯನಖಿಳದಿಕ್ಕಾಮಿನೀಸ
4 ಹೃದೊಳ್ ವಿಶ್ರುತ ಕೀರ್ತಿಶ್ರೀಯನರ್ತ್ಥಿಬ್ರಜ
5 ಕಜ್ಜದೆಯೊಳ್ ವಿತ್ತಮಂಯಾಚಕ ಬೃಂದದೊ
6 ಳ್ಯಿದೇಂಮ್ಮರ್ತ್ಯರೊಳ್ ಧನ್ಯನೋಗುಣದ ಬೆಡಂ
7 [ಗಂ] ವಿಶಿಷ್ಟ ಪ್ರಸಂಗಂ ॥ ನುಡಿದು.. ದ್ದಮಾ
(ಶಾಸನ ಸ್ತಂಭ ಇಲ್ಲಿಗೆ ತುಂಡಾಗಿದೆ)

ಈ ಶಾಸನದಲ್ಲಿ ತೇದಿಯ ಉಲ್ಲೇಖವಿರುವ ಭಾಗ ನಷ್ಟವಾಗಿದೆ. ಹಾಗೂ ಶಾಸನದ ಮೊದಲ ಮತ್ತು ಕೊನೆಯ ಕೆಲವು ಪಂಕ್ತಿಗಳು ತ್ರುಟಿತವಾಗಿವೆ. ಇದರಲ್ಲಿ ಒಬ್ಬ 'ಗುಣದ ಬೆಡಂಗ' ಬಿರುದಾಂಕಿತನನ್ನು ವರ್ಣಿಸಲಾಗಿದೆ. ಇದೇ ಕೊಪ್ಪಳ ಹೊಸ ಶಾಸನ ಮಾಲೆಯಲ್ಲಿ ಬಂದಿರುವ ಒಂದನೆಯ ಸಂಖ್ಯೆಯ ಶಾಸನದಲ್ಲಿ 'ಗುಣದ ಬೆಡಂಗ' ಪ್ರಶಸ್ತಿ ಸಹಿತ ಚಿತ್ರಿತನಾಗಿರುವ ದಂಡನಾಯಕ ಗುಣದೀಪಾದೀಶನಿಗೇ ಈ ಶಾಸನವೂ ಕೂಡಾ ಸಂಬಂಧಿಸಿರುವುದರಿಂದ ಆ ಶಾಸನ ಕಾಲವಾದ ಕ್ರಿ.ಶ. 1031. ಎಂಬ ತೇದಿಯನ್ನೇ ಈ ಶಾಸನಕ್ಕೂ ಕೊಡಬಹುದು. ದಾಡನಾಯಕ ಗುಣದೀಪಾ

ದೀಶನ ಗುಣಾವಳಿಯನ್ನು ಇಲ್ಲಿ ಚಿತ್ರಿಸಲಾಗಿದೆ. ಪ್ರಾಯಃ ಇದೂ ಸಹ ಒಂದು ನಿಸಧಿ ಶಾಸನವೆಂದು ಕಾಣುತ್ತದೆ. ಒಬ್ಬನೇ ವ್ಯಕ್ತಿಯನ್ನು ಕುರಿತ ಎರಡು ನಿಷಧಿ ಶಾಸನಗಳನ್ನು ನಿರ್ಮಿಸಿರುವ ಹಲವಾರು ಉದಾಹರಣೆಗಳು ದೊರಕುತ್ತವೆ.



ಅಭಯನನ್ದಿ ಪಂಡಿತರ ಶಾಸನ

19 ಶಾಸನ ಸ್ತಂಭದ ಮೊದಲ ಹಾಗೂ ಕೊನೆಯ ಭಾಗ ತುಂಡಾಗಿದೆ)

1 ನೆಗಟ್ಟ ಬಳಗಾಜಿಗಣಮುಂಪ್ಪೊಗಟೀಸಿ[ಪ್ಟ್ಯ]।
2 [ಳ]ಪಾನ್ವಯಕೆ ತೊಡವೆನಿಸಿ ಜನಂಪ್ಪೊಗ
3 ಟ[1]ಜಯನನ್ದಿ ಸಿದ್ಧಾನ್ತಿಗರೆಂಬರ್ನೆಗಟ್ಟರಿಳೆ
4 ಯೊಳಧಿಗತವಿದ್ಯರ್॥ ತಚ್ಛಿಷ್ಯಸ್ಸರ್ವಶಾಸ್ತ್ರ
5 ಜ್ಞಾನವಾರ್ಧಿ ಮತ್ತೇಭ ಕೇಸರೀ ಮಾಣಿಕ್ಯನನ್ದಿ ಯೋಗೀ
6 ಸ್ವರ್ಜಿನಧರ್ಮಾಬ್ಜಿ ಜನ್ಮಭಾನು॥ ತಚ್ಛಿಷ್ಯಾ ಶೇಷ
7 ಸಿದ್ಧಾನ್ತವಾರ್ಧಿ ವಿದ್ವಜ್ಜನೈರ್ನುತಃ ಗುಣಕೀ
8 ರ್ತಿರಿತಿ ಶ್ರೀಮಾನ್ ಸಿದೇಶಂಬರಾಧಿ ಪಃ ॥
9 ವ್ಯಾಕರಣತರ್ಕ ಸಿದ್ಧಾನ್ತಾದ್ಯಖಿಳ ಶ್ರುತಪ
10 ಯೋಧಿಪಾರಂಗತಃ ॥ ತಚ್ಛಿಷ್ಯ। ಪ್ರಖ್ಯಾತ
11 ಸ್ತಪೋಗುಣೈರಭಯನನ್ದಿ ಪಣ್ಡಿತ ದೇವಃ ॥
12 ....ಮಿತಮಾ. ಕ್ಷ್ಯಂಸ

---


1. ಊಹಾಪಾಠ

ಇದು ಅತೇದಿ ಶಾಸನ ಪೋಷಕ ಆಧಾರಗಳನ್ನು ಅವಲಂಬಿಸಿ ಹನ್ನೊಂದನೆಯ ಶತಮಾನಕ್ಕೆ ಸೇರಿದ ಶಾಸನವೆಂದು ಹೇಳಬಹುದು. ಸಂಸ್ಕೃತ ಮತ್ತು ಕನ್ನಡ– ಎರಡೂ ಭಾಷೆಗಳಲ್ಲಿ ಈ ಶಾಸನ ರಚಿತವಾಗಿದೆ. ಕನ್ನಡದಲ್ಲಿ ತೊಡಗಿ ನಾಲ್ಕನೆಯ ಪಾದದಿಂದ ಸಂಸ್ಕೃತಕ್ಕೆ ಹೊರಳಿದೆ. ಶಾಸನದ ಪ್ರಾರಂಭದಲ್ಲಿನ ಕೆಲವು ಸಾಲುಗಳು ತ್ರುಟಿತವಾಗಿವೆ. ಅಂತ್ಯದ ಭಾಗ ಇಲ್ಲದಿರುವುದರಿಂದ ಈ ಶಾಸನದ ಒಟ್ಟು ಸ್ವರೂಪ ವನ್ನು ನಿರ್ಧರಿಸಲಾಗುತ್ತಿಲ್ಲ.

ಈ ಶಾಸನದಲ್ಲಿ ಬಳಗಾಱಗಣವನ್ನೂ, ಮೈಳಾಪ ಅನ್ವಯವನ್ನೂ ಹೆಸರಿಸಿದೆ. ಮೈಳಾಪತೀರ್ಥವು ಬೆಳಗಾವಿ, ಧಾರವಾಡ ಜಿಲ್ಲೆಗಳ ಸೆರೆ ಹೊರೆಯಲ್ಲಿ ಮೂರು ನಾಲ್ಕು ಶತಮಾನಗಳವರೆಗೆ ಪ್ರಭಾವಶಾಲಿಯಾಗಿದ್ದುದಕ್ಕೆ ಅನೇಕ ಶಾಸನಗಳ ಆಧಾರ ಗಳು ಸಿಗುತ್ತವೆ. [ಹಂಪ. ನಾಗರಾಜಯ್ಯ, ಮೈಳಾಪತೀರ್ಥ; ಶಾಸನಗಳ ಆಧಾರ, 'ಸಮ್ಮಿಲನ' (1994) ಸಂ. ಡಾ. ಎಂ.ಎ. ಜಯಚಂದ್ರ, ಪು. 17–20]. ಜಯನನ್ದಿ ಸಿದ್ಧಾನ್ತಿ, ಶಿಷ್ಯ ಮಾಣಿಕ್ಯನನ್ದಿ. ಶಿಷ್ಯಗುಣಕೀರ್ತಿ, ಶಿಷ್ಯ ಅಭಯನನ್ದಿ ಪಣ್ಡಿತದೇವರ ವಿದ್ವತ್ತನ್ನು ಹೊಗಳಲಾಗಿದೆ. ಈ ಗುರು ಶಿಷ್ಯ ಪರಂಪರೆಯನ್ನು ಮುಂದುವರಿಸಿರುವ ಶಾಸನದ ಮುಂದಿನ ಪಾಠ ನಷ್ಟವಾಗಿದೆ. ಮೈಳಾಪ ಅನ್ವಯಕ್ಕೆ ಸೇರಿದ ಗುಣಕೀರ್ತಿ ಮುನಿಯೊಬ್ಬನನ್ನು ಶಾಸನವೊಂದು ಹೆಸರಿಸಿದೆ; [JBBRAS (1874F leet) xxx. x. No. 11. AD.876.p195] ಗುಣಕೀರ್ತಿ ಸಿದ್ಧಾನ್ತ ಭಟ್ಟಾರಕರನ್ನು ಕುರಿತ ಇತರ ಶಾಸನಗಳು : 1. SII.XI–i.61. ಕ್ರಿ.ಶ. 1024 ಮರೋಳ(ಧಾಜಿ) 2. EI.XV.23. 1071–72 – ಅಣ್ಣಿಗೇರಿ (ಧಾರವಾಡ ಜಿಲ್ಲೆ) ಪು. 337 ಕೊಪ್ಪಳದ ಈ ಹೊಸ ಶಾಸನದ ಮೊದಲಿನ ನಾಲ್ಕು ಸಾಲುಗಳಲ್ಲಿ ಇರುವುದು ಒಂದು ಕಂದ ಪದ್ಯ.

20

1 ಗಣಧರರು ಮುಪೇಕ್ಷಕ ಮುನಿಗಣ
2 ಮುಂಸಪ್ತರ್ದ್ಧಿಮನ್ತರುಂಗುಣಾಳಿಯೊಳ್
3 ದೊಣೆಯೆನಸಲಲ್ಲದೆ ಪೆಱವಂ ಪೊಣ
4 ರ್ದ್ದಲಕುಮಿತ್ರಿಕಾಳಯೋಗೀಸ್ವರರೊಳ್॥
5 ಆತಾಪನತರುಮೂಳವಿನೂನಿ
6 ವಾಸವೆಂಬ ಯೋಗತ್ರಯದೊಳಾತಂ
7 ಮೊದಲಿರೆ ತಗುಳ್ದತಿಬುಧಟಿ
8 ತ್ರಿಕಾಳಯೋಗಿಗಳಲ್ತೆ॥ ಮ
9 ರವೊದಲಾತಪಸ್ಥಿತಿ ವಿನೂತ
10 ಧಿಕಾಶ ನಿವೇಕ ಮೆಂಬಳುದ್ದಾರ
11 ತರಯೋಗದೊಳ್ಪೆಗಬ್ಬಿಕಾಲವಿ



ತ್ರಿಕಾಳ ಯೋಗಿಗಳ ನಿಷಧಿ ಶಾಸನ

12 ರಾಮದೊಳೀ ಕೊಪಣಸ್ಥಿರಜಿನ
13 ಪಾದ ಸನ್ನಿಧಿಯೊಳುನ್ನತಯೋ
14 ಗಸಮಾಧಿಗೆಯ್ದು ಮಹಾಣ್ದರಪ
15 ವರ್ಗ್ಗಮಂ ಪಡೆದರಾ ಏಕದಣ್ಡತ್ರಿ
16 ಕಾಳಯೋಗಿಗಳ್॥ ಇನ್ದಯ್ಯ.

ಇದೊಂದು ಅತೇದಿ ಶಾಸನ ; ಲಿಪಿಸ್ವರೂಪದಿಂದ ಪ್ರಾಯಃ ಹನ್ನೊಂದನೆಯ ಶತಮಾನಕ್ಕೆ ಸೇರಿದ್ದೆಂದು ನಿರ್ಣಯಿಸಬಹುದು. ಏಕದಣ್ಡ ತ್ರಿಕಾಳಯೋಗಿಗಳ ಸಮಾಧಿಮರಣವನ್ನು ತಿಳಿಸುವ ಶಾಸನವಿದು. ಇದರಲ್ಲಿ ತ್ರಿಕಾಳಯೋಗೀಶ್ವರರ, ತಪೋಮಹಿಮೆಯಿಂದ ವೆಗ್ಗಳಿತವಾದ, ವರ್ಚಸ್ವೀ ವ್ಯಕ್ತಿತ್ವವನ್ನು ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ. ಆರಂಭದ ನಾಲ್ಕು ಸಾಲಿನಲ್ಲಿರುವುದು ಒಂದು ಕಂದ ಪದ್ಯ. ಅನಂತರದ ನಾಲ್ಕು ಪಾದಗಳಲ್ಲಿಯೂ ಕಂದಪದ್ಯವಿದ್ದು ಕೆಲವು ಅಕ್ಷರಗಳು ಬಿಟ್ಟುಹೋದಂತಿದೆ. ಅದರ ತರುವಾಯದ ಸಾಲುಗಳಲ್ಲಿಯೂ ಒಂದು ವೃತ್ತ ಪದ್ಯದ ಲಯ ಕಾಣುತ್ತದೆ.

ತ್ರಿಕಾಲಯೋಗಿ ಎಂಬುದು ಸಾಮಾನ್ಯವಾಗಿ ತೀರ್ಥಂಕರರಿಗೆ ಅನ್ವಯಿಸುವ ವಿಶೇಷಣ– ಜಿನರ್ಗಂ ತ್ರಿಕಾಲಯೋಗಂ ಜಿನರ್ಗಂ ಸ್ವಾಧ್ಯಾಯಮುಯ್ವು (ರನ್ನ, ಅಜಿತ ಪುರಾಣ, 12-30) ಎಂಬ ಕಾವ್ಯಪ್ರಯೋಗವನ್ನು ಸ್ಮರಿಸಬಹುದು. ಭೂತ, ಭವಿಷ್ಯತ್, ವರ್ತಮಾನ ಎಂಬ ಮೂರು ಕಾಲಗಳ ಜ್ಞಾನವಿರುವವರು ತ್ರಿಕಾಲ ಯೋಗಿಗಳು. ಈ ಶಾಸನದಲ್ಲಿ ಅಂಕಿತನಾಮವಾಗಿ ತ್ರಿಕಾಲಯೋಗಿಗಳ ಹೆಸರನ್ನು ಹೇಳಿದೆ. ಶ್ರವಣಬೆಳಗೊಳ ಶಾಸನದಲ್ಲೂ ಒಬ್ಬ ತ್ರಿಕಾಲಯೋಗಿಯನ್ನು ನಮೂದಿಸ ಲಾಗಿದೆ. ECH (1973). 529 (382) 12.ಶ. ಜಿನನಾಥಪುರ, ಪು. 326. ಅವರು ಏತತ್ ಭಿನ್ನರೋ ಅಭಿನ್ನರೋ ಗೊತ್ತಾಗುವುದಿಲ್ಲ.

ಏಕದಣ್ಡಿ ಎಂಬ ವಿಶೇಷಣದಿಂದ ಜೈನಯತಿಯನ್ನು ನಿರ್ದೇಶಿಸಿರುವುದು ಗಮನಾರ್ಹ ವಿಶಿಷ್ಟ ಪ್ರಯೋಗ. ಯೋಗಿಗಳಲ್ಲಿ ಏಕದಂಡಿ, ತ್ರಿದಂಡಿ, ಯೋಗಿಗಳೆಂಬ ನಿರ್ದೇಶನ ರೂಢಿಯಲ್ಲಿದೆ. ಶಿಖೆ ಹಾಗೂ ಯಜ್ಞೋಪವೀತ (ಜನಿವಾರ)ಗಳನ್ನು ತ್ಯಜಿಸಿ, ಒಂದು ದಂಡವನ್ನು ಮಾತ್ರ ಹಿಡಿದಿರುವ ತಪಸ್ವಿಯೇ ಏಕದಣ್ಡಿನ್. ಆದರೆ ಜೈನ ಋಷಿಗಳಿಗೆ ಇಂಥ ಪ್ರಯೋಗಗಳು ಅಪರೂಪ. ಪಂಪನ ಆದಿಪುರಾಣ ದಲ್ಲಿ ಏಕದಣ್ಡಿ ತ್ರಿದಂಡಿ ಪರಿವ್ರಾಜಕ ಉಲ್ಲೇಖವಿದೆ. [9–93ವ] ಶಾಸನಗಳಲ್ಲಿಯೂ ಇಂಥ ಪ್ರಯೋಗ ಸಿಗುತ್ತದೆ [S11.V856. ಕ್ರಿ.ಶ. 1162] ಈ ಶಬ್ದವನ್ನು ಅರ್ಥೈಸುವಾಗ ಅವಶ್ಯ ಜೈನಧರ್ಮದ ಹಿನ್ನೆಲೆಯ ಪಾರಿಭಾಷಿಕ ಪದವೆಂದು ನೆನಪಿಡಬೇಕು. ಜೈನಯೋಗದಲ್ಲಿ ಕಾಯದಂಡ ಮನೋದಂಡ, ವಾಗ್ದಂಡವೆಂಬ ಮೂರು ಬಗೆಯ ದಂಡಗಳನ್ನು ಹೇಳಿದೆ. ಚಾವುಂಡರಾಯ ಪುರಾಣಂ. [ಸಂ. ಡಾ. ಕಮಲಾಹಂಪನಾ, ಕೆ. ಆರ್. ಶೇಷಗಿರಿ (1981)] ಸುಕುಮಾರ ಚರಿತೆ [ಸಂ. ಡಿ. ಎಲ್. ಎನ್, ತಸುಶಾ (1957) 3–46ವ) ಕಾವ್ಯಗಳಲ್ಲಿ ಇದರ ವಿವರ ಸಿಗುತ್ತದೆ. ಪ್ರಸ್ತುತ ಕೊಪ್ಪಳ ಶಾಸನೋಕ್ತರಾದ ತ್ರಿಕಾಳಯೋಗಿಯೂ, ಈ ತ್ರಿದಂಡ ಗಳಲ್ಲಿ 'ಕಾಯದಂಡ'ವನ್ನು ಕ್ರಮಕ್ರಮವಾಗಿ ತಪಯೋಗದಿಂದ ಕಳಚಿದರು ಎಂಬ ಅರ್ಥದಲ್ಲಿ ಈ 'ಏಕದಂಡಿ' ಎಂಬ ಪರಿಭಾಷೆ ಬಳಕೆಯಾಗಿದೆ. ಜೈನಧರ್ಮದ ಹಿನ್ನೆಲೆಯಿದ್ದರೆ ಈ ಪ್ರಯೋಗಗಳ ಅರ್ಥವ್ಯಾಪ್ತಿ ನಿರುಕಾಗುತ್ತದೆ.

ಏಕ ಚಟ್ಟುಗದ ಭಟಾರರ್ ಎಂಬ ಹೆಸರಿನ ಮುನಿಯಿದ್ದಾರೆ :

1 Karnataka inscriptions of Andhra Pradesh. ed P. S. Acharad P. B. Desai, Govt of A.P. (1961) P 71 No. 3.

2 ದೇಸಾಯಿ ಪಾಂಡುರಂಗರಾಯ, 'ಶಾಸನ ಪರಿಚಯ' ಧಾರವಾಡ (1956), ಶಾಸನ 12, ಕಾಲ ಸು. 881. ಪು. 11.

ಆದರೆ ಏಕದಂಡಿ ತ್ರಿಕಾಳ ಯೋಗಿಗೂ, ಏಕ ಚಟ್ಟುಗದ ಭಟಾರರಿಗೂ ಯಾವುದೇ ಸಂಬಂಧಗಳಿಲ್ಲ. ಏಕದಣ್ಡಿ ತ್ರಿಕಾಳಯೋಗಿಯು ಕೊಪಣದ (ಬಸದಿಯು) ಜಿನರ ಸನ್ನಿಧಿಯಲ್ಲಿ ಯೋಗ ಸಮಾಧಿಯಿಂದ 'ಅಪವರ್ಗ'ವನ್ನು (ಮೋಕ್ಷ) ಪಡೆದರು ಈ ಶಾಸನವನ್ನು ಬರೆದವನು ಅಥವಾ ಕಂಡರಣೆಗಾರ ಇನ್ದಯ್ಯ ಎಂಬಾತ.

21 (ಶಾಸನ ಸ್ತಂಭದ ಮೊದಲ ಭಾಗ ತುಂಡಾಗಿದೆ)

1 ನಿಪುಂನ್ನ [ತಮ]ಜ್ಜನಂನೆಗ
2 ಬ್ದಿವೃಷ್ಟಿನಿರಂನ್ತರಮಾಗೆಮಿಂ
3 ಚುಸಂಜನಿಸೆಸಿಡಿಲ್ಗಳೆ
4 ಯ್ದೆ ಭಯಮುಂಪಡೆಯು
5 ತಿರೆ ವೃಕ್ಷಮೂಳದೊಳ್
6 ಸೀಮಿತ ಚಮೂ...
7 ಯೆಗುಣಜಿನನು
8 ತತ್ರಿಕಾಳಯೋಗೀಸ
9 ನ್ಮುನಿಪತಿಗಳಾಪು
10 ನ್ನಾಗಮದೊಳೆನ್ನುಮಿನಿ
11 ಶ್ಚಳರೋ ಧರಿತ್ರಿಯೊಳ್
12 ಶ್ರೀಮತ್ತೇಜ
13 ಬ್ಬೆ ಕಂತಿಯತ್ತರ್ಮ
14 ಮ್ಮ ಸಾಧರ್ಮಿಗಳ್ಗೆ
15 [ನಿಸಿಧಿ] ಮಾಡಿಸಿದರ್.

ಇದು ಅತೇದಿ ಶಾಸನ. ಮೇಲಿನ 20ನೆಯ ಶಾಸನದ ತ್ರಿಕಾಳಯೋಗೀಶ್ವರರಿಗೇ ಸಂಬಂಧಿಸಿರುವ ಎರಡನೆಯ ನಿಷಧಿ ಶಾಸನವಿದು. ಆದರಿಂದ ಈ ತೇದಿ ರಹಿತ ಶಾಸನವೂ ಹನ್ನೊಂದನೆಯ ಶತಮಾನಕ್ಕೆ ಸೇರಿದ್ದಾಗಿದೆ. ತ್ರಿಕಾಳ ಯೋಗಿ ಸನ್ಮುನಿಪತಿಯು ಮಳೆ ಮಿಂಚು ಸಿಡಿಲುಗಳಿಗೆ ಅಳುಕದೆ ಮರದಡಿಯಲ್ಲಿ ನಿಶ್ಚಳರಾಗಿ ಕುಳಿತು ಮಾಡಿದ ತಪಸ್ಸಿನ ಹೆಚ್ಚಳವನ್ನು ಈ ಶಾಸನದ ಪೂರ್ವಾರ್ಧ ಹೇಳುತ್ತದೆ. ಉತ್ತರಾರ್ಧದಲ್ಲಿ ಆ ಮುನಿಯ ಸಹ ಪಾಠಿ ಕಂತಿಯುರಾದ ತೇಜಬ್ಬೆ ಕಂತಿಯರು ತಮ್ಮ ಸಹಧರ್ಮಿಗಳಿಗೆ ನಿಸಿಧಿಯನ್ನು ಮಾಡಿಸಿದ ವಿಚಾರ ಬಂದಿದೆ. ಇಲ್ಲಿ ಶಾಸನ ಕವಿಯು ಚಮತ್ಕಾರದಿಂದ 'ಪುನ್ನಾಗಮ' ಎಂಬುದನ್ನು ಶ್ಲೇಷೆಯಾಗಿಟ್ಟು ಪ್ರಯೋಗಿಸಿದ್ದಾನೆ : 1. ತ್ರಿಕಾಳ ಯೋಗಿಯು ಪುನ್ನಾಗವು ವೃಕ್ಷದಡಿಯಲ್ಲಿ ಚಲಿತರಾಗದೆ ತಪಸ್ಸು ಮಾಡಿದರು. 2, ಶ್ರೇಷ್ಠವಾದ ಜೈನ ಆಗಮನದಲ್ಲಿ ಅವರು ನಿಶ್ಚಯ ಜ್ಞಾನ

1. ಊಹಾಪಾಠ

ದಿಂದ ಇದ್ದು ತಪವೆಸಗಿದರು. ಸಾಮಾನ್ಯವಾಗಿ ಕಂತಿ-ಕಂತಿಯರು ಸ (ಸಾ) ಧರ್ಮಿಗಳೆಂದೂ, ಯತಿಯತಿಯರು ಸಾ (ಸ) ಧರ್ಮಿಗಳೆಂದೂ ಹೇಳಿಕೊಂಡಿರುವುದನ್ನು ಶಾಸನಗಳಲ್ಲಿ ಕಾಣುತ್ತೇವೆ. ಇಲ್ಲಿ ಯತಿಯೂ ಕಂತಿಯೂ ಸಾಧರ್ಮಿಗಳೆಂದು ಹೇಳಿರುವುದು ಒಂದು ವಿಶೇಷವಾಗಿದೆ.

22 ಶಾಸನ ಸ್ತಂಭದ ಮೊದಲ ಭಾಗ ತುಂಡಾಗಿದೆ.

(ಒಂದನೆಯ ತುಂಡು)

1 ದಿವಸ್ಯಯ್ಯುಕ್ತಿಸ್ಯಕ್ತಿಪಯೋನಿಧೇಃ
2 ವಾದೀಭಸಿಂಹಸ್ಯ ಸಿಂ
3 ಹಶ್ಚಕ್ರಿನಿರವದ್ಯವಲ್ಲ ಭಕ್ತವೃತ್ಯಾಳ
4 ಯನೂತನಯಶ್ಚಿನ್ತಾಮಣಿ ರತ್ಥೀವಾಂಸಮ
5 ಜನಿಸ್ವಚ್ಛನ್ದಮ...

(ಎರಡನೆಯ ತುಂಡಿನ ಒಂದನೆಯ ಮುಖ)

6 ಮೊದಲಸಾಲು ಸಂಪೂರ್ಣ ತ್ರುಟಿತವಾಗಿದೆ.
7 ಮಘನಂದಿಗು ... ಶಿ
8 ಷ್ಯಂತೇಯುದಿತಾಃಕಳಾಮು
9 ನಿವರೇಯಸ್ಮಿನ್ ಜೀ...
10 ಸ್ಥಿಕರ್॥ ಮನದೊಳಾತಾರ್ತ್ಥ
11 ವೀತಭವನೇನುದಿಯೊಳ್ಪ
12 ಙ್ಚಗುರು ನಮುಸ್ಕ್ರಿಯತೆ
13 ...ಗಿನ್ತಮರರ ಮಾರ್ಗ
14 ಸನ್ಯಸನಮ್ ಶ್ರೀಮಘ
15 ನನ್ದಿಮುನಿಪಂಪಡೆದರ್

ಎರಡನೆಯ ಮುಖ

16 (ಮೊದಲ ಸಾಲು ಸಂಪೂರ್ಣ ಹಾಳಾಗಿವೆ)
17 ... ಕನ್ದೇವಲೊಕಕ್ಕೆ ಬಿಜ
18 ಯಂಗೆಯ್ದಾರ್ ॥ ಕುಮತಿ ಮತಶತನ
19 ದಾನ್ತಸಪೂತಜಾತ ಪ್ರಕಟಿತಂತರ
20 ಮಿ ... ವಾದೀಭ ಸಿಂಹಜಿನ
21 ಪತಿಮತ ಸಂಬೋಂಬೋಧಿಕುಶಳಂಚತು
22 ಸಜಯತ್ಯಬುಧವನ್ದ್ಯಃ ಮಘನನ್ದಿ
23 ಮುನೀನ್ದ್ರಃ ॥

ಇದೂ ಕೂಡಾ ತೇದಿಯಿಲ್ಲದ ಶಾಸನ. ಈ ಶಾಸನವು ಎರಡು ಕಲ್ಲಿನ ತುಂಡುಗಳಲ್ಲಿ ದೊರೆಯುತ್ತದೆ. (ಮೂಲತಃ ಒಂದೇ ಸ್ತಂಭದ ಮೇಲೆ ಬರೆಯು ಲಾಗಿದ್ದರೂ ಆ ಸ್ತಂಭವು ತುಂಡಾಗಿ ಎರಡಾಗಿದೆ). ಎರಡನೆಯ ತುಂಡಿನ ಎರಡೂ ಮುಖಗಳಲ್ಲಿ ಶಾಸನ ಲಿಖಿತವಾಗಿದೆ. ಒಂದನೆಯ ತುಂಡಿನ ಮೊದಲ ಭಾಗ, ಎರಡನೆಯ ತುಂಡಿನ ಎರಡೂ ಮುಖದ ಪ್ರಾರಂಭದ ಒಂದೊಂದು ಸಾಲು ನಷ್ಟವಾಗಿವೆ. ಅಲ್ಲದೆ ಅಲ್ಲಲ್ಲಿ ಕೆಲವು ಅಕ್ಷರಗಳು ತ್ರುಟಿತವಾಗಿವೆ. ಪೂರ್ವಾರ್ಧವಷ್ಟೂ ಸಂಸ್ಕೃತದಲ್ಲಿದ್ದು ಉತ್ತರಾರ್ಧವು ಕನ್ನಡದಲ್ಲಿದೆ. ಮೊದಲನೆಯ ತುಂಡಿನಲ್ಲಿ ವಾದೀಭಸಿಂಹ ಮುನಿಯನ್ನು ಪ್ರೌಢ ಸಂಸ್ಕೃತ ಭಾಷೆಯ ಶೈಲಿಯಲ್ಲಿ ಪರಿಚಯಿಸಲಾಗಿದೆ. ಎರಡನೆಯ ತುಂಡಿನ ಎರಡೂ ಮುಖಗಳ ವರ್ಣನೆಯು ಮೂಘನಂದಿ ಮುನಿಪನನ್ನು ಕುರಿತದ್ದಾಗಿದೆ.

ಜೈನ ಮಹಾ ಆಚಾರ್ಯ ಪರಂಪರೆಯಲ್ಲಿ ಆಗಿ ಹೋದವರ ನಾಮಾವಳಿಯನ್ನು ಶ್ರವಣ ಬೆಳ್ಗೊಳದ ಶಾಸನಗಳಲ್ಲಿ ಕಾಣುತ್ತೇವೆ. ಅದರಲ್ಲಿ ವಾದಿಸಿಂಹ, ವಾದೀಭ ಸಿಂಹ, ಎಂಬ ಬಿರುದಾಂಕಿತ ಮುನಿಯ ಪ್ರಸ್ತಾಪ ಬರುತ್ತದೆ. Ec. II. 71 (64) 1/63, ಪು. 27, ಇದು ಸಮಂತಭದ್ರರಿಗೆ ಅನ್ವಯಿಸುವಂತಹುದು ; ಅದೇ, 360. (254) 1398, ಪು. 219, ಇದು ಅಭಯಸೂರಿಯ ಪ್ರಶಸ್ತಿ ; ಅದೇ, 77 (67) 1129, ಪು. 47, ಇದು ಅಜಿತ ಸೇನರ ಪ್ರಶಸ್ತಿ, ಅದೇ 569 (ECV ಚ. ಪ. 149) 1124. ಚಲ್ಯ, ಪು. 353, ಇದು ಅಕಳಂಕ ದೇವನನ್ನು ಕುರಿತದ್ದು-ಹೀಗೆ ಇವು ಯಾವುವೂ ಕೊಪ್ಪಳದ ಈ ಶಾಸನಕ್ಕೆ ಅನ್ವಯವಾಗುವುದಿಲ್ಲ.

ಗುಣಭದ್ರರ ಉತ್ತರ ಪುರಾಣಾಂತರ್ಗತವಾದ (ಕ್ರಿ. ಶ. 9ನೆಯ ಶ) ಜೀವಂಧರನ ಕಥೆಯನ್ನು ಹರಿಚಂದ್ರ ಕವಿಯು (10ನೆಯ ಶ) ತರುವಾಯ ಒಡೆಯ ದೇವ ವಾದೀಭಸಿಂಹನು ತನ್ನ 'ಗದ್ಯ ಚಿಂತಾಮಣಿ' ಯಲ್ಲಿ ರಚಿಸಿದ್ದಾನೆ. ಕ್ಷತ್ರ ಚೂಡಾಮಣಿ ಎಂಬ ಇನ್ನೊಂದು ಸಂಸ್ಕೃತ ಕಾವ್ಯವೂ ಮತ್ತು ಗದ್ಯ ಚಿಂತಾಮಣಿಯೂ ವಾದೀಭಸಿಂಹ ಎಂಬ ಹೆಸರಿನ ಒಬ್ಬನೇ ಕರ್ತೃವಿನ ಕೃತಿಯೆನ್ನಲಾಗಿದೆ. ಏಕಕರ್ತೃಕ ಭಿನ್ನ ಕರ್ತೃಕ ಚರ್ಚೆಯ ಕೇಂದ್ರವಾದ (ಒಡೆಯದೇವ) ವಾದೀಭಸಿಂಹನೂ ಈ ಕೊಪ್ಪಳ ಶಾಸನೋಕ್ತ ವಾದೀಭಸಿಂಹನೂ ಒಬ್ಬರೇ ಆಗಿರುವರೆ ಎಂಬುದು ಚಿಂತನೀಯ [Saletore, B.A., 'Mediaeval Jainism' (1938). Pp. 52-53].

ಈ ಚರ್ಚೆಗೆ ಇನ್ನೊಂದು ಆಯಾಮವೂ ಇದೆ. ಜಗದೇಕಮಲ್ಲ ವಾದಿ ವಾದಿ ರಾಜಗುರುಗಳ ತರುವಾಯ ಕಮಲಭದ್ರದೇವ ಮುನಿಯೂ, ಅನಂತರ ಅಜಿತಸೇನ ದೇವ ಮುನಿಯೂ ಬರುತ್ತಾರೆ. ಜಗದೇಕಮಲ್ಲ ಜಯಸಿಂಹದೇವನ (1016–42) ರಾಜಗುರುಗಳಾದ ವಾದಿರಾಜರಿಗೆ ಒಡೆಯದೇವ–ದಯಾಪಾಲ (ಶ್ರೀವಿಜಯದೇವ)

ಎಂಬ ಶಿಷ್ಯನಿದ್ದುದಾಗಿ ತಿಳಿದುಬರುತ್ತದೆ. [EC. VIII (1902) ನಗರ 37.1147; ಅದೇ ನಗರ 40.1077; ಅದೇ, ನಗರ 35.1077]. ಅಜಿತಸೇನ ಮುನಿಗೆ ಅಜಿತಸೇನ ಭಟ್ಟಾರಕ, ತಾರ್ಕಿಕ ಚಕ್ರವರ್ತಿ, ಶಬ್ದ ಚತುರ್ಮುಖ, ವಾದಿಘರಟ್ಟ, ಸ್ವಾಮಿ, ವಾದೀಭಸಿಂಹ ಎಂಬ ಬಿರುದುಗಳಿದ್ದುವು. EC. 11.77. (67) 1129; EC. VIII (BLR) ನಗರ 6. ಕ್ರಿ. ಶ. 1077; ಅದೇ, ತೀರ್ಥಹಳ್ಳಿ. 192. 1103–ಇತ್ಯಾದಿ] ಈ ಅಜಿತಸೇನ ವಾದೀಭಸಿಂಹನು ಆಹವಮಲ್ಲ ತ್ರೈಲೋಕ್ಯಮಲ್ಲ ಸೋಮೇಶ್ವರ I ಚಕ್ರಿಯಿಂದ ಪುರಸ್ಕೃತನಾಗಿದ್ದನು.

ವಾದೀಭಸಿಂಹ ಮುನಿಪತಿಯ ಶಿಷ್ಯ ಮಾಘನಂದಿ ಮುನಿಯು ಬುಧರಿಂದ ವಂದಿತನಾಗಿದ್ದನು. ಮಾಘನಂದಿಯು ಪಂಚಪರಮೇಷ್ಠಿಗಳ ಮಂತ್ರಪಠಣ (ಣಮೋಕಾರವನ್ನು) ಮಾಡುತ್ತಾ ಸನ್ಯಸನ ವಿಧಿಪೂರ್ವಕವಾಗಿ ದೇವಲೋಕಕ್ಕೆ ಬಿಜಯ ಮಾಡಿದನು. ಹೀಗೆ ಮುಡಿಪಿದ ಕಾಲವನ್ನು ಶಾಸನದಲ್ಲಿ ಸೂಚಿಸಿಲ್ಲ. ಮಾಘನಂದಿ ಎಂಬ ಹೆಸರಿನ ಮುನಿಗಳು ಹಲವರಿದ್ದಾರೆ. EC. VII (BLR) ಶಿಕಾರಿಪುರ. 136.1068; Inscriptions from Solapur District (1988). No. 13.1080 ಎಳ್ಳನಿಂಬರಗಿ (ದ. ಸೊಲ್ಲಾಪುರ ತಾಲ್ಲೂಕು); EC XV. 197. ಸು. 1200 ಅರಸೀಕೆರೆ; EC. 11.72 (64). 1163. ಪು. 28–29. ಮತ್ತು ಅದೇ, 73 (66) 1176. ಪು. 34–35 ಇತ್ಯಾದಿ. ಇವರಲ್ಲಿ ಈ ಕೊಪ್ಪಳದ ಶಾಸನದಲ್ಲಿ ಬರುವ ಮಾಘನಂದಿ ಮುನಿ ಯಾರಿರಬಹುದೆಂಬುದು ಚರ್ಚಾಸ್ಪದವಾಗಿಯೇ ಉಳಿಯುತ್ತದೆ. ಚಾಳುಕ್ಯರ ಕಾಲದಲ್ಲಿಯೇ ಆಗಿಹೋದ ಸಿದ್ಧಾಂತ ಚಕ್ರೇಶ್ವರನಾದ ಒಬ್ಬ ಮಾಘನಂದಿ ಮುನಿಯ ವಿವರ ಉಪಲಬ್ಧವಿದೆ. [EC. 11.79 (69) 12 ಶ. ಪು. 57] ಇವರು ಹತ್ತನೆಯ ಶತಮಾನದ ಉತ್ತರಾರ್ಧಕ್ಕೆ ಕ್ರಿ. ಶ. 980 ಕ್ಕೆ ಸೇರಿದವರು ಮತ್ತು ಸಕಳಚಂದ್ರ (ಸಕಳೇಂದು) ಮುನಿಯ ಸಧರ್ಮಿ. ಈ ಮಾಘನಂದಿ ಮುನಿಯು, ಕ್ರಿ. ಶ. 1115 ರಲ್ಲಿ ನಿಧನರಾದ ಮೇಘಚಂದ್ರ ತ್ರೈವಿದ್ಯ ಮುನಿಯ ಗುರು. ಈ ಮಾಘನಂದಿ ಮತ್ತು ಕೊಪ್ಪಳದ ಶಾಸನದ ಮಾಘನಂದಿ ಮುನಿ ಒಬ್ಬರೇ ಆಗಿರಬಹುದು.

23. 1 ವಚೋ ಮೃದು ಸ್ವಭಾವಶ್ಚಮಹಾಪ್ರ
2 ಭಾವಿಃಆಶಾಂಬುಧಾಳಂಕರಣೋ
3 ಘವ್ಯೈರೀಜಗದ್ಗುರುಃ ಶ್ರೀರ
4 ವಿಚಂದ್ರಸೂರಿಃ ॥ ರವಿಚಂದ್ರ
5 ಮುನೇಃಶಿಷ್ಯಬ್ಬಿಣ್ಣಿತಜನಪುಣ್ಡ
6 ರೀಕ ಮಾರ್ತ್ತಣ್ಡಃ ಶ್ರೀಭುವನೇಭಃ
7 ಶ್ರೀಮುನೀಂದ್ರಃ ॥ ಸಮುದಮುನಿಯುಮನೇ

8 ಯುಮುನಿಸ್ತಂದ್ರಃ ॥.........
9 ಪ್ರಸನ್ನ ವಚನೋ ಪವಿತ್ರಾಂಚಿತ
10 ವಿವಿಧಾರ್ತ್ಥ ದೃಷ್ಟಮಭಿವಾಂಚ್ಛ
11 ವಿದ್ವತ್ಸವಿತಾಂ ॥ ವಿಪುಳ ಮತಾಸ್ಮರ

ಎರಡನೇ ಮುಖ

12 ....
13 ಶ್ರೀಮನ್ಮುನೀಶ್ವರಜಿವರಲ್ಲಿಮು
14 ಖ್ಯಂ ಸಮಸ್ತ ಸಿದ್ಧಾನ್ತಸಮ್ಯಕ್ತ್ವ ಬು
15 ದ್ಧಿಸ್ತಪೋನಿಧಿ ಶ್ರೀರವಿಚನ್ದ್ರರ ಶಿಷ್ಯರ್
16 ಶ್ರೀಪೂರ್ಣ್ನ ಚನ್ದ್ರೇಚವದನಸ್ಯವರ್ಷ
17 ಶ್ರುತಾಬ್ಧಿ ಸಲಬ್ಧರ್ ಪೂರ್ಣ್ನಚನ್ದ್ರ
18 ಶಿಷ್ಯಸ್ಸಕಳಶ್ರುತಂ ಪೊಗಳ್ವುದು
19 ಶ್ರೀದಾಮಣನ್ದಿ ಜಗದೇಕ ಮಾನ್ಯಃ
20 ಅಸ್ಯಾಖಿಳ ಶಿಷ್ಯವಿ...ಭೇದಃ
21 ಶಿಷ್ಯಜನೇ ಶ್ರೀಧರದೇವನಾಮಾ
22 ಸ್ಯ ಪ್ರಭೂತೇ ಶ್ರೀಧರದೇವಾಧಿಃ
23 ಶಿಷ್ಯ ಗುರುಮುನ್ನಣ ಸಾಧಿಸಿದರ್ ॥

ಇದು ಅತೇದಿಶಾಸನ. ಲಿಪಿಸ್ವರೂಪ ಹಾಗೂ ಮತ್ತಿತರ ಪೂರಕ ಪ್ರಮಾಣಾಧಾರಗಳಿಂದ ಈ ಶಾಸನವು ಹನ್ನೊಂದನೆಯ ಶತಮಾನದ್ದೆಂದು ನಿರ್ಣಯಿಸಬಹುದು. ಈ ಶಾಸನದ ಮೊದಲರ್ಧಭಾಗವು ಸಂಸ್ಕೃತ ಭಾಷೆಯಲ್ಲಿದ್ದು ರವಿಚಂದ್ರ ಸೂರಿ (ರವಿಚಂದ್ರಮುನಿ)ಯ ಸ್ತುತಿಯನ್ನು ಒಳಗೊಂಡಿದೆ. ಶಾಸನದ ಕಡೆಯರ್ಧಭಾಗ ಕನ್ನಡದಲ್ಲಿದೆ; ಇದರಲ್ಲಿ ರವಿಚಂದ್ರಮುನಿಯ ಶಿಷ್ಯರಾದ ಪೂರ್ಣ್ನಚಂದ್ರ, ಅವರ ಶಿಷ್ಯರಾದ ದಾಮಣನ್ದಿಮುನಿ, ಮತ್ತು ಅವರ ಶಿಷ್ಯರಾದ ಶ್ರೀಧರದೇವ ಹೀಗೆ ಕ್ರಮವಾಗಿ ಮೂವರು ಮುನಿಗಳನ್ನು ಪರಿಚಯಿಸಲಾಗಿದೆ. ಪ್ರಸ್ತುತ ಶಾಸನೋಕ್ತ ರವಿಚಂದ್ರ, ಪೂರ್ಣ್ನಚಂದ್ರ, ದಾಮಣನ್ದಿ ಮತ್ತು ಶ್ರೀಧರದೇವ ಎಂಬ ಈ ನಾಲ್ವರು ಮುನಿಗಳೂ ಶ್ರವಣಬೆಳುಗೊಳದ ಎರಡು ಶಾಸನಗಳಲ್ಲಿ ಸ್ತುತರಾಗಿದ್ದಾರೆ: EC1173 (66)1176. ಪು. 34 ಮತ್ತು ಅದೇ, 135. (117)1123 ಪು. 80. ಆದರಿಂದ ಈ ಮುನಿಗಳನ್ನು ಖಚಿತವಾಗಿ ಗುರುತಿಸಲು ಸಹಾಯಕವಾಗಿದೆ, ಅಲ್ಲದೆ ಈ ಯತಿಗಳ ಕಾಲವನ್ನೂ ನಿರ್ಧರಿಸಲು ಸಾಧ್ಯವಾಗಿದೆ. ರವಿಚಂದ್ರರು ಕಳಧೌತ ನನ್ದಿಮುನಿಪರ ಶಿಷ್ಯರು. ರವಿಚಂದ್ರರಿಗೆ ಪೂರ್ಣ್ನಚಂದ್ರರೂ, ಪೂರ್ಣ್ನಚಂದ್ರರಿಗೆ ದಾಮಣನ್ದಿಯೂ ದಾಮಣನ್ದಿಗೆ ಶ್ರೀಧರದೇವರೂ ಕ್ರಮವಾಗಿ, ಗುರುಶಿಷ್ಯ ಪರಂಪರೆಗೆ ಅನುಗುಣವಾಗಿ

ಹರಿದು ಬಂದಿರುವ ಗುರುಶಿಷ್ಯ ಪೀಳಿಗೆಯಾಗಿದೆ. ಇವರೆಲ್ಲರೂ ಕ್ರಿ.ಶ. 1100 ಕ್ಕಿಂತ ಹಿಂದೆ ಜೀವಿಸಿದ್ದಗೆಂದು ತಿಳಿದುಬರುತ್ತದೆ. ಕ್ರಿ.ಶ. 1096ರ ಶಾಸನ ಒಂದರಲ್ಲಿ ರವಿಚಂದ್ರಮುನಿಯ ಪ್ರಸ್ತಾಪವಿರುವುದನ್ನೂ ಪರಿಶೀಲಿಸಬಹುದು. [EC.IX.(1990). 513. 1096. ತುಂಬದೇವನಹಳ್ಳಿ (ಹಾಸನ ಜಿಲ್ಲೆ/ಬೇಲೂರು ತಾಲ್ಲೂಕು) ಪು. 460] ಮುಖ್ಯವಾಗಿ ಪೂರ್ವೋಕ್ತ ಶ್ರವಣಬೆಳುಗೊಳ ಶಾಸನದಲ್ಲಿ ಬರುವ, ಪ್ರಸ್ತುತಕ್ಕೆ ಉಚಿತವಾದ ಸಾಲುಗಳನ್ನು ಉದಾಹರಿಸುತ್ತೇವೆ. [EC. 11.73(66).1176.ಪು. 34]. ಕಳಧೌತಮುನಿಗೆ

ಅವರ್ಗ್ಗೆ ರವಿಚಂದ್ರಸಿದ್ಧಾ
ನ್ತವಿದರ್ಸ್ಸಂಪೂರ್ಣಚಂದ್ರಸಿದ್ಧಾನ್ತಮುನಿ
ಪ್ರವರರವರ್ಗ್ಗೆ ಶಿಷ್ಯ
ಪ್ರವರರ್ ಶ್ರೀ ದಾವನನ್ದಿಸನ್ಮುನಿಪತಿಗಳ್ ॥

ಉತ್ಪಲಮಾಲೆ

ಬೋಧಿತಭವ್ಯರಸ್ತಮದನರ್ಮ್ಮದ ವರ್ಜ್ಜಿತ ಶುದ್ಧಮಾನಸ
ಶ್ರೀಧರ ದೇವರೆಂಬರವರ್ಗ್ಗಗ್ರತನೂಭವರಾದರಾಯಶ
ಶ್ರೀಧರಗರ್ಗ್ಗದ ಶಿಷ್ಯರವರೊಳ್ ನೆಗಳ್ದಮರ್ಮ್ಮಲಧಾರಿದೇವರುಂ
ಶ್ರೀಧರದೇವರುಂ ನತನರೇಂದ್ರತಿರೀಟತಟಾರ್ಚ್ಚಿತಕ್ರಮರ್ ॥

24. (ಶಾಸನ ಸ್ತಂಭದ ಮೊದಲಭಾಗ ತುಂಡಾಗಿದೆ)

....
1 ....ಪವಿ
2 ತ್ರಾತ್ಮರುಮಿನ್ನುನಿರ್ಮ್ಮಳ
3 . ನ್ತರು ಮಿನ್ನುನಿರ್ಮ್ಮಳರುಮಿನ್ತು
4 ಪ್ರಾಜ್ಞರುವಿನ್ತಶೇಷ ಶಾಸ್ತ್ರಾಸ್ತ್ರ
5 ಮನೆಯ್ದಿದುತ್ತಮರು ಮಾರಿರ್ಪ
6 ರುಮೇಘಚನ್ದ್ರಸಿದ್ಧಾನ್ತಮುನೀನ್ದ್ರ
7 ದಿನ ಕಾಲದ ಜಂಗಮ ತೀರ್ಥಮ.

(ಶಾಸನ ಸ್ತಂಭ ಇಲ್ಲಿಗೆ ತುಂಡಾಗಿದೆ)

ಇದು ಅತೇದಿಶಾಸನ. ಮೊದಲ ಕೆಲವು ಸಾಲುಗಳು ಮತ್ತು ಕಡೆಯ ಕೆಲವು ಸಾಲುಗಳು ನಷ್ಟವಾಗಿವೆ. ಈ ಅಪೂರ್ಣ ಶಾಸನದಲ್ಲಿ ಮೇಘಚಂದ್ರ ಮುನಿಯ ಹಿರಿಮೆಯನ್ನು ಗುರುತಿಸಲಾಗಿದೆ. ಮೇಘಚನ್ದ್ರಸಿದ್ಧಾನ್ತ ಮುನೀನ್ದ್ರರು ಎಲ್ಲ ಶಾಸನಗಳ ಅರ್ಥವನ್ನು (ಅಶೇಷ ಶಾಸ್ತ್ರಾರ್ಥ) ತಿಳಿದು ಜಂಗಮತೀರ್ತ್ಥರೆನಿಸಿದ್ದರು ಎಂಬುದು ಇದರ ಸಾರ. ಶ್ರವಣಬೆಳುಗೊಳದ ಒಂದು ಶಾಸನದಲ್ಲಿ [EC.11,73

(66) 1176. ಪು. 35] ಸಿದ್ಧಾಂತ ಚಕ್ರವರ್ತಿ ಗುಣಚಂದ್ರದೇವ ಮುನಿಪರ ಸಧರ್ಮರಾದ ಮೇಘಚಂದ್ರರ ಹಾಗೂ ನಯಕೀರ್ತಿ ಮುನಿಯ ಶಿಷ್ಯರಾದ ಮೇಘಚಂದ್ರ ವ್ರತೀಂದ್ರರ (ಅದೇ, ಪು. 36. ಸಾಲು : 92–94) ಸ್ತುತಿ ಪದ್ಯಗಳಿವೆ. ಶ್ರವಣಬೆಳುಗೊಳದ ಇನ್ನೊಂದು ಶಾಸನದಲ್ಲಿ [ಅದೇ, 156 (127) 1115. ಪು. 95–96] ಮೇಘಚಂದ್ರ ತ್ರೈವಿದ್ಯರು 1115 ರಲ್ಲಿ ನಿಧನರಾದದನ್ನು ತಿಳಿಸಿದೆ; ಇವರು ನಾಗಚಂದ್ರಕವಿಗೆ ಸಂಬಂಧಿಸಿದ ಗುರುವೂ ಹೌದು [ಡಾ. ಹಂಪ. ನಾಗರಾಜಯ್ಯ 'ನಾಗಚಂದ್ರ : ಇತಿವೃತ್ತ' (ದ್ವಿ. ಮು. 1994)] ಇವರಲ್ಲಿ ಈ ಕೊಪ್ಪಳದ ಹೊಸ ಶಾಸನದಲ್ಲಿನ ಮುನಿಯೂ ಒಬ್ಬರಾಗಿರಬಹುದಾದ ಸಾಧ್ಯತೆಯ ಸ್ವರೂಪ ಸ್ಪಷ್ಟವಾಗುವುದಿಲ್ಲ.

25) (ಶಾಸನ ಸ್ತಂಭದ ಮೊದಲ ಭಾಗ ತುಂಡಾಗಿದೆ)

1) ಯಶ್ಚಕ್ರಂ ಭೂತಧಾ
2) ತ್ರ್ಯಾಃಪ್ರಥಿತವಿಜಯ
3) ಕ್ಯಂಕ್ಷತಿವಶಾತ್ಕ್ರಾನ್ತಮು
4) ಚ್ಚೈಃಕೃತಾಶೌರ್ಯೋಗ್ರ
5) ದರ್ಪ್ಪಃ ಪ್ರಮದರಿಪುಭ
6) ಳ ಧ್ವಂಸತಾಂ ಪ್ರಾಪ್ಯಸ
7) [ಮ್ಯಕ್ಸವಶಾಧಿ]
(ಸ್ತಂಭ ಇಲ್ಲಿಗೆ ತುಂಡಾಗಿದೆ)

ಇದು ಅತೇದಿ ಶಾಸನ. ಲಿಪಿಸ್ವರೂಪದಿಂದ ಇದು ಸು. 11ನೆಯ ಶತಮಾನಕ್ಕೆ ಸೇರಿದ್ದೆಂದು ಹೇಳಬಹುದು. ಸಂಸ್ಕೃತ ಭಾಷೆಯ ಈ ಶಾಸನದಲ್ಲಿ ಸಮಾಧಿ ಮರಣವನ್ನು ಪಡೆದ ಜಿನಮುನಿಯೊಬ್ಬರನ್ನು ಸ್ತುತಿಸಲಾಗಿದೆ. ಅವರ ಹೆಸರನ್ನು ಹೇಳುವ ಭಾಗ ತ್ರುಟಿತವಾಗಿರುವುದರಿಂದ ಅವರ ಬಗ್ಗೆ ಮತ್ತಾವುದೇ ವಿವರಗಳನ್ನು ನೀಡುವುದು ಅಸಾಧ್ಯವಾಗಿದೆ.

26) (ಶಾಸನ ಸ್ತಂಭದ ಮೊದಲ ಹಾಗೂ ಕೊನೆಯ ಭಾಗ ತುಂಡಾಗಿದೆ)

1) [ಅನು]ಪಮ ಮೌನಿಯೋಗಿ
2) ಮುನೀಂದ್ರವಲ್ಲಭಾಚಾರ್ಯರವರ[ಶಿಷ್ಯೆ]
3) ಶ್ರೀಸನ್ದೆಟಿಯಬ್ಬೆ
4) ತಾಂ ಸಂಸ್ತುತ್ಯೆ ಭೂಲೋಕದೊಳ್.

ಇದು ಅತೇದಿ ಶಾಸನ. ಲಿಪಿಸ್ವರೂಪದಿಂದ ಇದು ಹತ್ತನೆಯ ಶತಮಾನದ ಶಾಸನವೆಂದು ಗುರುತಿಸಬಹುದು. ಎಣೆಯಿಲ್ಲದವರು ಎಂದೆನಿಸಿದ ಮೌನಿಯೋಗಿ ಮುನೀಂದ್ರರ ಶಿಷ್ಯೆಯಾದ ಎಜ಼ಿಯಬ್ಬೆಯು ಭೂಲೋಕದೊಳಗೆ ಎಲ್ಲರ ಮೆಚ್ಚುಗೆ ಗಳಿಸಿದ್ದಳೆಂಬುದು ಈ ಶಾಸನದ ತಿರುಳು. ಮೋ(ಮೌ)ನಿ ಗುರು ಎಂಬ ಹೆಸರಿನ ಮುನಿಗಳು ಹಲವರಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ:

1. ಮೋನಿಗುರುವರ: EC.11.10(8). ಕ್ರಿ.ಶ. 8ನೆಯ ಶತಮಾನ. ಪು. 7.
2. ಅದೆಯಜ಼ಿನಾಡ ಚಿತ್ತೂರ ಮೋನಿಗುರು: ಅದೇ, 23(20) 7ನೆಯ ಶತಮಾನ ಪು. 10.
3. ನವಿಲೂರ ಶ್ರೀ ಸಂಘದ ಮೌನಿಯಾಚಾರ್ಯ: ಅದೇ, 121(106). ಅತೇದಿ. ಪು. 75.
4. ಮೌನಿಗುರು: EC. IX ಬೇ. 123.
5. ಮೋನಿ ಭಟಾರ: IA. X 11. P. 223. ಕ್ರಿ.ಶ. 901–902. ಐಹೊಳೆ.
6. ಪಿರಿಯ ಹಾಗೂ ಕಿರಿಯ ಮೋನಿಭಟಾರರು: EC. IX. (1990). ಬೇ. 388. (V. ಬೇ. 123). ಕ್ರಿ.ಶ. 954. ಬಸ್ತಿಹಳ್ಳಿ. (ಹಾಸನ ಜಿಲ್ಲೆ/ಬೇ. 123). ಕ್ರಿ.ಶ. 954. ಬಸ್ತಿಹಳ್ಳಿ. (ಹಾಸನ ಜಿಲ್ಲೆ/ಬೇಲೂರು ತಾಲ್ಲೂಕು).
7. ಮೌನಿದೇವ ದಿವ್ಯಮುನೀಂದ್ರ: S11. XX. 18. ಕ್ರಿ.ಶ. 980. ಸೌಂದತ್ತಿ, ಪು. 17.
8. ಮೌನಿದೇವ: XVIII. PP. 201. ff. 11. ಶತಮಾನ. ಪಂಚಲಿಂಗ ದೇವಾಲಯ ಇತ್ಯಾದಿ. ಇವರಲ್ಲಿ ಸೌದತ್ತಿಯ ಅಥವಾ ಪಂಚಲಿಂಗ ದೇವಾಲಯ ಶಾಸನೋಕ್ತ ಮೌನಿದೇವ ಮುನೀಂದ್ರರಿಗೂ, ಪ್ರಸ್ತುತ ಕೊಪ್ಪಳ ಶಾಸನೋಕ್ತ ಮೌನಿಯೋಗಿ ಮುನೀಂದ್ರರಿಗೂ ಸಮಾನತೆ ಇರುವ ಸಾಧ್ಯತೆಯನ್ನು ಪರಾಮರ್ಶಿಸಬಹುದು.

27) (ಶಾಸನ ಸ್ತಂಭದ ಮೊದಲ ಹಾಗೂ ಕೊನೆಯ ಭಾಗ ತುಂಡಾಗಿದೆ)

1) ನೆಗಟ್ದಿ ಪೆಂಪಿನಕು
2) ನ್ದಣ ಸಾಮಿದೇವಿಯುಂ
3) ಚಂಗಲದೇವಿಯುಂ ಕಟ಼ಿ
4) ಯೆ ದಾನದ ಧರ್ಮದ

5) ಮಾತೆ ಪೋಯ್ತುಮುತ್ತುಂಗ.

....

....

ಇದು ಅತೇದಿ ಮತ್ತು ಅಸಮಗ್ರಶಾಸನ. ಮೊದಲ ಮತ್ತು ಕಡೆಯ ಕೆಲವು ಸಾಲುಗಳು ಅನುಪಲಬ್ಧವಾಗಿವೆ; ನಡುವಿನ ಐದು ಸಾಲುಗಳು ಮಾತ್ರ ಉಳಿದಿವೆ. ಶಾಸನದ ಲಿಪಿಸ್ವರೂಪವನ್ನು ಅವಲಂಬಿಸಿ ಇದು ಹನ್ನೊಂದನೆಯ ಶತಮಾನಕ್ಕೆ ಸೇರಿದ್ದೆನ್ನಬಹುದು. ಹೆಸರಾಂತ ಹಾಗೂ ಹೆಮ್ಮೆಯ ಕುನ್ದಣಸಾಮಿದೇವಿ ಮತ್ತು ಚಂಗಲದೇವಿ ಎಂಬ ಹೆಸರಿನ ಇಬ್ಬರು ಹೆಂಗಸರ (ಸಮಾಧಿ) ಮರಣವನ್ನು ತಿಳಿಸುವ ಈ ಶಾಸನದಲ್ಲಿ ಇವರಿಬ್ಬರೂ ದಾನ-ಧರ್ಮ ಕಾರ್ಯದಲ್ಲಿ ಉದಾರಿಗಳಾಗಿದ್ದರೆಂಬ ಸೂಚನೆಯಿದೆ. ಈ ಇಬ್ಬರು ಗೃಹಿಣಿಯರ ವಿಚಾರವಾಗಿ ವಿವರಗಳು ತಿಳಿಯುವುದಿಲ್ಲ.

28. (ಶಾಸನಸ್ತಂಭದ ಮೊದಲ ಹಾಗೂ ಕಡೆಯ ಭಾಗ ತುಂಡಾಗಿದೆ)

1 ಮಹಿಮಾರ್ಣ್ಣವಂ
2 ಮನೋಹರನಹಿತರದಣ್ಡಂ
3 ಯಶೋಧನರಾಜ್ಯೋತಿ ಮಹಾರಾ
4 ಜಮಕರಧ್ವಜಂ ದುಸ್ಸಹಶ್
5 ಯರ್ಜ್ಯನ್ತನಗೆ ಪಿರಿಯಮಗನೆ
6 ನೆ ನೆಗಟ್ದಳ್ ॥ ಅಱಿಯದ
7 ವಿದ್ಯೆಗಳಿಲ್ಲ ಗೀ ಪಱಿ ಕ
8 ಯಮಣ್ಡಲೀಕ ಮಕುಟ ಬುಧಮ
9 ಣಿಯೀಕಿಱಿಯಳೆನೆನೆಗಟ್ದಿ ಪೆಂಪ
10 ನೆಜಿಗಿಸಿದುದೆ ಚನ್ದಿಬ್ಬರಸಿಗಿ
11 ಳಾವನಿಯುಂ ॥..........

(ಎರಡನೆಯ ತುಂಡು)

12 ಎನೆನೆಗಟ್ದಿ ಚನ್ದಿಬ್ಬರಸಿ
13 ಯ...ದೇನಾನುಮೊ
14 ನ್ದುದ್ವೇಗಂ ತಾಳ...ಕಳೆ
15 ದೊರೆಕೊಳೆಗು ಸಾರ...
16 ...ಕಮ...........

(ಸ್ತಂಭ ಇಲ್ಲಿಗೆ ತುಂಡಾಗಿದೆ)

ಇದು ಅತೇದಿ ಶಾಸನ. ಲಿಪಿಸ್ವರೂಪ ಮತ್ತು ಪೂರಕ ಆಧಾರಗಳ ಸಹಾಯದಿಂದ ಹತ್ತನೆಯ ಶತಮಾನದ ಶಾಸನವೆಂದು ನಿರ್ಧರಿಸಬಹುದಾಗಿದೆ. ಇದೊಂದು

ಐತಿಹಾಸಿಕ ಮಹತ್ವವಿರುವ ಶಾಸನವೆಂದು ತೋರುತ್ತದೆ, ಇದರ ಆರಂಭದ ಹನ್ನೊಂದು ಪಂಕ್ತಿಗಳಲ್ಲಿ ಎರಡು ಕಂದ ಪದ್ಯಗಳಿವೆ. ಒಬ್ಬ ರಾಜ ಮಾತೆಯಾದ ಚನ್ದಿಬ್ಬರಸಿಯ ಘನವ್ಯಕ್ತಿತ್ವವನ್ನು ಈ ಎರಡು ಪದ್ಯಗಳಲ್ಲಿ ಶಾಸನಕವಿ ಕಂಡರಿಸಿರುವ ರೀತಿ ಮತ್ತು ಶೈಲಿಯನ್ನು ನೋಡಿದರೆ ಈ ಶಾಸನ ಕವಿ ಕಾವ್ಯ ಕಲೆಯಲ್ಲಿ ಪಳಗಿದವ ನೆನಿಸುತ್ತದೆ, ಚನ್ದಿಬ್ಬರಸಿಯ ಮಗನ ಹೆಸರಿನ ಭಾಗ ತ್ರುಟಿತವಾಗಿದೆ. ಪ್ರಾಯಃ ಕನ್ನರನ (ರಾಷ್ಟ್ರಕೂಟರ ಕೃಷ್ಣIII) ರಾಣಿಯಾದ ಚಂದಿಯಬ್ಬೆಯೇ ಈ ಶಾಸನೋಕ್ತ ಚಂದಿಬ್ಬರಸಿಯೆಂದು ತೋರುತ್ತದೆ. ಸಿಂದವಾಡಿ ಸಾವಿರ ಪ್ರದೇಶವನ್ನು ಚಂದಿಯಬ್ಬೆ ಆಳುತ್ತಿರುವಾಗ ಆಕೆ ನಂದಾವರದಲ್ಲಿ ಒಂದು ಜಿನಾಲಯವನ್ನು ಕಟ್ಟಿಸಿ ದಾನದತ್ತಿ ಗಳನ್ನು ಕೊಟ್ಟಳೆಂದು ಶಾಸನದಿಂದ ತಿಳಿದು ಬರುತ್ತದೆ. [AR on S.I.E, 1916. APP.B.No. 540.AD. 932 ಹಾಲಹರವಿ (ಆದವಾನಿ ತಾಲ್ಲೂಕು)] ಶಕ.854 ಕ್ಕೆ ಸೇರಿದ ಈ ಶಾಸನದಲ್ಲಿ ಒಬ್ಬ ಪದ್ಮನನ್ದಿ ಆಚಾರ್ಯರ ಉಲ್ಲೇಖವೂ ಬಂದಿದೆ [Desai .P.B. Jainism in South India (1957). P.149] ಚನ್ದಿಬ್ಬರಸಿಯ ಮಗನ ಚಿತ್ರವನ್ನೂ ಶಾಸನಕಾರನು ಹೃದ್ಯವಾಗಿ ಚಿತ್ರಿಸಿದ್ದಾನೆ. ಆದರೆ ಆತನ ಹೆಸರಿನ ಭಾಗವು ಅನುಪಲಬ್ಧವಾಗಿದೆ.

29 1 ಶ್ರೀಮತ್ಪದ್ಮನನ್ದಿ ಸಿದ್ಧಾನ್ತದೇವರ
2 ನಿಸಿದ್ಧಿಗೆಯ ಮಾಚಬ್ಬೆಕನ್ತಿ
3 ಯರ್ ನಿಱಿಸಿದರ್॥ ಲ
4 ಬ್ಬಣ್ಣೋಜನ ಲಿಖಿತಂ ಮಂಗಳಂ ॥[1]

ಇದು ಅತೇದಿ ಶಾಶನ. ಲಿಪಿಸ್ವರೂಪದ ಆಧಾರದಿಂದ 11 ನೆಯ ಶತಮಾನ ದ್ದೆಂದು ನಿರ್ಧರಿಸಬಹುದು. ಪದ್ಮನನ್ದಿ ಸಿದ್ಧಾನ್ತದೇವ ಎಂಬ ಯತಿಯು ನಿಸಿಧಿಯನ್ನು ಅವರ ಶಿಷ್ಯೆಯರಾದ ಮಾಚಬ್ಬೆಕನ್ತಿ ಎಂಬಾಕೆ ಮಾಡಿಸಿದ್ದಾಗಿ ಈ ಶಾಸನದ ಒಕ್ಕಣೆ. ಈ ಶಾಸನದ ಕಂಡರಣೆಗಾರ ಲಬ್ಬಣ್ಣೋಜ ಎಂಬಾತ.

6ನೇ ವಿಕ್ರಮಾದಿತ್ಯ ಚಕ್ರಿಯ (1076–1125) ಮತ್ತು ಚಂದಲದೇವಿ ರಾಣಿಯ ಮಗನಾದ ಮಹಾಮಂಡಲೇಶ್ವರ ಕುಮಾರ ತೈಲಪನು ಸಿಂದವಾಡಿ ಸಾವಿರ ವನ್ನು ಆಳುತ್ತಿರುವಾಗ ಸ್ಥಳೀಯ ಅಧಿಕಾರಿಗಳ ಕೋರಿಕೆಯ ಮೇರೆಗೆ ತೊಗರಿ ಕುಂಟೆಯ ಚಂದ್ರ ಪ್ರಭ ತೀರ್ಥಂಕರ ಬಸದಿಗೆ ನೆಲಹೊಲ ನಿವೇಶನಾದಿಗಳನ್ನು ದಾನ ನೀಡಿದನು. SII. IX–i. 221. 11–12. ಶತಮಾನ. ತೊಗರಿಕುಂಟೆ, (ಆಂಧ್ರ : ಧರ್ಮಾವರಂತಾಲ್ಲೂಕು)]. ಈ ಶಾಸನದಲ್ಲಿ ಕ್ರಾಣೂರುಗಣದ ಪದ್ಮನಂದಿ ಸಿದ್ಧಾನ್ತದೇವರ ಪ್ರಸ್ತಾಪವಿದೆ. [Desai. P.B., JISI (1957) P.161], ಕ್ರಿ.ಶ.

---

1 2 ಎಂ. ಜಿ. ಮಂಜುನಾಥ, ಡಿ. ಸ್ಮಿತಾರೆಡ್ಡಿ. ಇತಿಹಾಸದರ್ಶನ. ಸಂ. 10. ಪುಟ.88.

932ರ ಅದೇ ಪ್ರದೇಶದ ಪುತ್ತೊಂದು ಶಾಸನದಲ್ಲಿಯೂ ಒಬ್ಬ ಪದ್ಮನಂದಿ ಆಚಾರ್ಯರ ಉಲ್ಲೇಖ ಬಂದಿದೆ. [Desai P.B. ಅದೇ P.149] ಪ್ರಸ್ತುತ ಕೊಪ್ಪಳ ಹೊಸ ಶಾಸನದಲ್ಲಿ ಉಲ್ಲೇಖರಾದವರು ಇದೇ ಮುನಿ ಇರಬಹುದೆ ?



30

1 ಕರಕಮಳಯುಗಳ ಮುಕಳೀಕರ
2 ಣ ಮನಾತಂ ಶರೀರದಿಂ ಪೋಪಾಗಳ್
3 ಪರಿಹರಿಸಿದ ರಿಲ್ಲಿಂತುಟುಪರಿಣಾ
4 ಮಂಸಕಳ ಚಂದ್ರ ಭಟ್ಟಾರಕುರುಂ.[1]

ಇದು ಅತೇದಿ ಶಾಸನ. ಒಂದೇ ಒಂದು ಕಂದ ಪದ್ಯ ಮಾತ್ರ ಇರುವ ಈ ಶಾಸನದ ಲಿಪಿಯ ಆಧಾರದಿಂದ ಹನ್ನೊಂದನೆಯ ಶತಮಾನದ್ದೆಂದು ಹೇಳಬಹುದು. ಸಕಳ ಚಂದ್ರ ಭಟ್ಟಾರಕರು (ಸಲ್ಲೇಖನವ್ರತ ಸ್ವೀಕರಿಸಿದ್ದಾದ ಮೇಲೆ) ತಮ್ಮ ಮರಣಹಾರಿ ಹೋಗುವಾಗ ಸಹ, ತಾವರೆ ಮೊಗ್ಗಿನ ಹಾಗೆ ಎರಡೂ ಕೈಗಳನ್ನು ಕೂಡಿಸಿ ತೀರ್ಥ ವಂದನೆ– ಪಂಚನಮಸ್ಕಾರ ಹೇಳುತ್ತಲೇ ಇದ್ದರೇ ಹೊರತು ಮುಗಿದ ಕರಗಳನ್ನು

1. ಎ. ಜಿ. ಮಂಜುನಾಥ, ಡಿ. ಸ್ವಿತಾರೆಡ್ಡಿ. ಇತಿಹಾಸ ದರ್ಶನ. ಸಂ. 10 ಪು. 88.

ಬಿಡಲಿಲ್ಲ. ಇದು ಆ ಮುನಿಯ ಶುಭ(ಭದ್ರ) ಪರಿಣಾಮವನ್ನು ತಿಳಿಸುತ್ತದೆ. ಸಕಳಚಂದ್ರ ಭಟ್ಟಾರಕರ ಹೆಸರಿರುವ ಶಾಸನಗಳು ಕೆಲವು ದೊರೆತಿವೆ. ಅವುಗಳಲ್ಲಿ ಮೂಲಸಂಘ ಕ್ರಾಣೂರು ಗಣದ ಸಕಲ ಚಂದ್ರಭಟ್ಟಾರಕರ ಶ್ರಾವಕಿಶಿಷ್ಯೆ ನಾಗಸಿರಿಯುವ್ವೆಯು ಪಾರ್ಶ್ವನಾಥ ಬಸದಿ ಮಾಡಿಸಿದ ವಿಚಾರ ತಿಳಿಸುವ ಶಾಸನವನ್ನು ಗಮನಿಸಬಹುದು. [ARSIE 1928–29· AP. E. No. 50· AD 1220. ಕಂದಗಲ್ (ಬಿಜಾಪುರಜಿಲ್ಲೆ/ಹುನಗುಂದ ತಾಲ್ಲೂಕು] ಮತ್ತು ಅದೇ: ಶಾಸನ ಸಂಖ್ಯೆ. 228. ಜಾವೂರು. (ಧಾರವಾಡ ಜಿಲ್ಲೆ/ನವಲ್ಗುಂದ ತಾಲ್ಲೂಕು)]. ಆದರೆ ಈ ಶಾಸನಗಳ ಸಕಳಚಂದ್ರ ಭಟ್ಟಾರಕರಿಗೂ ಪ್ರಸ್ತುತ ಕೊಪ್ಪಳ ಶಾಸನ ಮಾಲೆಯ ಸಕಳಚಂದ್ರ ಭಟ್ಟಾರಕರಿಗೂ ಸು. ನೂರು ವರ್ಷಗಳಿಗೂ ಹೆಚ್ಚಿನ ಅಂತರವಿರುವುದರಿಂದ ಇಬ್ಬರೂ ಭಿನ್ನರೆಂದು ಗುರುತಿಸಬಹುದು.

31)

1 ಸ್ವಸ್ತಿ ಶಕವರ್ಷ 919
2 ನೆಯ ಹೇವಳಂಬಿ
3 ಸಂವತ್ಸರದ ಕಾರ್ತ್ತಿಕ
4 ಸುದ್ಧ ಪಂಚಮಿ ಬೃಹ
5 ಸ್ಪತಿವಾರದಂದು ಶ್ರೀ
6 ಮಳಧಾರಿದೇವರ ಶಿಷ್ಯ।

(ಶಾಸನ ಸ್ತಂಭ ಇಲ್ಲಿಗೆ ತುಂಡಾಗಿದೆ)

ಈ ಶಾಸನದ ತೇದಿಯು ಕ್ರಿ. ಶ. 997. ಅಕ್ಟೋಬರ್ 20 ಗುರುವಾರಕ್ಕೆ ಸರಿಹೊಂದುತ್ತದೆ. ಶಾಸನ ಸ್ತಂಭ ತುಂಡಾಗಿರುವುದರಿಂದ ಶಾಸನದ ಪ್ರಮುಖ ಭಾಗವೇ ಲುಪ್ತವಾಗಿದೆ. ಮಳಧಾರಿದೇವ ಮುನಿಯ ಹೆಸರು ಹೇಳಿರುವಷ್ಟು ಮಾತ್ರ ಉಳಿದು ಬಂದಿದೆ. ಮಳಧಾರಿ ದೇವರ ಶಿಷ್ಯನು ಸಮಾಧಿ ಮರಣ ಪಡೆದುದನ್ನು ಹೇಳಲಾಗಿರುವ ಈ ಶಾಸನದಲ್ಲಿ ಶಿಷ್ಯನ ಹೆಸರಿನ ಭಾಗ ನಷ್ಟವಾಗಿದೆ. ಪ್ರಸ್ತುತ ಶಾಸನೋಲ್ಲೇಖಿತ ಮಳಧಾರಿಮುನಿಯಾರೆಂದು ಗುರುತಿಸುವುದು ಕಷ್ಟ ಏಕೆಂದರೆ ಈ ಹೆಸರಿನ ಮುನಿಗಳು ಹಲವರಿದ್ದಾರೆ.

32.

1 ಕೊಣ್ಡಕುನ್ದಾನ್ವಯೋತ್ಪನ್ನೇ
2 ಗಣೇ ದೇಶಿಕ ಸಜ್ಞಕೆ
3 ತತ್ರ ಪುಸ್ತಕಗಚ್ಚೆ ಭೂತೇ
4 ಶ್ರೀದೇವೆಂದ್ರ ಮುನೀಶ್ವರಃ
5 ಸೋಚಿನ್ತ್ಯ ಚಾರುಚಾರಿತ್ರ
6 ... . ನ್ತ ತತ್ವವಿ.........[1]

(ಶಾಸನ ಸ್ತಂಭ ಇಲ್ಲಿಗೆ ತುಂಡಾಗಿದೆ)

ಇದು ಅತೇದಿ ಶಾಸನ. ಲಿಪಿಸ್ವರೂಪದಿಂದ ಹನ್ನೊಂದನೆಯ ಶತಮಾನದ್ದೆಂದು ಗುರುತಿಸಬಹುದಾಗಿದೆ. ಕೊಣ್ಡ ಕುನ್ದಾನ್ವಯದೇಶಿಕಗಣ ಪುಸ್ತಕಗಚ್ಚದ ದೇವೇಂದ್ರ ಮುನೀಶ್ವರರ ಹೆಸರು ಸಿಗುತ್ತದೆ. ಅಲ್ಲಿಂದ ಮುಂದೆ ಅವರು/ಶಿಷ್ಯರು/ಶಿಷ್ಯೆಯರು ಮುಡಿಪಿದ ವಿಚಾರ ಹೇಗೆ ಎತ್ತ ಎಂಬುದು ಲಿಖಿತವಾಗಿದ್ದ ಭಾಗಪೂರ್ತಿ ತುಂಡಾಗಿ ಅನುಪಲಬ್ಧವಾಗಿದೆ.

ಉಪಸಂಹಾರ : ಶ್ರವಣಬೆಳುಗೊಳದ ಕಳ್ವಪ್ಪು ತೀರ್ಥಗಿರಿಯು (ಚಿಕ್ಕಬೆಟ್ಟ, ಚಂದ್ರಗಿರಿ, ಕಟವಪ್ರ) ಹಾಗೆಯೇ ಕೊಪಣವೂ ಸಲ್ಲೇಖನ ವ್ರತಧಾರಿಗಳಾಗಿ ಸನ್ಯಸನ ವಿಧಿಯಿಂದ ಮುಡಿಪುವುದಕ್ಕೆ ಪವಿತ್ರಸ್ಥಳವೆನಿಸಿ ಮಾನ್ಯವಾಗಿತ್ತು. ಈಗ ಹೊಸದಾಗಿ ಲಭ್ಯವಾಗಿರುವ ಶಾಸನಗಳಲ್ಲಿ ಶ್ರಾವಕರಿಗಿಂತ ಶ್ರಮಣರು ಹೆಚ್ಚಾಗಿ ಇಲ್ಲಿ ಮುಡಿಪಿದ್ದಾ ರೆಂಬುದು ಈ ಹೇಳಿಕೆಯನ್ನು ದೃಢೀಕರಿಸುತ್ತದೆ.

ಶ್ರವಣಬೆಳ್ಗೊಳದ ಚಿಕ್ಕ ಬೆಟ್ಟವನ್ನು ಕಳ್ವಪ್ಪುತೀರ್ಥವೆಂದೂ [EC. 11-568. (ಎಕV ಚ.ಪ. 148) 1094] ಕೆಲ್ಲಂಗೆರೆಯನ್ನು ಆದಿತೀರ್ಥವೆಂದೂ [EC. 11.476 (345) 1159. ಪು. 289-90] ಕೊಪ್ಪಳವನ್ನು ಕೊಪಣಮಹಾತೀರ್ಥವೆಂದೂ [ಅದೇ; ಪು. 289. ಸಾಲು: 43-45] ಶಾಸನಗಳಲ್ಲಿ ಸಮೂದಾಗಿದೆ. [ನಾಗರಾಜಯ್ಯ ಹಂಪ, 'ಶಾಸನಗಳಲ್ಲಿ ಜೈನತೀರ್ಥಗಳು' (1996)]. ಕೊಪಣವು ಮಹಾತೀರ್ಥವಾಗಿತ್ತೆಂಬ ಮಾತಿಗೆ ಈಗ ದೊರೆತಿರುವ ಶಾಸನಗಳಿಂದ ಪುಷ್ಟಿ ಬಂದಂತಾಗಿದೆ.

ಈ ಹೊಸ ಶಾಸನಗಳಲ್ಲಿ ಬಹುಪಾಲಿನವು ಕಲ್ಯಾಣಿ ಚಾಳುಕ್ಯರ ಕಾಲಕ್ಕೆ ಸೇರಿವೆ. ರಾಷ್ಟ್ರಕೂಟರ-ಗಂಗರ ಆಳ್ವಿಕೆಗೆ ಒಳಪಟ್ಟ ಶಾಸನಗಳು ಎರಡೊ ಮೂರೊ ಮಾತ್ರ ಇವೆ. ಚಾಳುಕ್ಯರ ತರುವಾಯದ ಕಾಲಘಟ್ಟಕ್ಕೆ ಸೇರಿದ ಶಾಸನ ಒಂದೂ

1. ಎಂ. ಜಿ. ಮಂಜುನಾಥ, ಡಿ. ಕೃತಾರೆಡ್ಡಿ. ಇತಿಹಾಸ ದರ್ಶನ. ಸ. 10. ಪು. 89.

ಇಲ್ಲ. ಚಾಳುಕ್ಯರ ಜಗದೇಕಮಲ್ಲ ಜಯಸಿಂಹನ ಆಡಳಿತಾವಧಿಗೆ (ಕ್ರಿ. ಶ. 1016-42) ಒಳಪಡುವ ಶಾಸನಗಳು ಅಧಿಕವಾಗಿವೆ.

ಈ ಶಾಸನಗಳಲ್ಲಿ ಕ್ವಚಿತ್ತಾಗಿ ಕಂದ-ವೃತ್ತಗಳು ಕಂಡು ಬಂದರೂ, ಬಹುತೇಕ ಗದ್ಯಶೈಲಿಯಲ್ಲಿ ರಚಿತವಾಗಿವೆ. ಈ ಶಾಸನಗಳಷ್ಟೂ ಜೈನಶಾಸನಗಳೇ ಆಗಿದ್ದು, ಸಮಾಧಿ ಮರಣ ಪಡೆದವರ ನಿಸಧಿ (ಧಾರ್ಮಿಕ ಮರಣಸ್ಮಾರಕ) ಶಾಸನಗಳಾಗಿವೆ. ಅನೇಕ ಶಾಸನಗಳು ತ್ರುಟಿತವಾಗಿದ್ದು, ಪ್ರಾರಂಭಕ್ಕಿಂತ ಅಂತ್ಯದ ಭಾಗ ನಷ್ಟವಾಗಿರುವ ಶಾಸನಗಳು ಹೆಚ್ಚಾಗಿವೆ.

ಈ ಹಿಂದೆ ಕೊಪ್ಪಳದಲ್ಲಿ ಚಂದ್ರಸೇನ ದೇವರ ಗುಡ್ಡ ಚಂದ್ರಪ್ಪ, ಸರ್ವ ನನ್ದಿ ಭಟಾರ, ಶ್ರೀ ಮದ್ದೇವೇಂದ್ರಕೀರ್ತಿ ಭಟ್ಟಾರಕ, ಜಟಾಸಿಂಗನಂದಿ, ಇತ್ಯಾದಿ ಕೆಲವೇ ಕೆಲವು ನಿಷಧಿ ಶಾಸನಗಳು ಹಾಗೂ ನಾಲ್ಕಾರು ಇತರೆ ಜೈನ ಶಾಸನಗಳು ಮಾತ್ರ ದೊರೆತಿದ್ದವು. [ದೇಸಾಯಿಪಾಂಡುರಂಗರಾಯ, 'ಶಾಸನಪರಿಚಯ' (1956]. ಕರ್ನಾಟಕದ ಅತ್ಯಂತ ಪ್ರಮುಖ ಜೈನ ಕ್ಷೇತ್ರ ಹಾಗೂ ತೀರ್ಥಗಳಲ್ಲಿ ಒಂದಾಗಿದ್ದ ಕೊಪ್ಪಳದಲ್ಲಿ ಇಷ್ಟು ಕಡಿಮೆ ಸಂಖ್ಯೆಯ ಜೈನ ಶಾಸನಗಳು ದೊರೆತಿರುವುದು ಆಶ್ಚರ್ಯಕ್ಕೆ ಕಾರಣವಾಗಿತ್ತು. ಆದರೆ ಈಗ ಕೋಟೆಯ ಬುರುಜು ಕುಸಿದು ಹೆಚ್ಚಿನ ಸಂಖ್ಯೆಯಲ್ಲಿ ಜೈನ ಶಾಸನಗಳು ತುಂಡು ತುಂಡಾಗಿ ದೊರೆತಿರುವುದರಿಂದ ಬೇರೆ ಮತೀಯರ ಪ್ರಾಬಲ್ಯದ ಕಾಲದಲ್ಲಿ ಇಲ್ಲಿಯ ಜೈನಬಸದಿಗಳು ಹಾಗೂ ಶಾಸನಗಳು ಹಾಳಾಗಿರಬಹುದೆಂದು ಊಹಿಸಬಹುದು.

ಇಷ್ಟೊಂದು ನಿಸಧಿ ಶಾಸನಗಳು ಹೀಗೆ ಒಂದೇ ತಾಣದಲ್ಲಿ, ಅದೂ ಕೋಟೆಯ ಬುರುಜಿನ ಗೋಡೆಯೊಳಗೆ ಏಕೆ, ಹೇಗೆ, ಯಾವಾಗ ಬಂದುವು ಎಂಬುದು ಆಲೋಚನೀಯ ವಿಷಯ. 13-14ನೆಯ ಶತಮಾನಗಳಲ್ಲಿ ಅನ್ಯಧರ್ಮೀಯರ ಧಾಳಿಗೆ ಸಿಕ್ಕಿ, ಕೊಪಣದ ಬಸದಿಗಳ ನಾಶವಾದ ನಂತರ ಸುಮಾರು 18ನೆಯ ಶತಮಾನದಲ್ಲಿ ಕೊಪ್ಪಳದ ಕೋಟೆಯನ್ನು ಮತ್ತೆ ಭದ್ರವಾಗಿಸುವ ಸಂದರ್ಭದಲ್ಲಿ ಈ ಶಾಸನಗಳ ಮಹತ್ವವನ್ನು ಗಮನಿಸದ ಜನರು, ಕೋಟೆಯ ಗೋಡೆಯನ್ನು ಕಟ್ಟಲು ಇವುಗಳನ್ನು ಉಪಯೋಗಿಸಿರಬಹುದು. ಕೋಟೆಯ ಗೋಡೆಗಳಲ್ಲಿ ಇನ್ನೂ ಹತ್ತಾರು ಶಾಸನಗಳು ಅಡಗಿರುವ ಸಾಧ್ಯತೆಯಿದೆ. ಕದಂಬರು, ಬಾದಾಮಿ ಚಾಳುಕ್ಯರು, ಗಂಗರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಲಚುರಿಗಳು, ಹೊಯ್ಸಳರು-ಹೀಗೆ ನಿರಂತರ ರಾಜಕೀಯ ಸ್ಥಿತ್ಯಂತರಗಳ ನೆಲೆಗಳಲ್ಲೂ ಕೊಪಣವು ತಟಸ್ಥ ಸಾಕ್ಷೀ ಪ್ರಜ್ಞೆಯಾಗಿತ್ತೊ ಅಥವಾ ತನ್ನ ಪಾಲನ್ನೂ ಇದರಲ್ಲಿ ಕೂಡಿಸಿತ್ತೊ ಎಂಬುದು ಪರಿಭಾವಿಸಬೇಕಾದ ವಿಚಾರ. ಕೊಪ್ಪಳ ನಡೆದು ಬಂದ ದಾರಿಯನ್ನು ಪರಿಶೀಲಿಸಿ, ಅದರ ಚಾರಿತ್ರಿಕ ಧಾರ್ಮಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಅಧ್ಯಯನ ಮಾಡುವುದಕ್ಕೆ ಈಗ ಉಪಲಬ್ಧವಾಗಿರುವ ಹೊಸಶಾಸನಗಳು ಹೆಚ್ಚಿನ ಸಾಮಗ್ರಿಯನ್ನು ಪೂರೈಸಿವೆ.

ಬಯಕೆಯ ಹಾದಿಯಲ್ಲಿ

ಶಿವರತ್ನ ಅ. ನ. ಹಳ್ಳಿ

ಬೊಚ್ಚು ಬಾಯಲ್ಲಿ
ನುರಿಯಲಾರದ ಭಾವಗಳು
ಸಿಕ್ಕಿದಷ್ಟನ್ನೇ ಮುಕ್ಕಿ
ನುರಿದಷ್ಟನ್ನೇ ನುಂಗಿ
ಬಾಯಿ ಚಪ್ಪರಿಸುವ
ಬಯಕೆಗಳು

ಮನದ ನಾಲಿಗೆಗೆ
ಹುಳುವಾಗುವ ಸಂದರ್ಭಗಳು
ವಾಸ್ತವದ ಬೆಳಕಲ್ಲಿ
ಮರೆಯಾದ ಕತ್ತಲೆಯು
ಆ ದಿನಗಳು

ಆಸೆಯ ಅಗುಳು
ನಾಲಿಗೆಯಲ್ಲೇ ತಂಗಳಾಗಿ
ವಿಷವೆಂದರಿವಾದಾಗಲೂ
ಉಗುಳಲಾರದೆ
ನುಂಗಲೂ ಆಗದೆ
ಅರಗಿಸಿಕೊಳ್ಳಲೇಬೇಕಾದ
ಅವಸ್ಥೆ

ಜೀರ್ಣವಾಗದ ಆಸೆ
ಬಯಕೆಯ ಬಟ್ಟಲಲ್ಲಿ
ಹೆಪ್ಪಾದಾಗ
ಸಲಹೆಗೆ ಬಾಯ್ತೆರೆದು

ಬಣ್ಣ ಬಯಲಾಗಿ
ವಾಸ್ತವದ ಉರಿಬಿಸಿಲಲ್ಲಿ
ಬಳಲಿ ಬೆಂಡಾಗಿ
ನಿನ್ನ ಹುಡುಕಿ
ಗೋಗರೆದಾಗ

ಭಾವದ ಅವಶೇಷಗಳಿಗೆ
ಜೀವ ತುಂಬದ ನಿನ್ನ
ನನ್ನಲ್ಲೇ ಹುಳಿತ ನೆನಪುಗಳು
ಮತ್ತೆ ಹುಡುಕಬರವು.

ಕುಂದಾದ್ರಿಯ ನಿಷಧಿ ಶಾಸನ


ಜಿ. ಕೆ. ದೇವರಾಜಸ್ವಾಮಿ

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು ತನ್ನ ರಮಣೀಯವಾದ ನಿಸರ್ಗ ಸೌಂದರ್ಯದಿಂದ ಪ್ರಸಿದ್ಧವಾಗಿರುವಂತೆಯೇ ಐತಿಹಾಸಿಕ, ಹಾಗೂ ಸಾಂಸ್ಕೃತಿಕ ಮಹತ್ವವನ್ನು ಪಡೆದಿರುವ ಹಲವಾರು ಸ್ಥಳಗಳಿಗೆ ಪ್ರಸಿದ್ಧವಾಗಿದೆ. ತೀರ್ಥಹಳ್ಳಿಯಿಂದ ನೈಋತ್ಯ ದಿಕ್ಕಿನಲ್ಲಿ 32 ಕಿ.ಮೀ. ದೂರದಲ್ಲಿರುವ ಕುಂದಾದ್ರಿ ಪರ್ವತವು ಸಮುದ್ರ ಮಟ್ಟದಿಂದ 3300 ಅಡಿ ಎತ್ತರದಲ್ಲಿದೆ. ಇಲ್ಲಿ ಪಾರ್ಶ್ವನಾಥಸ್ವಾಮಿಯ ಒಂದು ಬಸದಿಯಿದೆ. ಈ ಬಸದಿಯ ಮುಂಭಾಗದಲ್ಲಿರುವ ಮಾನಸ್ತಂಭದ ಬಳಿ ಒಂದು ಅಪ್ರಕಟಿತ ಶಾಸನವಿದೆ. ಈ ಶಾಸನವನ್ನು 4 ಅಡಿ 9 ಅಂಗುಲ ಎತ್ತರ, 2ಅಡಿ 6 ಅಂಗುಲ ಅಗಲ ಹಾಗೂ 7 ಅಂಗುಲ ಮಂದವಾಗಿರುವ ಗ್ರಾನೈಟ್ ಕಲ್ಲಿನಲ್ಲಿ (ಕಣಶಿಲೆ) ಕೊರೆಯಲಾಗಿದೆ.

ಶಾಸನದ ಶಿಲ್ಪ :– ಶಾಸನದ ಮೇಲ್ಭಾಗದಲ್ಲಿ ಇಪ್ಪತ್ತು ಅಂಗುಲಗಳಷ್ಟು ಜಾಗದಲ್ಲಿ ಇಬ್ಬರು ವ್ಯಕ್ತಿಗಳ ಉಬ್ಬುಶಿಲ್ಪವಿದೆ. ಶಾಸನದ ಎಡಭಾಗದಲ್ಲಿರುವ ವ್ಯಕ್ತಿಯು ಪದ್ಮಾಸನದಲ್ಲಿ ಧ್ಯಾನಮುದ್ರೆಯಲ್ಲಿ ಕುಳಿತಿದ್ದಾರೆ. ಅವರ ತಲೆಯ ಮೇಲೆ ಮುಕ್ಕೊಡೆಯಿದೆ. ಈತನ ಅಕ್ಕ ಪಕ್ಕದಲ್ಲಿ ಕಮಂಡಲು ಮತ್ತು ಪಿಂಛದ ಶಿಲ್ಪವಿದೆ. ಶಾಸನದ ಬಲಭಾಗದಲ್ಲಿರುವ ಮತ್ತೊಬ್ಬ ವ್ಯಕ್ತಿಯ ಶಿಲ್ಪವು ಪದ್ಮಾಸನದಲ್ಲಿ ಕುಳಿತಿರುವ ಭಂಗಿಯಲ್ಲಿ ಕೆತ್ತಲ್ಪಟ್ಟಿದೆ. ತನ್ನ ಉದರ ಭಾಗದಲ್ಲಿ ಎಡಗೈಯ್ಯ ಮೇಲೆ ಬಲಗೈಯ್ಯನ್ನು ಇಟ್ಟುಕೊಂಡಿರುವ ಈ ವ್ಯಕ್ತಿಯು ಧರಿಸಿರುವ ವಸ್ತ್ರ (ಪಂಚೆ) ಹಾಗೂ ಕೊರಳ ಹಾರಗಳೊಡನೆ ಈ ವ್ಯಕ್ತಿಯ ಕೂದಲೂ ಸಹ ಸ್ಪಷ್ಟವಾಗಿ ಕಾಣುವಂತೆ ಶಿಲ್ಪಿಯು ಕೆತ್ತಿದ್ದಾನೆ. ಈ ಎರಡೂ ಶಿಲ್ಪಗಳ ಅಕ್ಕ ಪಕ್ಕದಲ್ಲಿ ಸೂರ್ಯ ಚಂದ್ರರ ಶಿಲ್ಪಗಳಿವೆ.

ಶಾ ಸ ನ ಪಾ ಠ

1) ಅರವಿನ್ದ ಪ್ರಿಯಃ ತೇಜರಾಜೋ ವೃಷಭ ಸ್ಸ
2) ರೂಪಮುರ್ಜ್ಜ್ಮಿತ ನೀಶ್ವರರ್ಬ್ಬ ವ್ಯಸ್ತುತ ಪದರಂಬುಜಗ
3) ರಪ್ಪರೀ ದಿವ್ಯ ವೃತೋ ನ್ಪರೆಯೊಳ್ ಕೀರ್ತ್ತಿಮಘೂಮ
4) ನಃ ಪ್ರಿಯಃರಘು ದ್ವೇಸಿಗಳ್ ಶ್ರೀ ದಿವಾಕರಣ



ಕುಂದಾದ್ರಿ ನಿಷಧಿ ಶಾಸನ

5) ನ್ದಿ ವ್ರತಿ ಮುಖ್ಯರ್ ನೆಗಟ್ದರಾಸಿದ್ಧಾನ್ತ ಚೂಡಾಮಣಿ
6) ಇನ್ತೆನಿಸಿನೆಗಟ್ದ ಶ್ರೀ ಮದ್ಧಿವಾಕರಣನ್ದಿ ಸಿದ್ಧಪ
7) ಡೆದರ್ ಸ್ವಸ್ಥಂ॥ ಸ್ವಸ್ತ್ಯನೇಕ ಗುಣಗಣಾಳಂಕೃತ
8) ಸತ್ಯ ಸದಾಚಾರ ನಯವಿನಯಶೀಳ ಸಂಪನ್ನನುಂ
9) ಆಹಾರಾಭಯ ಭೈಶಜ್ಯ ಶಾಸ್ತ್ರದಾನಿಯುಂ
10) ಜಿನಸ್ನಪನ ಗನ್ಧೋದಕ ಪವಿತ್ರೀಕೃತೋತ್ತಮಾಂಗ

11) ನು ಮಪ್ಪ ಶ್ರೀಮತ್ ಸಾನ್ತಯ್ಯ ಪಟ್ಟಣಸ್ವಾ
12) ಮಿ ಪಂಚಪರಮೇಷ್ಠಿ ಸಮಕ್ಷದೊಳಾರಾಧ
13) ನಾ ವಿಧಿಯಿಂ ಸಮಾಧಿವೆರಸಿಂ ಮುಡಿಪಿದಂ
14) ಮಗಂನಾಗಯ್ಯ ಪಟ್ಟಣ ಸ್ವಾಮಿಯುಂ ಅಳಿ
15) ಯು ನೇಮಯ್ಯ ಸಟ್ಟಿಯುಂ ಕಲ್ಲಂನಿಱಿಸಿದರ್

ಶಾಸನದ ಸಾರಾಂಶ: ಶಾಸನದಲ್ಲಿ 2 ಭಾಗಗಳಿವೆ. ಮೊದಲ ಭಾಗದಲ್ಲಿ ದಿವಾಕರಣಂದಿ ಎಂಬ ಮುನಿಗಳ ಬಗ್ಗೆ ಉಲ್ಲೇಖವಿದ್ದರೆ ಎರಡನೆಯ ಭಾಗದಲ್ಲಿ ಸಾನ್ತಯ್ಯ ಪಟ್ಟಣಸ್ವಾಮಿ ಎಂಬ ಶ್ರಾವಕನ ಬಗ್ಗೆ ವಿವರಗಳಿವೆ. ಅರವಿಂದ ಪುಷ್ಪಗಳಿಗೆ ಪ್ರಿಯನಾದ ಚಂದ್ರ, ತೇಜಸ್ಸಿಗೆ ರಾಜನಾದ ಸೂರ್ಯ, ಮತ್ತು ಆದಿತೀರ್ಥಂಕರನಾದ ವೃಷಭದೇವನಂತಹ ಮುನೀಶ್ವರನೂ, ಭವ್ಯರಿಂದ (ಜೈನ ಭಕ್ತಾದಿಗಳಿಂದ) ಸ್ತುತಿಸಲ್ಪಡುವ ಕಮಲಗಳಂತಹ ಪಾದಗಳುಳ್ಳ ದಿವ್ಯವ್ರತಿಗಳು ಈ ಭೂಮಿಯಲ್ಲಿ ಕೀರ್ತಿ ಮಧುವಿಗೆ ಮನಃ ಪ್ರಿಯರಾಗಿದ್ದ ಪಾಪವನ್ನು ದ್ವೇಷಿಸುತ್ತಿದ್ದ ಶ್ರೀ ದಿವಾಕರಣಂದಿ ವ್ರತಿ ಮುಖ್ಯರು ಸಿದ್ಧಾನ್ತ ಚೂಡಾಮಣಿಗಳೆಂದು ಕೀರ್ತಿಪಡೆದಿದ್ದರು. ಹೀಗೆ ಕೀರ್ತಿ ಪಡೆದಿದ್ದ ಶ್ರೀ ದಿವಾಕರಣಂದಿ ಸಿದ್ಧಿಪಡೆದರು ಎಂದು ಶಾಸನದ ಮೊದಲಭಾಗ ಹೇಳುತ್ತದೆ. ಈ ಭಾಗವನ್ನು ಸೂಕ್ಷ್ಮವಾಗಿ ಗಮನಿಸಿದರೆ ದಿವಾಕರಣಂದಿ ಮುನಿಗಳು ಸಮಾಧಿಮರಣವನ್ನು ಹೊಂದಿದರು ಎಂದು ಅರ್ಥ ಬರುವಂತೆ ಕಂಡು ಬರುತ್ತದೆ. "ಶ್ರೀಮದ್ದಿವಾಕರಣನ್ದಿ ಸಿದ್ಧಿ ಪಡೆದರ್ ಸ್ವಸ್ಥಂ" ಎಂಬ ವಾಕ್ಯವನ್ನು ಗಮನಿಸಿದರೆ ದಿವಾಕರಣನ್ದಿಗಳು ಸಲ್ಲೇಖನ ವ್ರತದಿಂದ ಸಮಾಧಿಮರಣವನ್ನು ಪಡೆದರು ಎಂದು ಹೇಳಬಹುದು.

ಅನೇಕ ಗುಣಗಳಿಂದ ಅಲಂಕೃತನಾದ ಸತ್ಯ, ಸದಾಚಾರ, ನಯ ವಿನಯ, ಶೀಲ ಸಂಪನ್ನನಾದ ಆಹಾರ, ಅಭಯ, ಭೈಶಜ್ಯ, (ಔಷಧಿ) ಶಾಸ್ತ್ರದಾನಿಯಾದ ಜಿನ ಗಂಧೋದಕದಿಂದ ಪವಿತ್ರವಾದ ತಲೆಯನ್ನು ಹೊಂದಿರುವ ಶ್ರೀಮತ್ ಸಾನ್ತಯ್ಯ ಪಟ್ಟಣಸ್ವಾಮಿಯು ಪಂಚಪರಮೇಷ್ಠಿಗಳ ಸಮಕ್ಷಮದಲ್ಲಿ ಆರಾಧನಾ ವಿಧಿಯಿಂದ (ಸಲ್ಲೇಖನ ವ್ರತದಿಂದ) ಸಮಾಧಿ ಮರಣವನ್ನು ಪಡೆಯಲು ಆತನ ಮಗನಾದ ನಾಗಯ್ಯ ಪಟ್ಟಣಸ್ವಾಮಿ ಮತ್ತು ಅಳಿಯನಾದ ನೇಮಯ್ಯ ಸಟ್ಟಿಯು ಈ ಶಾಸನವನ್ನು ಹಾಕಿಸಿದರು.

ಇತರ ಅಂಶಗಳು : ಈ ಶಾಸನವು ಕನ್ನಡ ಲಿಪಿ ಹಾಗೂ ಕನ್ನಡ ಭಾಷೆಯಲ್ಲಿದೆ. ಶಾಸನದಲ್ಲಿ ಱ, ೞ, ಗಳ ಬಳಕೆಯಾಗಿದೆ. ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ. ಲಿಪಿ ಸ್ವರೂಪದ ಆದಾರದಿಂದ ಈ ಶಾಸನವು 11ನೆಯ ಶತಮಾನದ್ದೆಂದು ನಿರ್ಧರಿಸಬಹುದು. ಈ ಶಾಸನದಲ್ಲಿ ಉಲ್ಲೇಖಿತರಾದ ಸಾನ್ತಯ್ಯ ಪಟ್ಟಣಸ್ವಾಮಿ, ಹಾಗೂ

ಆತನ ಅಳಿಯ ನೇಮಯ್ಯ ಸಟ್ಟಿಯ ಬಗ್ಗೆ ಮತ್ತಾವುದೇ ವಿವರಗಳು ಅಲ್ಲಿಯ ಬೇರಾವುದೇ ಶಾಸನಗಳಲ್ಲಿ ಉಪಲಬ್ಧವಾಗಿಲ್ಲದಿದ್ದರೂ ಸಹ ದಿವಾಕರಣಂದಿ ಮುನಿಗಳ ಬಗ್ಗೆ ಹಲವಾರು ಶಾಸನಗಳು ಉಲ್ಲೇಖಿಸುತ್ತವೆ. ಪ್ರಸ್ತುತ ಕುಂದಾದ್ರಿಯ ಶಾಸನವನ್ನು ಬಿಟ್ಟು ಬೇರೆ ಎಂಟು ಶಾಸನಗಳಲ್ಲಿ ದಿವಾಕರಣಂದಿಯ ಉಲ್ಲೇಖ ಬರುತ್ತದೆ. ಹಾಗೂ ಶಾಂತಿನಾಥ ಕವಿಯ ಸುಕುಮಾರ ಚರಿತೆ ಮತ್ತು ನಯಸೇನ ಕವಿಯ ಧರ್ಮಾಮೃತದಲ್ಲಿ ದಿವಾಕರಣಂದಿಯ ಉಲ್ಲೇಖ ಬರುತ್ತದೆ.

ದಿವಾಕರಣಂದಿಯ ಗುರುಪರಂಪರೆಯನ್ನು ಡಾ॥ ಹಂಪನಾ ಅವರು ಈ ರೀತಿ ಗುರ್ತಿಸಿದ್ದಾರೆ.[1]

*

ಬೆಟ್ಟದ ದಾಮಣ (ನ)ಂದಿ

↓

ಶ್ರೀಧರ

ಮಳ ಧಾರಿದೇವ ಚಂದ್ರಕೀರ್ತಿ ಭಟ್ಟಾರಕ — ಏಳಾಚಾರ್ಯ

ನಯಣಂದಿದೇವ, — ವರ್ಧಮಾನ ಮುನಿ (ಶಾಂತಿನಾಥನ ಗುರು) — ದಿವಾಕರಣ (ನ) ಂದಿ

ಕರ್ನಾಟಕದಲ್ಲಿ ಆಗಿಹೋದ ಜೈನ ಮುನಿಪರಂಪರೆಯಲ್ಲಿ ದಿವಾಕರಣಂದಿ ಮುನಿಗಳಿಗೆ ಅತ್ಯಂತ ಹಿರಿಯ ಸ್ಥಾನವಿದೆ. ಪ್ರಾಕೃತ, ಸಂಸ್ಕೃತ ಕನ್ನಡ ಈ ಮೂರೂ ಭಾಷೆಗಳಲ್ಲಿ ಪ್ರಕಾಂಡ ಪಂಡಿತರಾದ ದಿವಾಕರಣಂದಿಗಳು ಉಮಾ ಸ್ವಾಮಿಯವರ ತತ್ವಾರ್ಥ ಸೂತ್ರವನ್ನು ಕನ್ನಡಕ್ಕೆ ಭಾಷಾಂತರಿಸಿ ಕನ್ನಡ ಸಾಹಿತ್ಯ ಲೋಕಕ್ಕೆ ತಮ್ಮ ಅಮೂಲ್ಯವಾದ ಕೊಡುಗೆಯಾಗಿ ಕೊಟ್ಟಿದ್ದಾರೆ. (ಡಾ. ಹಂಪ.ನಾ. ಅವರು ಇದನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.) ಈ ರೀತಿ ಹಲವಾರು ಅಂಶಗಳಿಂದ ಅತ್ಯಂತ ಪ್ರಮುಖರಾದ ಶ್ರೀ ದಿವಾಕರಣಂದಿಗಳು ಕುಂದಾದ್ರಿಯಲ್ಲಿ ಸಲ್ಲೇಖನ ವ್ರತದಿಂದ ಮುಡಿಪಿದುದು ಪ್ರಸ್ತುತ ಕುಂದಾದ್ರಿಯ ಶಾಸನದಿಂದ ತಿಳಿದುಬರುತ್ತದೆ. ಬಹುಶಃ ಸಾನ್ತಯ್ಯ ಪಟ್ಟಣಸ್ವಾಮಿಯೂ ದಿವಾಕರಣಂದಿಯೂ ಮುಡಿಪಿದ ಕಾಲದಲ್ಲಿಯೇ ಸಲ್ಲೇಖನವ್ರತದಿಂದ ಮುಡಿಪಿದುದರಿಂದ ಇಬ್ಬರೂ ಮುಡುಪಿದ ವಿಷಯವನ್ನೂ ಒಂದೇ ಶಾಸನದಲ್ಲಿ ಬರೆದಿರಬಹುದೆಂದು ಊಹಿಸಬಹುದು[2]

1. ಡಾ॥ ಹಂಪ.ನಾ. ಭಟ್ಟಾರಕ ದಿವಾಕರಣ (ನ)ಂದಿ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂಪುಟ 70. ಸಂಚಿಕೆ 1 ಪುಟ. 12

2. ಕುಂದಾದ್ರಿಯ ಕ್ಷೇತ್ರ ಕಾರ್ಯದಲ್ಲಿ ಸಹಾಯಮಾಡಿದ ಆತ್ಮೀಯರಾದ ಎಸ್. ವಿ. ನಾಗರಾಜ, ಲಕ್ಷ್ಮೀನಾರಾಯಣ, ಎಸ್. ವಿ. ಸದಾನಂದ ಮತ್ತು ರಘುವೀರ್ ಹೆಗಡೆಯವರಿಗೆ ಕೃತಜ್ಞತೆಗಳು.

ಪ್ರಾಚೀನ ಗಂಟೆಗಳ ವೈವಿಧ್ಯತೆ

ಎಂ. ಎಲ್. ಶಿವಶಂಕರ

ಗಂಟೆಯು ದೇವಾಲಯಗಳಲ್ಲಿ ಅದರಲ್ಲೂ ಹೆಚ್ಚಾಗಿ ಪೂಜಾದಿ ಕಾಲಗಳಲ್ಲಿ ನುಡಿಸುವ ಒಂದು ಬಗೆಯ ವಾದ್ಯ. ಗಂಟೆ ಎಂಬುದು ಸಂಸ್ಕೃತದ ಘಂಟಾ ಎಂಬುದರ ತದ್ಭವ ರೂಪ. ಶೈವಾಗಮಗಳಲ್ಲಿ ತಿಳಿಸಿರುವಂತೆ ಸಾಮಾನ್ಯ ಗಂಟೆಯ ಎತ್ತರ 5″ ಎತ್ತರದಷ್ಟೇ ವಿಸ್ತಾರ. ಓಷ್ಠ ನಾಲ್ಕು ಗೋದಿಯ ದಪ್ಪ. ಶಿಖರ 1″, ಕತ್ತು ¼″, ನಾಲಗೆ 1″. ಮಹಾ ಗಂಟೆಯಾದರೆ ಎತ್ತರ 7″, ವಿಸ್ತಾರ 8″, ಶಿಖರ 2″, ಇರಬೇಕೆಂದಿದೆ.

ಸಾಮಾನ್ಯವಾಗಿ ಸುಮಾರು ನಾಲ್ಕು ಭಾಗ ತಾಮ್ರಕ್ಕೆ ಒಂದು ಭಾಗ ತವರ ಮಿಶ್ರಿತವಾಗಿರುವ ಕಂಚಿನಲ್ಲಿ ಗಂಟೆಗಳನ್ನು ತಯಾರಿಸುತ್ತಾರೆ. ಕೆಲವೊಮ್ಮೆ ಸತು, ಸೀಸ ಮತ್ತು ಬೆಳ್ಳಿ ಇವನ್ನೂ ಉಪಯೋಗಿಸುವುದುಂಟು. ಗಂಟೆಯಲ್ಲಿ ಬೆಳ್ಳಿಯನ್ನು ಬಳಸುವುದರಿಂದ ಅದರ ಧ್ವನಿ ಮಧುರವಾಗುವುದೆಂದು ನಂಬಿಕೆ. ಬಹಳ ಕಾಲದಿಂದ ಇದ್ದರೂ, ಈಗ ಅದನ್ನು ಶಾಸ್ತ್ರವಿದರು ಒಪ್ಪುವುದಿಲ್ಲ. ಗಂಟೆಯ ಆಕೃತಿ, ಅದಕ್ಕೆ ಇರುವ ತಿರುವುಗಳು, ಅದರ ಉದ್ದ, ಗಾತ್ರ, ಅಡ್ಡಳತೆ, ವಿವಿಧ ಭಾಗಗಳಲ್ಲಿನ ದಪ್ಪ ಇವನ್ನು ಅನುಭವದಿಂದ ನಿರ್ಧರಿಸಿರುತ್ತಾರೆ.

ಗಂಟೆಯ ಉಬ್ಬಿರುವ ತೆರೆದ ಭಾಗದಲ್ಲಿನ ಹೊರ ಮತ್ತು ಒಳ ಮುಖಗಳ ವಕ್ರತೆಗಳು ಪರಸ್ಪರ ವಿರುದ್ಧವಾಗಿವೆ. ಇದನ್ನು ಶಬ್ದ ಧನು (ಸೌಂಡ್ ಬೋ) ಎಂದು ಕರೆಯುವರು. ಗಂಟೆಯ ಈ ಭಾಗದ ಸ್ಥೂಲತೆ ಅಲ್ಲಿಯ ಅಡ್ಡಳತೆಯ ಸುಮಾರು ಹನ್ನೆರಡನೆಯ ಒಂದು ಭಾಗದಿಂದ ಹದಿನೈದನೆಯ ಒಂದು ಭಾಗದಷ್ಟಿರುವುದು. ಗಂಟೆಯೊಳಗೆ ತೂಗಾಡುತ್ತಿರುವ ಅದರ ನಾಲಿಗೆ ಭಾಗವನ್ನು ಪ್ರಹರಿಸಿದಾಗ ಶಬ್ದದ ಉತ್ಪತ್ತಿಯಾಗುತ್ತದೆ.

ವಿವಿಧಾಕೃತಿ ಮತ್ತು ಗಾತ್ರಗಳ ಗಂಟೆಗಳಿರುವಂತೆಯೇ ಗಂಟೆಗಳ ತೂಕಗಳಲ್ಲೂ ಭಾರಿ ಪ್ರಮಾಣದ ವೈವಿಧ್ಯ ಕಂಡು ಬರುವುದು. ಹಲವಾರು ಟನ್‌ಗಳಷ್ಟು ಭಾರವಾದ ಗಂಟೆಗಳಿಂದ ಹಿಡಿದು ಕೆಲವೇ ಔನ್ಸ್‌ಗಳಷ್ಟು ಹಗುರವಾಗಿರುವ ಗಂಟೆಗಳೂ ಉಂಟು. 1733 ರಲ್ಲಿ ಎರಕವಾದ ಸಾರ್ ಕೊಲೆ ಕೊರ್ (ಗಂಟೆಗಳ ರಾಜ) ಎಂಬ ರಷ್ಯನ್ ಗಂಟೆ ಪ್ರಪಂಚದಲ್ಲೇ ಅತಿ ದೊಡ್ಡದೆನ್ನಲಾಗಿದೆ. 19′ ಎತ್ತರ, 22¼′ ವ್ಯಾಸವಿರುವ ಇದರ ತೂಕ 193 ಟನ್ನುಗಳು. ಇದನ್ನು ಒಂದು ಬಾರಿಯೂ ಬಾರಿಸಲಾಗಲಿಲ್ಲ

ವೆಂಬುದು ಗಮನಾರ್ಹ ಸಂಗತಿ. ಇವನ್ನು ಬಂಧಿಸಿದ್ದ ಆಧಾರಗಳು ಸುಟ್ಟುಹೋದ ವಾಗಿ ಗಂಟೆ ಮೇಲಿನಿಂದ ಕೆಳಗೆ ಬಿದ್ದು, ಒಡೆದು ಹೋಯಿತು (1737). ಹೀಗೆ ಬಿದ್ದಾಗ 11 ಟನ್ ತೂಕದ ಅದರ ಭಾಗ ಒಂದು ಮುರಿದು ಬಿದ್ದಿತು. ಟ್ರಾಟ್ಸ್ ಕೋಯ್‌ನಲ್ಲಿನ ಒಂದು ಗಂಟೆ 171 ಟನ್ ತೂಕವಿದೆ. ಸದ್ಯದಲ್ಲಿ ಬಳಕೆಯಲ್ಲಿರುವ ಗಂಟೆಗಳಲ್ಲಿ ಅತಿದೊಡ್ಡದು (110 ಟನ್) ಮಾಸ್ಕೋದಲ್ಲಿದೆ. ಇತರ ದೊಡ್ಡ ಗಂಟೆಗಳಿವು : ಪೀಕಿಂಗಿನದು (53 ಟನ್), ನಾತ್ರಡಾಮ್‌ನದು (17 ಟನ್)· ಫಿಲಡೆಲ್ಫಿಯದ ಇಂಡಿಪೆಂಡೆನ್ಸ್ ಗಂಟೆ ($6\frac{1}{2}$ ಟನ್), ವೆಸ್ಟ್‌ಮಿನಿಸ್ಟರಿನ ಬಿಗ್ ಬೆನ್ ($13\frac{1}{2}$ ಟನ್), ಇದು ಈಗ ಬಿರುಕು ಬಿಟ್ಟಿದೆ. ಅತಿ ಎತ್ತರದಲ್ಲಿನ ಗಂಟೆಗಳೆಂದರೆ ನ್ಯೂಯಾರ್ಕಿನ ಮೆಟ್ರೋಪಾಲಿಟನ್ ಲೈಫ್ ಇನ್ಶೂರೆನ್ಸ್ ಗೋಪುರದಲ್ಲಿನ (ಎತ್ತರ 700′) ಗಂಟೆಗಳು. ಇವುಗಳ ಶಬ್ದ 28 ಮೈಲಿಗಳವರೆಗೂ ಕೇಳಿಸುತ್ತದೆನ್ನಲಾಗಿದೆ.

ಗಂಟೆಯ ನಿರ್ಮಾಣ ಕಾಲದಲ್ಲಿ ಮೊದಲು ಅದರ ಆಕಾರದ ಅಚ್ಚನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಹೊಸ ಗಂಟೆಯ ರೂಪರೇಖೆಗಳ ನಿರ್ಣಯದ ಬಳಿಕ ಅಚ್ಚಿನ ಒಳಭಾಗವನ್ನು ಇಟ್ಟಿಗೆಯಿಂದ ಕಟ್ಟಿ ಅದರ ಮೇಲೆ ಗಾರೆಯನ್ನು ಲೇಪಿಸಿ ಅದರ ಮೈಯನ್ನು ಬೇಕಾದ ರೂಪಕ್ಕೆ ತರಲಾಗುವುದು. ಇದರ ಆಧಾರದ ಮೇಲೆ ಭಂಗುರವಾದ ಜೇಡಿ ಮಣ್ಣಿನಲ್ಲಿ ನಕಲಿ ಗಂಟೆಯನ್ನು ನಿರ್ಮಿಸಲಾಗುವುದು. ಅನಂತರ ನಿಜಗಂಟೆಯ ಒಳಭಾಗದಲ್ಲಿರಬೇಕಾದ ಅಲಂಕಾರ ವಿನ್ಯಾಸ ಬರವಣಿಗೆ ಮೊದಲಾದು ವನ್ನು ನಕಲಿ ಗಂಟೆಯ ಮೇಲೆ ಮೇಣದಲ್ಲಿ ರೂಪಿಸಲಾಗುವುದು. ಈಗ ಎರಕದ ಅಚ್ಚಿನ ಹೊರಭಾಗವನ್ನು ಗಾರೆಯಿಂದ ರಚಿಸಿ ಕಾದ ಕಂಚಿನ ದ್ರವದ ಒತ್ತಡವನ್ನು ತಡೆದುಕೊಳ್ಳುವಂತೆ ಕಬ್ಬಿಣದ ಪೆಟ್ಟಿಗೆಗಳಿಂದ ಈ ಭಾಗಗಳನ್ನು ಬಲಪಡಿಸಲಾಗುವುದು. ಈಗ ಅಚ್ಚಿನ ಒಳ ಮತ್ತು ಹೊರಭಾಗಗಳನ್ನು ಮಣ್ಣಿನ ನಕಲಿ ಗಂಟೆ) ಚೆನ್ನಾಗಿ ಒಣಗಿಸಿ, ಸುಡುವುದರಿಂದ, ಮೇಣ ಕರಗಿ, ಹೊರ ಬಂದು – ಅಚ್ಚಿನ ಒಳ ಮತ್ತು ಹೊರ ಭಾಗಗಳು ಹೆಚ್ಚು ಗಟ್ಟಿಯಾಗುತ್ತದೆ. ಅಲಂಕಾರ ವಿನ್ಯಾಸ ಬರವಣಿಗೆಗಳ ಋಣ ರೂಪ ಅಚ್ಚಿನ ಹೊರ ಮುಖದ ಒಳ ಪದರದಲ್ಲಿ ಮುದ್ರಿತವಾಗಿರುತ್ತದೆ. ಈಗ ಹೊರ ಮುಚ್ಚಳವನ್ನು ಹೊರತೆಗೆದು ನಕಲಿ ಗಂಟೆಯನ್ನು ಚಕ್ಕೆ ಎಬ್ಬಿಸಿ ತೆಗೆಯಲಾಗುವುದು. ಮತ್ತೆ ಹೊರ ಭಾಗವನ್ನು ಅದರ ಸ್ಥಾನ ಭದ್ರಪಡಿಸಿ ನಕಲಿ ಗಂಟೆಯ ಸ್ಥಳದಲ್ಲಿ ಕರಗಿದ ಕಂಚಿನ ದ್ರವವನ್ನು ಸುರಿಯಲಾಗುವುದು. 18 ಟನ್ ಭಾರವುಳ್ಳ ಗಂಟೆಯನ್ನು ನಿರ್ಮಿಸಲು ಕಾದ ಲೋಹದ ದ್ರವವನ್ನು ಸುರಿಯಲು ಸುಮಾರು 15 ನಿಮಿಷಗಳಾದರೂ ಬೇಕಾಗುವುದು. ಇದು ಆರಲು 36 ಗಂಟೆಗಳು ಬೇಕು. ಅನಂತರ ಅಚ್ಚನ್ನು ತೆಗೆದು ಗಂಟೆಯ ಮೇಲ್ಮೈಗಳಲ್ಲಿರಬಹುದಾದ ಪ್ರಕ್ಷೇಪಗಳನ್ನು ತೆಗೆದು ಹಾಕಿ ಮೇಲ್ಮೈಯನ್ನು ನಯಗೊಳಿಸಿ ಮೆರಗು ಕೊಡಲಾಗು ವುದು. ಗಂಟೆಯ ತಯಾರಿಕೆಯಲ್ಲಿ ಕರಗಿದ ಲೋಹ ದ್ರವವನ್ನು ಅಚ್ಚಿನೊಳಗೆ

ಹೊಯ್ಯುವುದೇ ಅತ್ಯಂತ ಕ್ಲಿಷ್ಟವಾದ ಕಾರ್ಯ. ಬಿರುಕು ಬೀಳದಂತೆಯೂ, ಮಧ್ಯೆ ಗಾಳಿ ಸೇರದಂತೆಯೂ ಎಚ್ಚರ ವಹಿಸಬೇಕು. ಇಲ್ಲದಿದ್ದರೆ ಗಂಟೆಯ ಸ್ವರ ಕೆಡುವುದು. ಅಚ್ಚಿನಿಂದ ಹೊರತೆಗೆದ ಗಂಟೆಯ ಹೊರ ಮುಖವನ್ನು ಉಜ್ಜುವುದರಿಂದ ಸ್ವರದ ಸ್ಥಾಯಿಯನ್ನು ಎತ್ತರಿಸಬಹುದು. ಒಳ ಮುಖವನ್ನು ಉಜ್ಜುವುದರಿಂದ ಸ್ವರ ಸ್ಥಾಯಿಯನ್ನು ಕಡಿಮೆ ಮಾಡಬಹುದು.

ಸಾಮಾನ್ಯವಾಗಿ ಭಾರಿ ಪ್ರಮಾಣ ಗಂಟೆಯನ್ನು ಅದರ ಶಿಖಾಗ್ರದಲ್ಲಿ ತೂಗು ಹಾಕಿ ಗಂಟೆ ಉಬ್ಬಿರುವ ಕೆಳತುದಿಯಲ್ಲಿ ಸುತ್ತಿಗೆಯಿಂದ ಬಡಿದು ಶಬ್ದ ಹೊರ ಹೊಮ್ಮುವಂತೆ ಮಾಡುವರು.

ಗಂಟೆಯನ್ನು ಸರಿಯಾದ ರೀತಿಯಲ್ಲಿ ಬಾರಿಸಿದಾಗ ಎರಡು ರೀತಿಯ ಸ್ವರಗಳು ಹೊರ ಹೊಮ್ಮುತ್ತವೆ. (1) ಪ್ರವಾಹ ಧ್ವನಿ (2) ಗುಂಜನ ಸ್ವರ (ಹಂ ನೋಟ್) ಗಂಟೆಯಿಂದ ಹೊರ ಹೊಮ್ಮುವ ಶಬ್ದದಲ್ಲಿ ಪ್ರಹಾರ ಧ್ವನಿಯನ್ನು ಬಿಟ್ಟು ಐದು ಮುಖ್ಯ ಅಂಶ ಸ್ವರಗಳನ್ನು ಗುರುತಿಸಬಹುದೆಂದು ತಿಳಿಯಲಾಗಿದೆ. ಇವನ್ನು ನಾಮಿನಲ್ ಪಂಚಮಿ, ಟರ್ಸ್. ಮೂಲನಾದ ಮತ್ತು ಗುಂಜನ ಸ್ವರವೆಂದು ಕರೆಯುತ್ತಾರೆ. ಹೆಚ್ಚಿನ ಸ್ಥಾಯಿ ಇರುವ ಇನ್ನೂ ಕೆಲವು ಅಂಶ ಸ್ವರಗಳಿರುವುದಾದರೂ, ಅವು ಬಹು ಬೇಗ ಕಾಲದೊಂದಿಗೆ ನಶಿಸಿ ಹೋಗುತ್ತವೆ.

ಗಂಟೆಯ ನಿರ್ಮಾಪಕರು ಗಂಟೆಯ ಬೇರೆ ಬೇರೆ ಭಾಗಗಳಲ್ಲಿನ ದಪ್ಪವನ್ನು ಯಥೋಚಿತವಾಗಿ ವ್ಯವಸ್ಥಿತಗೊಳಿಸಿ ಲಘು ಸ್ವರಗಳು (ಲೋಅರ್) ಸಾಧ್ಯವಾದಷ್ಟು ಮಟ್ಟಿಗೆ ಗೌಣ ಸ್ವರಗಳಾಗಿರುವಂತೆಯೂ (ಹಾರ್ಮೋನಿಕ್ಸ್) ಗುಂಜನ ಸ್ವರ, ಮೂಲ ವಾದ ಮತ್ತು ನಾಮಿನಲ್ ಇವು ಮೂರು ಅನುಕ್ರಮವಾಗಿರುವ ಅಷ್ಟಮ ಸ್ವರಗಳಾ ಗಿರುವಂತೆಯೂ, ಮೂಲನಾದ ಮತ್ತು ಪ್ರಹಾರ ಧ್ವನಿ ಇವು ಒಂದೇ ಸ್ಥಾಯಿವುಳ್ಳ ವಾಗಿರುವಂತೆಯೂ ಅಳವಡಿಸಲು ಪ್ರಯತ್ನಿಸುತ್ತಾರೆ.

ಪ್ರವಾಹ ಧ್ವನಿಯೊಂದರ ಇರುವಿಕೆ ಅತ್ಯಂತ ವಿಲಕ್ಷಣವಾಗಿದ್ದು, ಅದು ಇದುವರೆಗೆ ಯಾವುದೇ ರೀತಿಯ ಭೌತ ವಿವರಣೆಗೂ ಸಿಕ್ಕಿಲ್ಲ. ಗಂಟೆಯಿಂದ ಹೊರ ಹೊಮ್ಮುವ ಅಂಶ ಸ್ವರಗಳನ್ನು ಶ್ರುತಿಕವಲೊಂದರ ಸಹಾಯದಿಂದ ಅನುವಾದ ದಿಂದ ಹೊರಡಿಸಬಹುದಾದರೂ ಪ್ರಹಾರ ಧ್ವನಿಯನ್ನು ಈ ರೀತಿ ಹೊರ ಸೆಳೆಯು ವುದು ಅಸಾಧ್ಯ. ಅಲ್ಲದೆ ಅನುವಾದಕರ ಸಹಾಯದಿಂದ ಈ ನಾದವನ್ನು ಪತ್ತೆ ಹಚ್ಚಲು ಸಾಧ್ಯವಿಲ್ಲ. ಹಾಗೂ ಮತ್ತೊಂದು ಸ್ವರದೊಂದಿಗೆ (ಪ್ರಹಾರ ಧ್ವನಿಯ ಮಟ್ಟದಷ್ಟೇ ಇರುವ) ವಿಸ್ಪಂದನಗಳನ್ನು (ಬೀಟ್ಸ್) ಉತ್ಪತ್ತಿ ಮಾಡಲು ಸಾಮರ್ಥ್ಯ ಹೊಂದಿರುವುದಿಲ್ಲ.

ಗಂಟೆಯೊಂದರ ಬಡಿತ ಅನಂತರದ ವಿವಿಧ ಕಾಲಗಳಲ್ಲಿನ ಶ್ರವಣ ಸಂಬಂಧವಾದ ವರ್ಣಪಟಲಗಳನ್ನು ಜೋನ್ಸ್ ಮತ್ತು ಅಲ್ಡರ್‌ಮನ್ ಎಂಬ ವಿಜ್ಞಾನಿಗಳು ನಿರ್ಣಯಿಸಿರುವರು. ಕರ್ಬಿನ್ ಮತ್ತು ಗಿಯುನಿನಿ ಎಂಬ ವಿಜ್ಞಾನಿಗಳು ಟ್ರೈಸರ್ ವಿಧಾನದಿಂದ ಅಂದರೆ ವಾಲ್ವ್ ಆಂದೋಲಕ ಮತ್ತು ಧ್ವನಿ ವರ್ಧಕ ಯಂತ್ರಗಳ ಸಹಾಯದಿಂದ ಪ್ರತಿಯೊಂದು ಅಂಶ ಸ್ವರವನ್ನು ಗಂಟೆಯಲ್ಲಿ ಹೊರ ಹೊಮ್ಮಿಸಿ ಗಂಟೆಯು ಕಂಪನ ಮೇಲ್ಮೈಯನ್ನು ಸ್ಟೆತೊಸ್ಕೋಪ್ ಒಂದರಿಂದ ಪರೀಕ್ಷಿಸುವುದರಿಂದ, ಗಂಟೆಯು ಮೇಲಿನ ನಿಸ್ಪಂದನ ರೇಖೆಗಳ ಶೋಧನೆಯಲ್ಲಿ ಜಯಪ್ರದರಾಗಿದ್ದಾರೆ.

ಗಂಟೆಯು ಕಂಪನ ರೀತಿಗಳು ಗುಂಡಾದ ಕಟ್ಟಿಗಿರುವಂತೆಯೂ ಇರುತ್ತವೆ. ನಿಸ್ಪಂದನ ಅಥವಾ ಸ್ಥಾಯೀರೇಖೆಗಳಿಂದ ಅಂಚು ಪರಸ್ಪರ ವಿರುದ್ಧ ರೀತಿಯಲ್ಲಿ ಕಂಪಿಸುತ್ತಿರುವ ಭಾಗಗಳಾಗಿ ವಿಭಾಗಿಸಲ್ಪಡುವುದು. ಈ ರೀತಿ ವಿಭಾಗಿಸಲ್ಪಟ್ಟ ಭಾಗಗಳು ನಾಲ್ಕಕ್ಕೆ ಕಡಿಮೆಯಿಲ್ಲದಂತೆ ಸಮ ಸಂಖ್ಯೆಯಲ್ಲಿರುತ್ತವೆ. ಅಂಚಿನ ವಿವಿಧ ಭಾಗಗಳಲ್ಲಿ ತೂಗುಹಾಕಿದ ಬೆಂಡಿನ ಚೆಂಡೊಂದನ್ನು ಸ್ಪರ್ಶಿಸುವುದರಿಂದ ಇದನ್ನು ಪರೀಕ್ಷಿಸಬಹುದು ಅಥವಾ ಗಂಟೆಯನ್ನು ತಲೆ ಕೆಳಗು ಮಾಡಿ ನೀರನ್ನು ತುಂಬಿ ಅಂಚನ್ನು ಕಮಾನೊಂದರಿಂದ ನುಡಿಸುವುದರಿಂದ ನಿಸ್ಪಂದನ ರೇಖೆಗಳನ್ನು ಬಿಟ್ಟು ಉಳಿದೆಲ್ಲ ಬಿಂದುಗಳಿಂದಲೂ ಹೊರ ಬರುತ್ತಿರುವ ಅಲೆಗಳನ್ನು ಕಾಣಬಹುದು.

ಗಂಟೆ ಹಕ್ಕಿ : ಹಲವಾರು ಜಾತಿಯ ಹಕ್ಕಿಗಳ ಕೂಗು ಗಂಟೆಯ ನಿನಾದವನ್ನು ಹೋಲುವುದರಿಂದ ಈ ಹಕ್ಕಿಗಳಿಗೆ ಈ ಹೆಸರಿದೆ.

(1) 6ನೆಯ ಶತಮಾನವೆನ್ನಲಾದ ಜಪಾನಿನ ಕಂಚಿನ ಗಂಟೆ, ಇಟಲಿಯ ಜಿಸೊ ಆದ, ಪ್ರಾಚ್ಯಶಿಲಾ ವಸ್ತು ಸಂಗ್ರಹಾಲಯದಲ್ಲಿದೆ.

(2) ಮಾಸ್ಕೋದಲ್ಲಿರುವ ಸೌತ್ ಕೊಲೊಕೊಲ್ ಗಂಟೆ

ಬರ್ಮಾದ ಘಂಟೆ

ಬೌದ್ಧ ಶಕ – 2377

ಭಗವಾನ್ ಬುದ್ಧನ ಅವಶೇಷಗಳನ್ನೊಳಗೊಂಡ ಉತ್ತರಾಂಗ್ ಬೆಟ್ಟದ ಮೇಲಿರುವ ಪಗೋಡಾಕ್ಕೆ ಪಾದ ತಾವ್ಯಮಠಾಧಿಪತಿಯು ಮಾಡಿದ ದಾನವನ್ನು ಇದರಲ್ಲಿ ಕೆತ್ತಿದೆ. ಈ ಕೆತ್ತನೆ ಕೆಲಸವು ಬರ್ಮೀ ಶಕ 1195ರಲ್ಲಿ ಪೂರ್ಣಗೊಂಡಿತೆಂದು ಇದರಲ್ಲಿ ಹೇಳಲಾಗಿದೆ. 1906ರಲ್ಲಿ ಸೇನಾಧಿಕಾರಿಯೊಬ್ಬರು ಈ ಗಂಟೆಯನ್ನು ಬೆಂಗಳೂರಿನಲ್ಲಿರುವ ವಸ್ತು ಸಂಗ್ರಹಾಲಯಕ್ಕೆ ಕೊಟ್ಟರು. (ಛಾಯಾ ಚಿತ್ರ 1)



ಬೆಂಗಳೂರಿನ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಲ್ಪಡುತ್ತಿರುವ ಬರ್ಮಾದ ಗಂಟೆ

ಮತ್ತೊಂದು ಗಂಟೆ ಶಿವಮೊಗ್ಗದ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಲ್ಪಟ್ಟಿದೆ. ಇದರ ವಿವರ :

ಅಕ್ವಿಷನ್ ನಂ. 711

ಕ್ಯಾಟಲಾಗ್ ಕಾರ್ಡ್ ನಂ. 123

ಪಡೆದ ವಿಧಾನ : ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿರುವ ನಗರದ ಕೋಟೆ ವೆಂಕಟರಮಣಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳ ಕೊಡುಗೆ

ಇದೇ ವಸ್ತು ಸಂಗ್ರಹಾಲಯದಲ್ಲಿ ಮತ್ತೊಂದು ಕಂಚಿನ ಗಂಟೆಯ ಮೇಲ್ಭಾಗದಲ್ಲಿ 1713ರಲ್ಲಿ ಕೆತ್ತಲಾದ ಈ ಕೆಳಕಂಡ ಬರಹವಿದೆ.

FECIT
AMSTER lodami
ANNO DOMINI 1713

ಅಳತೆ : 47 x 40 ಸೆಂ.ಮೀ.

ಕಾಲ : ಕ್ರಿ.ಶ. 18ನೆಯ ಶತಮಾನ

ಗಂಟೆಗಳನ್ನು ವಸ್ತು ಸಂಗ್ರಹಾಲಯಗಳಲ್ಲಿ, ಚರ್ಚ್‌ಗಳಲ್ಲಿ, ದೇವಾಲಯಗಳಲ್ಲಿ ಹಾಗೂ ಕಲಾಕೃತಿಗಳನ್ನು ಮಾರುವವರಲ್ಲಿ ನಾವು ನೋಡಬಹುದಾಗಿದೆ. ಗಂಟೆಗಳ ಕ್ಯಾಟಲಾಗ್ ಒಂದನ್ನು ತಯಾರಿಸಿದರೆ ಉತ್ತಮ.

ಗಂಟೆಯ ನಾಲಗೆಯಲ್ಲಿ ಸರಸ್ವತಿಯೂ, ಮುಖದಲ್ಲಿ ಬ್ರಹ್ಮನೂ, ಹೊಟ್ಟೆಯಲ್ಲಿ ರುದ್ರನೂ, ದಂಡದಲ್ಲಿ ವಾಸುಕಿಯೂ, ತುದಿಯಲ್ಲಿ ಚಕ್ರವೂ, ಅಧಿದೇವತೆಗಳಾಗಿ ನೆಲಸಿದ್ದಾರೆ. ಘಂಟಾಸ್ವನವನ್ನು ನಾದಬ್ರಹ್ಮನೆಂದು ಸಂಭೋಧಿಸಲಾಗಿದೆ. ಇವರನ್ನು ಪೂಜಿಸಿ ಬಳಿಕ ಗಂಟೆಯನ್ನು ಹೊಡೆಯಬೇಕು. ಉಪಯೋಗಿಸುವಾತ ತನ್ನ ನಾಭಿಯ ಕೆಳಗೆ ಬರುವಂತೆ ಗಂಟೆಯನ್ನು ಹಿಡಿದುಕೊಂಡು ಹೊಡೆಯಬಾರದು. ಗಂಟೆಯ ಧ್ವನಿಯಲ್ಲಿ ಒಡಕಾಗಲೀ, ಮರ್ಮರ ಘರ್ಷದ ಶಬ್ದಗಳಾಗಲೀ ಇರಬಾರದು. ಗಂಟೆಯ ಮೇಲೆ ಹನುಮಂತ, ಚಕ್ರ, ಗರುಡ, ವೃಷಭ, ಶೂಲ, ಕಮಲ ಇತ್ಯಾದಿ ಚಿಹ್ನೆಗಳಿರುವುದುಂಟು.

ಯಾವುದೊಂದು ಶುಭ ಕಾರ್ಯಗಳನ್ನಾಗಲೀ, ಘಂಟಾನಾದವಿಲ್ಲದೆ ಪ್ರಾರಂಭಿಸುವಂತಿಲ್ಲ. ಪದ್ಮ ಪುರಾಣದಲ್ಲಿ "ಸರ್ವವಾದ್ಯಮಯೀ ಘಂಟಾವಾದ್ಯ ಬಾವೇ ನಿಯೋಜಯೇತ್" ಎಂದು ತಿಳಿಸಿರುವಂತೆ, ಗಂಟೆ ಸರ್ವಮಂಗಳ ವಾದ್ಯಗಳ ಪ್ರತೀಕ

ವಾಗಿದೆ. ಸ್ಕಂದ ಪುರಾಣದಲ್ಲಿ 'ಘಂಟಾನಾದೇನ ದೇವೇಶಃ ಪ್ರೀತೋಭವತಿಕೇಶವಃ" ಎಂದಿದೆ. ನಾಗಾರಿ ಚಿಹ್ನಿತಾ ಘಂಟಾ ರಥಾಂ ಗೇನಾ ಸಮನ್ವಿತಾ ವಾದನಾತ್ ಕುರುತೇನಾಶಂ, ಜನ್ಮಮೃತ್ಯು ಭಯಾನಿಜ ಎಂಬ ಆರ್ಯೋಕ್ತಿಯೂ ಇದೆ. ಇದರಂತೆ ಭಗವಂತನ ನಿತ್ಯ ಕಿಂಕರನಾದ ಗರುಡ ಇಲ್ಲವೆ ಚಕ್ರದಿಂದ ಅಂಕಿತವಾದ ಗಂಟೆಯ ನಾದದಿಂದ ಭಗವಂತ ಪ್ರೀತನಾಗುತ್ತಾನಾಗಿ, ಜನ್ಮಮೃತ್ಯುಭಯಗಳು ತಪ್ಪುತ್ತವೆ. ದೇವೀ ಮಹಾತ್ಮ್ಯದಲ್ಲಿ ಹಿನಸ್ತಿದೈತ್ಯತೇಜಾಂಸಿ ಸ್ವನೇನಾಪೂರ್ಯ ಯಾಜಗತ್ ಸಾ ಘಂಟಾಪಾತುನೋ ದೇವೀ ಪಾಪೇಭ್ಯಃ ಸುತಾನಿನ ಎಂದಿದೆ. ಇದರಂತೆ, ಘಂಟಾನಾದದಿಂದ, ಮನಸ್ಸಿನಲ್ಲಿರುವ ರಾಕ್ಷಸೀ ಭಾವನೆಗಳು ದೂರೀಕೃತವಾಗಿ ದೈವೀಭಾವನೆಗಳು ಆವಿರ್ಭವಿಸುತ್ತವೆ. ಓಂಕಾರ ನಾದ ಸಹಿತ ಘಂಟಾಧ್ವನಿರೂಪ ವರ್ಣಶಕ್ತಿಯಿಂದ ವರ್ಣ ಘಟಕ ಮಂತ್ರಗಳು ತನ್ನಿಷ್ಟ ದೇವತೆಗಳು ಎಚ್ಚರಗೊಳ್ಳುವುದರಿಂದ, ದೇವಪೂಜಾರಂಭ ಕಾಲದಲ್ಲಿ ಗಂಟೆಯನ್ನು ಪೂಜಿಸಿದ ಬಳಿಕ ಧ್ವನಿ ಮಾಡಬೇಕು. ಈ ಕಾರಣದಿಂದಾಗಿ ಗಂಟೆಯನ್ನು ಮಂತ್ರ ಮಾತ್ರಾ ಎಂದು ಕರೆಯುತ್ತಾರೆ. ಸಚ್ಚಿದಾನಂದ ಸಾಕ್ಷಾತ್ಕಾರಕ್ಕೆ ಮೂಲವಾದ ನಾದ ತತ್ವದ ಭಾಗ್ಯ ಪ್ರಯೋಗವಾಗಿ ಗಂಟೆ ಬಳಕೆಗೆ ಬಂದಿತೆಂದು ಕ್ರಮೇಣ ದೇವತಾ ಲಾಂಛನವೆಂಬ ಗೌರವವನ್ನು ಹೊಂದಿ ಪೂಜಾರ್ಹವಾಯಿತೆಂದು ಹೇಳಲಾಗಿದೆ. ಘಂಟಾನಾದವಿಲ್ಲದ ಪೂಜೆಇಲ್ಲ. ಪೂಜಾ ಕಾಲವನ್ನು ಬಿಟ್ಟು ಇತರ ಕಾಲಗಳಲ್ಲಿ ಘಂಟಾನಾದವಿಲ್ಲ.

ದೇವತಾರ್ಚನೆ, ಆವಾಹನೆ, ಧೂಪ, ದೀಪ, ಅರ್ಘ್ಯ, ನೈವೇದ್ಯ, ಜಪ, ಸ್ತುತ್ಯವಸಾನ, ಪೂರ್ಣಾಹುತಿ, ವಿಶ್ವಕ್ಸೇನಾರ್ಚನೆ, ಗಣಪತಿಪೂಜೆ, ಬಲಿ ಪ್ರಧಾನ ಈ ಕಾಲಗಳಲ್ಲಿ ಘಂಟಾನಾದ ಮಾಡಬೇಕು. ಗಂಟಾನಾದ ಎಚ್ಚರಪಡಿಸುವುದು ಮಾತ್ರವಲ್ಲದೆ, ಸರ್ವವಿಘ್ನಗಳನ್ನೂ ನಾಶಪಡಿಸಿ ಮಂಗಳವನ್ನುಂಟುಮಾಡುತ್ತದೆ. ಗಂಟೆಯನ್ನು ಆಗ ಮೋಕ್ತ ಪ್ರಕಾರದಲ್ಲಿ ಪ್ರತಿಷ್ಠೆ ಮಾಡಿ ಬಳಿಕ ಉಪಯೋಗಿಸಬೇಕು. ಅಸಂಸ್ಕೃತ ಗಂಟೆಯನ್ನು ಬಾರಿಸುವುದರಿಂದ ಪೂಜೆ ನಿಷ್ಫಲವಾಗುತ್ತದೆ. ಗಂಟೆಯನ್ನು ಬಾರಿಸುವುದಕ್ಕೆ ಮೊದಲು ಆಗ ಮಾರ್ಥಂತು ದೇವನಾಂ ಗಮನಾರ್ಥಂತು ರಾಕ್ಷಸಾಂ, ಕರ್ವೇ ಘಂಟಾರವಂ ತತ್ರ ದೇವತಾಹ್ವಾನ ಲಾಂಛನಂ (ದೇವರ ಆಗಮನಕ್ಕಾಗಿ ರಕ್ಕಸರ ನಿರ್ಗಮನಕ್ಕಾಗಿ ದೇವಸ್ಥಾನ ಲಾಂಛನವಾದ ಘಂಟಾ ಧ್ವನಿಯನ್ನು ಮಾಡುತ್ತೇವೆ) ಎಂದು ಹೇಳಿ ಬಳಿಕ ಘಂಟಾನಾದ ಮಾಡುವುದು ಇಂದಿಗೂ ರೂಢಿಯಲ್ಲಿದೆ. ವೈಷ್ಣವ ದೇವಾಲಯಗಳಲ್ಲಿ ಮಹಾನಿವೇದನ ಕಾಲದಲ್ಲಿ ಬಾರಿಸುವುದಕ್ಕಾಗಿಯೇ ಪ್ರತ್ಯೇಕವಾದ ಒಂದು ದೊಡ್ಡ ಗಂಟೆ ಇರುತ್ತದೆ. ಕೆಲವೆಡೆ ದೇವಮಂದಿರದ ಬಾಗಿಲಿಗೆ ಚಿಕ್ಕ ಚಿಕ್ಕ ಗಂಟೆಗಳನ್ನು ಜೋಡಿಸಿರುವುದುಂಟು. ಕ್ರೈಸ್ತರ ಪ್ರಾರ್ಥನಾ ಮಂದಿರಗಳಲ್ಲಿ ಒಂದು ದೊಡ್ಡ ಗಂಟೆ ಇರುತ್ತದೆ. ಪ್ರಾರ್ಥನೆಗೆ ಮೊದಲು ಎಲ್ಲರೂ ಮಂದಿರಕ್ಕೆ ಬಂದು

ಸೇರಲು ಅನುಕೂಲವಾಗುವಂತೆ, ಈ ಗಂಟೆಯನ್ನು ಬಾರಿಸುತ್ತಾರೆ. ಹಿಂದೂ ದೇವಾಲಯಗಳಲ್ಲೂ, ದೇವರ ಮುಂಭಾಗದಲ್ಲಿ ದೊಡ್ಡ ಗಂಟೆಗಳನ್ನು ಕಟ್ಟಿರುತ್ತಾರೆ. ಭಕ್ತರು ದೇವರ ದರ್ಶನಕ್ಕೆ ಹೋದಾಗ ಗಂಟೆ ಬಾರಿಸಿ, ಬಳಿಕ ನಮಸ್ಕರಿಸುತ್ತಾರೆ.

ಶ್ರೀ ವೈಷ್ಣವ ಆಚಾರ್ಯ ಪರಂಪರೆಗೆ ಸೇರಿದ ವೇದಾಂತ ದೇಶಿಕರು ಭಗವಂತನ ಘಂಟಾವತಾರವೆಂದು ಪ್ರತೀತಿ. ಶ್ರೀ ವೆಂಕಟೇಶ್ವರನ ಭಕ್ತರಾದ ಇವರ ಮಾತಾ ಪಿತೃಗಳಿಗೆ ಬಹುಕಾಲದವರೆಗೆ ಮಕ್ಕಳಿರಲಿಲ್ಲ. ಒಮ್ಮೆ ಇವರು ಮಲಗಿದ್ದಾಗ ತಿರುಪತಿಯ ವೆಂಕಟೇಶನ ಗರ್ಭಗೃಹದ ಗಂಟೆಯನ್ನು ಆಚಾರ್ಯರ ತಾಯಿಯವರು ನುಂಗಿದಂತೆ ಸ್ವಪ್ನವನ್ನು ಕಂಡು ಬೆಳಿಗ್ಗೆ ದೇವಸ್ಥಾನದಲ್ಲಿ ನೋಡಲಾಗಿ ಆ ಗಂಟೆಯು ಇರಲಿಲ್ಲ. ತಮ್ಮ ತಾಯಿಯ ಗರ್ಭದಲ್ಲಿ ತಿರುಪತಿಯ ಶ್ರೀ ವೆಂಕಟೇಶ ಘಂಟಾ ಸ್ವರೂಪನಾಗಿ ಶ್ರೀ ಆಚಾರ್ಯರು ಅವಿರ್ಭವಿಸಿ ಘಂಟಾವತಾರವೆಂದು ಪ್ರಸಿದ್ಧರಾಗಿ ಶಿಷ್ಯವರ್ಗದ ದಾನವೀಭಾವಗಳನ್ನು ದೂರೀಕರಿಸಿ, ಅವರ ಮನಸ್ಸಿನಲ್ಲಿ ದೈವೀಭಾವನೆ ಗಳನ್ನು ನೆಲೆಗೊಳಿಸುವಂತೆ ಮಾಡಿದ ಮಹಾತ್ಮರಾಗಿದ್ದಾರೆ. ಲೌಕಿಕವಾಗಿ ಗಂಟೆಯ ಬಳಕೆ ಎಷ್ಟೆಂಬುದನ್ನು ನೋಡಬಹುದು. ಜಿಲ್ಲಾ ಮತ್ತು ತಾಲ್ಲೂಕು ಕಛೇರಿಗಳಲ್ಲಿ ವೇಳೆ ತಿಳಿಸಲು ದಿನದಿನವೂ ಗಂಟೆ ಭಾರಿಸುತ್ತಾರೆ. ಇಲ್ಲಿನ ಗಂಟೆಗಳಿಗೆ ಜಾಗಟೆಯ ರೂಪವಿರುತ್ತದೆ. ದಪ್ಪಲೋಹದ ತಟ್ಟೆಯೊಂದನ್ನು ಹಗ್ಗದಿಂದ ನೇತುಹಾಕಿದ್ದು, ಅದನ್ನು ಲೋಹದ ಇಲ್ಲವೆ ಮರದ ದಾಂಡಿನಿಂದ ಬಾರಿಸುವುದು ವಾಡಿಕೆ. ಶಾಲೆ ಕಾಲೇಜುಗಳಲ್ಲಿ ರೈಲು ನಿಲ್ದಾಣದಲ್ಲಿ ಉಪಯೋಗಿಸುವ ಗಂಟೆಗಳು ಮತ್ತೊಂದು ಬಗೆಯವು. ದಪ್ಪದೊಂದು ಕಬ್ಬಿಣದ ತುಂಡನ್ನು ಹಗ್ಗದಿಂದ ನೇತುಕಟ್ಟಿ ಅದನ್ನು ಸುತ್ತಿಗೆಯಿಂದ ಬಡಿಯುವುದು ಇಲ್ಲಿನ ವಾಡಿಕೆ. ಬೀದಿಯಲ್ಲಿ ವ್ಯಾಪಾರಕ್ಕೆ ಬರುವ ತಿಂಡಿಗಾಡಿಯವರು ನಾಲಗೆಯಿರುವ ದಪ್ಪಗಂಟೆಯನ್ನು ಭಾರಿಸಿ ತನ್ನ ಆಗಮನವನ್ನು ಘೋಷಿಸುತ್ತಾನೆ. ರಸಿಕರನೇಕರು ಮನೆಯ ಬಾಗಿಲಿಗೆ ತೋರಣದಂತೆ ಕಿರುಗಂಟೆಯ ಸಾಲನ್ನು ಅಳವಡಿಸುತ್ತಾರೆ. ಬಾಗಿಲ ತೆರೆ ಅಲುಗಿದಾಗ ಗಂಟೆಗಳ ಕಿರುದನಿ ಮನೋ ಹರವಾಗಿ ಹೊಮ್ಮುತ್ತದೆ. ಜಾನುವಾರುಗಳ ಕೊರಳುಗಳಿಗೆ ಮರದ ತೆಂಗಿನ ಕರಟದ ಲೋಹದ ಗಂಟೆಗಳನ್ನು ಕಟ್ಟುವ ಅಭ್ಯಾಸ ಹಳ್ಳಿಗಳಲ್ಲಿ ಇಂದಿಗೂ ಉಳಿದು ಬಂದಿದೆ. ಕಾಡಿನಲ್ಲಿ ಮೇವಿಗಾಗಿ ಸಂಚರಿಸುವ ಪ್ರಾಣಿಗಳಿಗೆ ಇದರಿಂದ ಬಹಳ ಪ್ರಯೋಜನವಿದೆ. ಗಂಟೆಯ ದನಿಯನ್ನು ಆಲಿಸಿ ಪ್ರಾಣಿಗಳು ಒಂದನ್ನೊಂದು ಹಿಂಬಾಲಿಸುತ್ತವೆ. ಕಳೆದು ಹೋದ ಪ್ರಾಣಿಯ ಜಾಡು ಹಿಡಿಯುವಾಗಲೂ ಗಂಟೆಯ ದನಿ ಅನುವಾಗುತ್ತದೆ. ವಾದ್ಯಮೇಳದಲ್ಲಿ ತಾಳದ ಒಂದು ಪ್ರಭೇದವಾಗಿ ಬಳಕೆಯಲ್ಲಿರುವ ತ್ರಿಕೋನ ಗಂಟೆಯ ಒಂದು ರೂಪವೇ ಆಗಿದೆ. ಒಂದು ದೃಷ್ಟಿಯಲ್ಲಿ ಜಲತರಂಗವೂ ಗಂಟೆಯ ವಿನ್ಯಾಸವನ್ನೇ ಹೋಲುತ್ತದೆನ್ನಬಹುದು. ಫ್ಲಾಂಡರ್ಸಿನ ಜನ ಅನೇಕ ಶತಮಾನ ಗಳಿಂದ ಪ್ರಯೋಗ ನಡೆಸಿ, ಗಂಟೆಗಳಿಂದಲೇ ವಾದ್ಯವೊಂದನ್ನು ತಯಾರಿಸುವ ಪ್ರಯತ್ನ ಮಾಡಿದ್ದಾರೆನ್ನಲಾಗಿದೆ.

ಕಳೆದು ಹೋದ ಗೆಳತಿಗೆ

ಸವಿತಾ ರೆಡ್ಡಿ

ನಿನ್ನ ಕಪ್ಪು ಕಂಗಳಲ್ಲಿ
ಕನಸುಗಳನ್ನು
ಮುಗ್ಧತೆಯ ತುಂಟ ನಗುವನ್ನು
ಮಾತ್ರವೇ ಕಂಡಿದ್ದ ನನಗೆ
ಮೊನ್ನೆಯ ನಿನ್ನ ಹೊಸತನ
ದಂಗುಬಡಿಸಿದ್ದು ನಿಜ

ಗಂಭೀರ ಮುಖದಲ್ಲಿ
ನೂರು ನೋವಿನ ರೇಖೆಗಳು
ತಮ್ಮದೇ ಕಥೆ ಹೇಳುವಾಗ
ಎಲ್ಲೋ ತಪ್ಪಿದ ಅನುಭವ

ಹೊಸ ಬಾಳಿನ ಹೊಸ ಲೋಕಕ್ಕೆ
ಸಾವಿರ ನಿರೀಕ್ಷೆಗಳ ಹೊತ್ತು
ನೀ ಅಡಿಯಿರಿಸಿದ್ದ ದಿನಗಳು
ನೆನ್ನೆ–ಮೊನ್ನೆಯಂತೆ ಹಸಿರಾಗಿರುವಾಗಲೇ
ಕಾಣದ ಲೋಕಕ್ಕೇಕೆ ನಿನ್ನ ಪಯಣ ?

ಹೂ ಮನಸ ತುಂಬಿದ್ದ
ಕಹಿ ಮನಸುಗಳ ಭಾರ
ನನ್ನೊಂದಿಗೂ ಹಂಚಿಕೊಳ್ಳಲಾರದ
ನಿನ್ನ ಅಸಹಾಯಕತೆಗೆ
ಏನು ಹೇಳಲಿ ಹೇಳು !

ನಿನ್ನೆಲ್ಲಾ ಭ್ರಮೆಗಳು
ನೀ ಕಟ್ಟಿಕೊಂಡ ಕನಸುಗಳು
ಇಷ್ಟು ಬೇಗ ಹೇಗೆ

ಹುಸಿಗೊಂಡವೇ ಗೆಳತಿ !
ಯಾರ ಧಾಳಿಗೆ ಸಿಕ್ಕಿ
ನಲುಗಿ ಹೋದವು ಹೇಳು
ಅರಳುವ ಮುನ್ನವೇ
ಮಂದಾರ ಮೊಗ್ಗುಗಳು.

ವಿದಾಯದ ಕೊನೆಗಳಿಗೆಯಲ್ಲೂ
ತುಂಬಿದ್ದ ಕಂಗಳೊಂದಿಗೆ
ಮುಗುಳ್ನಕ್ಕ ತುಟಿಗಳು
ನನ್ನೆಲ್ಲಾ ಪ್ರಶ್ನೆಗಳಿಗೆ
ಉತ್ತರವಾಗಲೇ ಇಲ್ಲ.

ಈಗಲೂ ನಿನಗಾಗಿ ಮಿಡಿಯುವ
ನೀನಿಲ್ಲದ ಈ ದಿನಗಳು
ನಿಜ ಹೇಳಲೇ ಗೆಳತಿ
ನಾ ಬದುಕಿದ್ದೂ ಸತ್ತಂತಿರುವ
ಬೇಡದ ವಿಷಗಳಿಗೆಗಳು.

ಸೋಸಲಿಯ ವೀರೇಶಾಂಕಿತ ಅಪ್ರಕಟಿತ ಸ್ವರವಚನ

(ಸಂ) ಎಸ್. ಶಿವಣ್ಣ

ರಾಗ : ಧನ್ಯಾಸಿ

ಸಕಲ ಸಂಸಾರ ಸಾಗರವ ದಾಂಟುವರಿಲ್ಲಿ
ಮುಕುರದೊಳು ಪ್ರತಿಬಿಂಬವಾದ ಶಿವನನೆ ನೆನದು
ಅಕಲಂಕವಾದ ಚಿತ್ಕಲೆಯಲ್ಲಿ ಚಿತ್ರವನು ನಿರಿಸುವುದು ಯೋಗಿ ಜನರು ॥ಪಲ್ಲ॥

ಎಂಬತ್ತುನಾಲ್ಕುಲಕ್ಷ ಪ್ರಾಣಿಕುಕ್ಷಿಯೊಳು
ಸಂಭವಿಸಿ ಕುಂಭಾರಚಕ್ರದಂದದಿ ಬರ್ಪ
ಕುಂಭಿನಿಯೊಳು ಮನುಷ್ಯನ ಕಂಡು ಶ್ರೀ ಗುರುಸ್ವಾಮಿ ಕೃಪೆಯಿಂದೆ ನೋಡಿ
ದಂಬಾದಿ ಗುಣವಳಿದು ರಕ್ತಬೀಜಗಳಿಂದೆ
ಸಂಭವಿಸಿದಾ ಶರಿರವನು ಶುದ್ಧವ[ಂ] ಮಾಡಿ
ಸಂಭ್ರಮದಿ ಲಿಂಗವನು ಕರತಲದಿ ಧರಿಸಿದಾ ಶ್ರೀ ಗುರುವನೇ ನೆನೆವುದು ೧

ಶ್ರೀ ಗುರುಸ್ವಾಮಿ ಬೋಧಿಸಿದ ಬೋಧೆಯ ತಿಳಿದು
ಭೋಗಿಭೂಷಣನ ಪದಕಮಲಗಳ ಧ್ಯಾನಿಸುತ
ಭೋಗಪೂಗದಲ್ಲಿ ವಿರಾಗತೆಯ ಕೈಕೊಂಡು ಸಿದ್ಧವಿಷ್ಟರವ ಕಟ್ಟಿ
ಜಾಗರದೊಳು ದೇಹಾಚಾರಣೆಯನಳವಡಿಸಿ
ನಾಗಕನ್ನಿಕೆಯನೆಬ್ಬಿಸುವ ಸೂರ್ಯನ ಬೆಳಗಿ
ಮಾಗಮುಟ್ಟುತ್ತ ಸುಧಾಂಶುವನೆಡಹಿ ನಾಡಿಶುದ್ಧಿಯನು ಮುಟ್ಟಿವಾಡಿ ೨

ಇಪ್ಪತ್ತುವೊಂದುಸಾಸಿರದ ಅಜಿನೂಜಿಜಾಂ
ತಪ್ಪದೀ ದಿವಸವೊಂದಕೆ ಚರಿಸುವ ಪ್ರಾಣ
ನೊಪ್ಪದಿಂ ಹಂಸ ಹಂಸಾಯೆಂದು ಜಪಿಸೂದು ಈರೇಳುಲೋಕವೆಲ್ಲ
ಕಲ್ಪಿಸೀ ಪ್ರಾಣಮಂತ್ರವನು ತಳತಳಕಾಗಿ

ವೊಪ್ಪದಿಂದವೇ ಸೋಹಂವೆಂದು ಜಪಿಸುತಿರೆ
ಬಪ್ಪ ಭವಮಾಲೆ ಹಿಂಗುಗು ಪ್ರಾಣಾಪಾನಂಗಳೈಕ್ಯವಾಗಿಪ್ಪುದದುವೆ ೩

ಪ್ರಾಣಪಾನೋರ್ಧದಿಂದವೆ ಚಂದ್ರ ಸೂರ್ಯರಿಗೆ
ಜಾಣತನದಿಂದವೇ ಕೂಟತಪ್ಪದು ದಿಟವು
ಮಾಣದೇ ಶಿಬಿ ಬಿಂದು ಚಿತ್ತಗಳು ಒಡಗೂಡಿ ಶೂನ್ಯಮಾರ್ಗವನೇಱಲು
ಕಾಣಿಕೆಯು ಬೆಳಗ ನೋಡುತ ನಾದವನು ಕೇಳಿ
ಪೂಣಿಸುತ ಚಿತ್ತವನು ನಾದಬಿಂದುಗಳೊಳಗೆ
ಪ್ರಾಣಲಿಂಗವನಱಿಯಬೇಕೆಂದು ಷಟ್ಕಮಲ ಷಟ್ಪದಗಳಾಗಿಪ್ಪರು ೪

ಅಂಗುಷ್ಠ ತರ್ಜನಿ ಮಧ್ಯ ಮೂಗು ಕಿವಿಗಳಿಂ
ದಂಗವಿವರಗಳಾದ ಕರ್ಣಾಕ್ಷಿ ನಾಸಿಕದ
ಸಂಗಸಂಬಂಧವನು ಮುಟ್ಟಿ ಮಾಡುತಿರೆ ಕತ್ತಲೆಯು ಠಾವಿನೊಳಗೆ
ಕಂಗಳಿಂ ನೋಡಬಾರದ ಬೆಳಗು ಗತ್ತಲೆಯು
ಲಿಂಗದೊಳು ಮನವಡಗಿ ಭೇರಿನಾದವ ಕೇಳಿ
ಮಾಂಗಲ್ಯಮೂರ್ಛೆಯಿಂ ಮಧ್ಯಮಾರ್ಗವೆ ರಾಜಮಾರ್ಗವಾಗಿ
ರುತಿರ್ಪರು ೫

ರಾಜಮಾರ್ಗವ ಪೊಕ್ಕು ಮನ ಪವನ ಘನ ದೃಷ್ಟಿ
ಗೋಜೆಯಿಪ್ಪತ್ತೊಂದು ಬೀದಿಯಲಿ ಸುಳಿದಾಡಿ
ಮೂಜಗದಲವರು ಕಾಣದ ಕೊಳನ ನೆಱೆ ಕಂಡು ರಾಜೀವದೊಳಗೆ ಪೊಗಲು
ರಾಜೀವದೊಳು ಸೂರ್ಯ ರಾಜ ಶಿಖಿಗಳ ನಡುವೆ
ತೇಜರೂಪಿಂದೆ ವಾಲಾಗ್ರ ಮಾತ್ರದ ಲಿಂಗ
ಪೂಜೆಯಿಂದವೆ ಭೋಗಮೋಕ್ಷತಪ್ಪದು ದಿಟವು ನಿಗಮಾಗಮಂಗಳವಕೆ ೬

ನೋಡುವದ ನೋಡಿದರೆ ಕಾಣಬಹುದಾಲಿಂಗ
ನೋಡಿ ಸರಿವೆರಸದೇ ಬಿಡದೆ ಚಿಲ್ಲಿಂಗದೊಳು
ಕೂಡಬೇಕನುಭವದಿ ಸಕಲ ಪ್ರಪಂಚುಗಳ ಕಳಿದುಳಿದ ಅಱಿವೆಯಾಗಿ
ಕೂಡುವದು ತಾ ಸಟೆಯು ಅಱಿವು ತನ್ಮಯವಾಗಿ
ನಾಡಾಡಿಯಲಿ ನುಡಿದು ಹೇಳಬಹುದೇ ಅಱಿವ
ರೂಢಿಯೊಳು ಸರ್ವೇಶರಾತ್ಮಜನು ಸೋಸಲಿಯ
ವೀರೇಶನೊರ್ವನಱಿವ ೭

ಆಕರ : [೬] ಬಿಡಿಗರಿ, ಬೃಹನ್ಮಠ (ಚಿತ್ರದುರ್ಗ)

ಲಂಕೇಶರ 'ತೆರೆಗಳು' ಒಂದು ವಿವರಣಾತ್ಮಕ ಅಧ್ಯಯನ

ಹೊ. ನ. ನೀಲಕಂಠೇಗೌಡ

ಕನ್ನಡದ ನವ್ಯ ಸಾಹಿತ್ಯದಲ್ಲಿ ಸ್ವಾತಂತ್ರ್ಯೋತ್ತರ ಭಾರತದ ಅವನತಿಯನ್ನು ಕುರಿತಂತಹ ಪ್ರಬುದ್ಧ ಕಾಳಜಿ ತುಂಬಿಕೊಂಡಿರುವುದನ್ನು ಕಾಣಬಹುದು. ಸ್ವಾತಂತ್ರ್ಯ ಪೂರ್ವದ ರಾಷ್ಟ್ರೀಯ ಚಳವಳಿಯ ಕಾವಿನಲ್ಲಿ ನಮ್ಮ ಅರಿವಿಗೆ ಬಾರದಿದ್ದ ನಮ್ಮ ಸಮಾಜದ ಆಷಾಢಭೂತಿತನ, ಡಂಬಾಚಾರದ ಧಾರ್ಮಿಕತೆ, ವರ್ಗತಾರತಮ್ಯ, ವರ್ಣ ತಾರತಮ್ಯ, ಮುಂತಾದವುಗಳು ಸ್ವಾತಂತ್ರ್ಯಾನಂತರದ ದಿನಗಳಲ್ಲಿ ದೈತ್ಯಾಕಾರವಾಗಿ ಮೂರ್ತರೂಪ ಪಡೆದುಕೊಳ್ಳತೊಡಗಿದವು. ಪಾಶ್ಚಾತ್ಯರಿಗಿಂತ ನಮ್ಮದೇ ನಾಡಿನ ನಮ್ಮದೇ ಆದ ಮೌಢ್ಯ ತುಂಬಿದ ಆಚಾರ ವಿಚಾರಗಳೇ ನಮ್ಮ ಸಂಸ್ಕೃತಿಯ ಅವನತಿಗೆ ಸಂಪೂರ್ಣ ಹೊಣೆ ಎಂಬುದರ ಅರಿವಿನಿಂದಾಗಿ ಸ್ವಾತಂತ್ರ್ಯಾನಂತರದ ಕಾಲದಲ್ಲಿ ಇಲ್ಲಿನ ಸಾಹಿತ್ಯ ಕೃತಿಗಳಲ್ಲಿ ಅಸಂಗತ ನಾಟಕಗಳು ರೂಪುಗೊಂಡವು. ಪಾಶ್ಚಿಮಾತ್ಯ ರಾಷ್ಟ್ರಗಳ ಭಾಷೆಗಳಲ್ಲಿ ದ್ವಿತೀಯ ಮಹಾಯುದ್ಧದ ನಂತರ ರಚಿತವಾದ ಅಸಂಗತ ನಾಟಕಗಳೂ ಸಹಾ ಕನ್ನಡದಲ್ಲಿ ಅಸಂಗತ ನಾಟಕಗಳ ಹುಟ್ಟಿಗೆ ಪ್ರೇರಕ ಮತ್ತು ಪೂರಕವಾದವು ಎಂದು ಹೇಳಬಹುದು.

ಅಸ್ತಿತ್ವವಾದವನ್ನು ಪ್ರತಿಪಾದಿಸಿದ ಆಲ್ಬರ್ಟ್ ಕಾಮೂ "ಮನುಷ್ಯನು ಹೊರ ಜಗತ್ತಿನ ಜೊತೆಯಲ್ಲಿ ಹೊಂದಿಕೊಳ್ಳಲಾರದಂತಹ ಸ್ಥಿತಿಯನ್ನು ನಿರ್ಮಾಣ ಮಾಡಿ ಕೊಂಡಾಗ ತನ್ನಿಂದಲೇ ತಾನು ಬೇರೆ ಎನ್ನುವ ಅನುಭವವನ್ನು ಪಡೆದುಕೊಂಡಾಗ, ಪ್ರತಿನಿತ್ಯವೂ ಅರ್ಥವಿಲ್ಲದ ಜೀವನ ರೀತಿಯ ಬದುಕು, ಮೌಲ್ಯಗಳನ್ನು ಆಶ್ರಯಿಸಿವೆ ಎಂಬ ಕಲ್ಪನೆ ಇದ್ದಕ್ಕಿದ್ದಂತೆ ಕೊನೆ ಕಾಣುವುದನ್ನು ಅಸಂಗತ ನಾಟಕಗಳಲ್ಲಿ ಕಾಣ ಬಹುದು" ಎಂದು ಹೇಳುತ್ತಾನೆ.

ಈಗ ಕನ್ನಡದ ಉತ್ತಮ ಅಸಂಗತ ನಾಟಕಗಳಲ್ಲೊಂದಾದ ಲಂಕೇಶರ 'ತೆರೆಗಳು' ನಾಟಕವನ್ನು ಗಮನಿಸೋಣ. ಲಂಕೇಶರು ಕನ್ನಡ ಸಾರಸ್ವತ ಲೋಕದಲ್ಲಿ ವಿಶಿಷ್ಟ ಮನೋಧರ್ಮದ ಪ್ರತಿಭಾವಂತ ವ್ಯಕ್ತಿ. ತಮ್ಮ ಸಾಹಿತ್ಯದ ಮೂಲಕ ಹೊಸ ತಿಳಿವಳಿಕೆಯನ್ನು ಹೊಸ ಸಂವಹನ ಕ್ರಿಯೆಯನ್ನು ಮೂಡಿಸಹೊರಟ ಅಪೂರ್ವ ವ್ಯಕ್ತಿ. ಮನುಷ್ಯನ ಅಂತರಂಗ ಬಹಿರಂಗದ ನೆಲೆಗಳನ್ನು ಅನ್ವೇಷಿಸುವುದು ಅವರ ಕೃತಿಗಳ ವೈಶಿಷ್ಟ್ಯ.

ತೆರೆಗಳು ನಾಟಕವನ್ನು ಸಹೃದಯರಾರಾದರೊಬ್ಬರು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅಲ್ಲಿ 'ಅಸಂಗತ ದಾರದಲ್ಲಿ ಸುಸಂಗತ ಮಣಿಗಳು ಪೋಣಿಸಿಕೊಂಡಿರುವುದನ್ನು ಗಮನಿಸಬಹುದು.' ಈ ನಾಟಕದಲ್ಲಿನ ನಾಲ್ಕು ಪ್ರಮುಖ ಪಾತ್ರಗಳಲ್ಲಿಯೂ ವೈವಿಧ್ಯತೆ ಇರುವುದನ್ನು ಹಾಗೂ ಮೂವರು ಸಾಮಾನ್ಯ ವ್ಯಕ್ತಿಗಳಲ್ಲಿ ಮೇಲ್ನೋಟಕ್ಕೆ ಸುಸಂಗತ ಮನಸ್ಥಿತಿಯಿದ್ದರೂ ಅವರಲ್ಲಿ ಅಂತರಂಗಿಕವಾಗಿ ಭಿನ್ನ ಮನಸ್ಸು ಹಾಗೂ ಭಿನ್ನ ಗುರಿಗಳಿರುವುದನ್ನು ಗಮನಿಸಬಹುದು.

ತೆರೆಗಳು ನಾಟಕದ ಗಂಭೀರವಾದ ಭಾಷೆಯ ಬಿಗಿಯಾದ ನಿರೂಪಣೆ, ಪಾತ್ರಗಳ ಮನೋಭಾವಕ್ಕೆ, ಸನ್ನಿವೇಶಕ್ಕೆ ಸಹಜವಾದ ಸಂಭಾಷಣೆ, ಕ್ರೌರ್ಯವನ್ನೇ ಪ್ರಾಧಾನ್ಯವಾಗುಳ್ಳ ರೌದ್ರರಸ, ಇರುವವರ ಮತ್ತು ಇಲ್ಲದವರ ನಡುವೆ ನಡೆವ ಸಂಗ್ರಾಮ. ವರ್ಗ ಸಂಘರ್ಷ, ಕ್ರೌರ್ಯದ ಮೂಲಕ ಆರಂಭವಾಗಿ ಕ್ರೌರ್ಯದಿಂದಲೇ ಮುಕ್ತಾಯಗೊಳ್ಳುವ ಕ್ರಿಯೆಯನ್ನು ಕಾಣಬಹುದು. ನಾಟಕದ ಆರಂಭದಿಂದ ಅಂತ್ಯದವರೆಗೆ ಉಸಿರು ಕಟ್ಟಿಸಿ ಸಾಯಿಸುವಂತಹ ಪರಿಸರ ನಿರ್ಮಾಣಗೊಂಡು ಕೊನೆಗೆ ಉಸಿರು ಕಟ್ಟಿಸಿ ಸಾಯಿಸುವ ಸನ್ನಿವೇಶ ನಾಟಕದ ಉನ್ನತ ಶಿಖರದಂತಿದೆ. ಈ 'ಉಸಿರು' ಕಟ್ಟಿಕೊಳ್ಳುವ ವಾತಾರಣ ನಮ್ಮ ಸುತ್ತ ನಿರ್ಮಾಣಗೊಂಡಿದ್ದೇ ಮನುಷ್ಯನಿಂದ ಎಂಬುದನ್ನು ನಾಟಕದಲ್ಲಿ ರೌದ್ರರಸವನ್ನೇ ಸ್ಥಾಯಿಭಾವವನ್ನಾಗಿಸಿಕೊಂಡಿರುವ ನಾಲ್ಕು ವ್ಯಕ್ತಿಗಳ ಅಂತರಂಗದಲ್ಲೂ ಕಾಣಬಹುದು. ಹಾಗೂ ಪ್ರಸ್ತುತ ಸಮಾಜದ ಅಂತರಂಗದೊಳಗೆ ಕಣ್ಣು ಮನಸ್ಸುಗಳೆರಡನ್ನೂ ಇಟ್ಟಾಗ ಇಂತಹ ವ್ಯಕ್ತಿಗಳು ಹೆಜ್ಜೆ ಹೆಜ್ಜೆಗೆ ಸಿಕ್ಕಿಕೊಳ್ಳುವ ಸಮಾಜವೇ ನಮ್ಮಲ್ಲಿರುವುದನ್ನು ಕಾಣಬಹುದು.

'ತೆರೆಗಳು' ನಾಟಕದ ನಾಯಕ ದಿಕ್ಕಿಲ್ಲದ ಪರದೇಶಿಯಾದ ಅನಾಮಧೇಯ ಅಪರಾಧಿ. ಅಪರಾಧಕ್ಕೆ ಸಿಲುಕಿ ಕೊನೆಗೆ ಸಾವನ್ನಪ್ಪುತ್ತಾನೆ. ಈ 'ನಾಯಕ' ಸಾರ್ವತ್ರಿಕ ಮನುಷ್ಯನಿಗೆ ಪ್ರತೀಕವಾಗಿ ಕಂಡುಬರುತ್ತಾನೆ. ಈ ಅನಾಮಧೇಯ ಅಪರಾಧಿಯ ಆಂತರಿಕ ಮನಸ್ಸಿಗೂ, ಬಾಹ್ಯ ಮನಸ್ಸಿಗೂ ಹೊಂದಾಣಿಕೆ ಇಲ್ಲದೆ ಅಂತರಂಗದಲ್ಲೇ ಆಳಲು ಹೊರಟವನಂತೆ ಕಂಡುಬರುವುದನ್ನು ನೋಡಬಹುದು. ಬಹಿರಂಗದ ಚೌಕಟ್ಟಿನಲ್ಲಿಟ್ಟು ನೋಡಿದಾಗ ಉದಾರವಾದಿಯಂತೆ ಮಾನವತಾವಾದಿಯಂತೆ ಕಂಡು ಬಂದರೂ, ಅಂತರಂಗದ ಮನೆಯ ಬಾಗಿಲನ್ನು ತೆರೆದು ಒಳಹೊಕ್ಕು ಒಂದೊಂದು ಕೊಠಡಿಯನ್ನು ಟಾರ್ಚು ಬಿಟ್ಟು ನೋಡಿದಾಗ ಕೊಲೆ, ಹಾದರ, ವಂಚನೆ ಮುಂತಾದ ದುರ್ಗುಣಗಳೇ ತುಂಬಿಕೊಂಡು ಅವರ ಮೇಲ್ಮೈಮಲಗಿರುವಂತೆ ಇವೆಲ್ಲವುಗಳಿಗೆ ಪ್ರತಿನಿಧಿಯಂತೆ ಪ್ರತಿಮೆಯಾಗಿ ಕಂಡುಬರುತ್ತಾನೆ.

ವರ್ಣ ವ್ಯವಸ್ಥೆಯ ವಿಷಮತೆಯಿಂದ ಉಂಟಾಗುವ ಕ್ರೌರ್ಯ ನಾಟಕದ ಕೇಂದ್ರವಸ್ತುವಾಗಿದೆ. ಇಲ್ಲಿರುವ ನಾಲ್ಕು ವ್ಯಕ್ತಿಗಳದು ವ್ಯಕ್ತಿ, ಕಂಠಿ, ವಿಟ್ಟ, ಕಿಟ್ಟ

ಭಾರತೀಯ ಪರಿಸರದಲ್ಲಿನ ನಾಲ್ಕು ವರ್ಣಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ವರ್ಣಗಳಿಗೆ ಪ್ರತೀಕವಾಗಿರುವುದನ್ನು ಗಮನಿಸಬಹುದು.

ಯಜಮಾನ ಸಂಸ್ಕೃತಿಯಿಂದ ಶೋಷಣೆಗೊಳಗಾಗಿದ್ದ ಇತರ ಜನರೆಲ್ಲಾ ಒಂದಾಗಿ ಊಳಿಗಮಾನ್ಯ ಸಂಸ್ಕೃತಿಯನ್ನು ನಿರ್ನಾಮ ಮಾಡಹೊರಟಿರುವಂತೆ ಮೇಲ್ನೋಟಕ್ಕೆ ಕಂಡು ಬಂದರೂ, ಯಾವ ವರ್ಣದ ಜನರೇ ಆಗಲಿ ಆತ ಯಜಮಾನ ನಾದರೆ ಅವರೂ ಸಹ ಶೋಷಕರಾಗುತ್ತಾರೆ ಹಾಗೂ ನಿರಂತರ ಶೋಷಣೆಯ ಪೋಷಕರೂ ಆಗಿರುತ್ತಾರೆಂಬುದು ನಾಟಕದ ಆಶಯವಾಗಿದೆ.

ನಾಟಕದ ಆರಂಭದಲ್ಲಿ ಶೋಧನೆಗೆ ತೊಡಗಿರುವ ಸಂಶೋಧಕರಂತೆ ಮೂರು ಜನರು ಕಂಡುಬರುತ್ತಾರೆ. ಯಜಮಾನ ಸಂಸ್ಕೃತಿಯ ಒಡೆಯನನ್ನು ಹುಡುಕುತ್ತಾ ಬಂದ ಅವರಿಗೆ ಯಜಮಾನನನ್ನು ನೋಡಿ "ಆನೆ ನೋಡ್ತಾಕ್ಬಂದು ಆಡು ನೋಡಿ ದಂಗಾತು" ಎಂಬ ಮಾತಿನಿಂದ ಈ ದಬ್ಬಾಳಿಕೆಯನ್ನು ಸುಲಭವಾಗಿ ಮುರಿದು ಹಾಕುವುದು ಅಷ್ಟೇನೂ ಕಷ್ಟವಾದುದಲ್ಲ ಎಂಬುದನ್ನು ಆನೆ-ಆಡುಗಳ ಉಪಮೆಯ ಮೂಲಕ ಹೇಳುತ್ತಾ ಮುಂದೆ ಯಜಮಾನ ಆಡಿನಂತೆ ನೇಣಗೇರುವುದನ್ನು ಲೇಖಕರು ಪ್ರತಿಮೆಯ ಮೂಲಕ ಅಭಿವ್ಯಕ್ತಪಡಿಸುತ್ತಾರೆ.

ವಿದ್ಯಾರ್ಥಿಗಳೆಂದು ಹೇಳಿಕೊಂಡು ಗುರುವಿಗೇ ಪಾಠ ಕಲಿಸುವ ಹೊಸ ಸಂಸ್ಕೃತಿ ಯೊಂದನ್ನು ಅನಾವರಣಗೊಳಿಸುವ ಇಲ್ಲಿಯ ವಿದ್ಯಾರ್ಥಿಗಳು ಕೇವಲ ವಿದ್ಯಾರ್ಥಿ ಗಳಾಗದೆ ಗುರುವಿನ ಸ್ಥಾನಕ್ಕೇ ಏರುತ್ತಾರೆ. ವಿದ್ಯಾರ್ಥಿಯೆಂದರೆ ಕಲಿಯುವವನು. ಗುರುವಿನಿಂದ ಕ್ರೌರ್ಯದ ಪಾಠ ಕಲಿತು ಅದನ್ನೇ ತನ್ನ ಗುರುವಿಗೇ ಪ್ರಯೋಗಿಸುತ್ತಾರೆ. ಕಣ್ಣಿಗೆ ಕಣ್ಣು, ರಕ್ತಕ್ಕೆ ರಕ್ತ ಎಂಬಂತಹ ಕ್ರೌರ್ಯದ ಹಿನ್ನೆಲೆಯಲ್ಲಿ ಈ ನಾಟಕದ ಕಥಾ ಹಂದರ ಹೆಣೆದುಕೊಂಡಿರುವುದನ್ನು ಕಾಣಬಹುದು.

ತಮ್ಮ ಗುರು ಕ್ರೌರ್ಯದ ಪರಮಾವಧಿಯಲ್ಲಿ 'ಯಜಮಾನನನ್ನು' ಕೊಂದು ಅವನ ಸಮಾಧಿಯ ಮೇಲೆ ಅಟ್ಟಹಾಸದ ಮೆಟ್ಟಿಲೇರಿರುವುದರ ಬಗ್ಗೆ ಆಶ್ಚರ್ಯ ಗೊಂಡು ಹುಡುಕಿಕೊಂಡು ಬಂದಿದ್ದಾರೆ. "ನಿಮ್ನ ನೋಡಿದ್ದು ತುಂಬಾ ಸಂತೋಷ ಸಾರ್" ಎಂಬ ಮಾತಿನ ಹಿಂದಿನಲ್ಲಿ ಕ್ರೌರ್ಯ ಅಂತರ್ಗತವಾಗಿರುವುದನ್ನು ಕಾಣ ಬಹುದು. 'ವ್ಯಕ್ತಿ'ಯ "ಅಲ್ಲಾ ಎಷ್ಟು ಬೆಳೆದುಬಿಟ್ಟಿದ್ದೀರ" ಎಂಬ ಮಾತಿನಲ್ಲಿ ಈ ಸಮಾಜದ ವಾಸ್ತವತೆಯನ್ನು ಆ ಮೂವರೂ ಅರ್ಥಮಾಡಿಕೊಂಡಿರುವುದನ್ನು ಗುರ್ತಿಸ ಬಹುದು. ಮಾಸ್ತರಿಗೆ ವಿದ್ಯಾರ್ಥಿ ತನ್ನ ಜೀವನದಲ್ಲಿ ನಾಳೆಗಳನ್ನು ನೂರೆಂಟು ಕನಸುಗಳ ಆದರ್ಶದೊಂದಿಗೆ ಹಾರುಕುದುರೆಯನ್ನೇರಿರುವ ಕಲ್ಪನಾ ವಿಲಾಸದಲ್ಲಿ

ನೆನ್ನಿನ ಅನುಭವ ಇಂದಿನ ವಾಸ್ತವವನ್ನು ಮೀರಿಸುವಂತಹ ಕನಸುಗಾರಿಕೆಯನ್ನು ಬಿಟ್ಟು ಸಮಾಜದ ವಾಸ್ತವತೆಯ ಒಳಮುಖವನ್ನು ತಿಳಿದುಬಿಟ್ಟರುವುದು ಆಶ್ಚರ್ಯ ತರುತ್ತದೆ.

ಕಂಠಿಯು 'ನಿಮ್ಮ ಕ್ಲಾಸಿನಲ್ಲಿ ನಾನು ಮಾನೀಟರ್ ಆಗಿದ್ದೆನೆಂದು' ಹೇಳಿಕೊಳ್ಳುತ್ತಾನೆ. ಆತ ಕ್ಷತ್ರಿಯ ವರ್ಣಕ್ಕೆ ಪ್ರತಿನಿಧಿಯಾಗಿದ್ದಾನೆ. 'ಮಾನೀಟರ್' ಮುಖ್ಯಸ್ಥನಾಗಿರುವುದಕ್ಕೆ ಸಂಕೇತ. ಕ್ಷತ್ರಿಯರು ಯಜಮಾನ ಸಂಸ್ಕೃತಿಗೆ ಪ್ರತೀಕವಾಗಿರುವುದರಿಂದ ಲೇಖಕರು ಪ್ರಜ್ಞಾಪೂರ್ವಕವಾಗಿ ಸಂಕೇತಗಳ ಮೂಲಕ ವರ್ಣವ್ಯವಸ್ಥೆಯ ಮುಖವಾಡಗಳನ್ನು ಇಲ್ಲಿಯ ಪಾತ್ರಗಳಿಗೆ ತೊಡಿಸಿ ಅದರಲ್ಲಡಗಿರುವ ಅರ್ಥಪರಂಪರೆಯನ್ನು ಸಹೃದಯನಿಗೇ ಬಿಟ್ಟಿದ್ದಾರೆ. ಕಂಠಿ ಕ್ಷತ್ರಿಯ ವರ್ಗದ ಪ್ರತೀಕನಾಗಿದ್ದು ಭದ್ರತೆಯ ಸಂಕೇತವಾದ ಬೋಲ್ಟನ್ನು ಆತನಿಂದಲೇ ತೆಗೆಸಿ ಹಾಕುವುದು ಅರ್ಥಪೂರ್ಣವಾಗಿದೆ. ಅದೇ ರೀತಿ ಏಟ್ಟಿಯು ವೈಶ್ಯರಿಗೆ ಮತ್ತು ಕಿಟ್ಟಿ ಶೂದ್ರವರ್ಣವನ್ನು ಪ್ರತಿನಿಧಿಸಿರುವುದರಿಂದ ನಾಯಿಗೆ ಸಂಕೇತವಾಗಿ ಲೇಖಕರು ಬಳಸಿಕೊಂಡಿದ್ದಾರೆ. ಸಾಂಕೇತಿಕ ಅರ್ಥವನ್ನು ಸಾಕ್ಷಾತ್ತಾಗಿ ತಿಳಿಸುವ ಶಬ್ದಶಕ್ತಿಯನ್ನು ತಮ್ಮ ಕೃತಿಯೊಳಗೆ ಬಳಸುವ ಲಂಕೇಶರು ಪ್ರತಿಭೆ ಮತ್ತು ವೈಚಾರಿಕತೆಗಳೆರಡನ್ನೂ ಬಳಸಿಕೊಂಡು ಸಾಹಿತ್ಯ ಸೃಷ್ಟಿಸಿರುವುದರಿಂದಲೇ ಅವರ ಸಾಹಿತ್ಯ ಕೃತಿಗಳು ಸಮಕಾಲೀನ ಸಾಹಿತ್ಯದಲ್ಲಿ ಶ್ರೇಷ್ಠ ಸ್ಥಾನವನ್ನು ಪಡೆದುಕೊಂಡಿದೆ.

ಕಂಠಿ, ಏಟ್ಟಿ ಮತ್ತು ಕಿಟ್ಟಿ ತಾವು ಯಾರಿಗೆ ಪ್ರತಿನಿಧಿಯಾಗಿದ್ದೇವೆಂಬುದನ್ನು ಮಾರ್ಮಿಕವಾಗಿ ತಿಳಿಸುತ್ತಾ ತನಿಖೆಗೆ ತೊಡಗಿ ಕ್ರೌರ್ಯದ ಸ್ಥಾಯಿಭಾವದತ್ತ ಸಾಗುವುದನ್ನು ಕಾಣಬಹುದು. (ಪ್ರತಿಯೊಬ್ಬ) ವ್ಯಕ್ತಿಯು ಹಂತ ಹಂತವಾಗಿ ಮೇಲೇರುತ್ತಾ ಸಾಗಿದಂತೆ, ಆತ ಹಿಂದೆ ಮಾಡಿದ್ದ ಅಪರಾಧಗಳೆಲ್ಲಾ ಅವನ ಪಾಲಿಗೆ ಮರೆಯಾಗಿರುವಂತೆ ನಟಿಸುವುದನ್ನಿಲ್ಲಿ ಕಾಣಬಹುದು. ವ್ಯಕ್ತಿ "ಏನೂ ನೆನಪಾಗ್ತಿಲ್ಲ, ನಾನೇನೂ ಮಾಡಿಲ್ಲ" ಎಂದು ಹೇಳುತ್ತಾ, ಏಟ್ಟಿ "ನಾವೋ ನೀವೋ" ಎಂದು ಕೇಳಿದಾಗ ವ್ಯಕ್ತಿಯು ಬದುಕಿನ ಮೂಲ ತತ್ವವನ್ನು ಅರ್ಥಮಾಡಿಕೊಂಡವನಂತೆ ನಸುನಗೆಯಿಂದ ಹೇಳುವ ಮಾತಿನಲ್ಲಿ ಪ್ರತಿಯೊಬ್ಬ ಮನುಷ್ಯನೂ ತನ್ನ ಬದುಕಿನ ದಿನಗಳು ಮುಗಿಯುತ್ತಾ ಬಂದಿದೆ ಎಂದಾಗ ಸಾವಿನ ಮನೆಯ ಬಾಗಿಲು ತಟ್ಟಿಕೊಂಡು ಬರಬೇಕು. ಬರದಿದ್ದರೆ ಸಾವೇ ಬಲವಂತವಾಗಿ ದೇಹ ಪ್ರವೇಶ ಮಾಡುತ್ತದೆಯಲ್ಲವೆ ?

ಈ ಸಂದರ್ಭದಲ್ಲಿ ಬಸವಣ್ಣನವರ "ಹಬ್ಬಕ್ಕೆ ತಂದ ಹರಕೆಯ ಕುರಿ" ವಚನ ನೆನಪಿಗೆ ಬರುತ್ತದೆ.

ಯಜಮಾನನ ಮೇಲೆ ಅರ್ಥಾತ್ 'ವ್ಯಕ್ತಿ'ಯ ಮೇಲೆ ಮೂವರು ಹಿಂದಿನ ರಹಸ್ಯವನ್ನು ಶೋಧಿಸಲು ಹೊರಟಾಗ ಆತನಿಗೆ ಸಾವಿನ ಬೆಲೆ ಅರಿವಾಗಿ ಎಲ್ಲರನ್ನೂ

ಹತ್ತಿರ ಕರೆದು ಹಂಚಿಕೊಂಡು ತಿನ್ನುವ ಬುದ್ಧಿ ಬರುತ್ತದೆ. ಅವರು ಆಕ್ರಮಣಶೀಲ ಮನೋಭಾವದವರಲ್ಲದಿದ್ದರೆ 'ಬನ್ನಿ ಹತ್ರ ಬನ್ನಿ, ಕೂತ್ಕೊಳ್ಳಿ ಸ್ವಲ್ಪ ಹಣ್ಣದೆ ಹಂಚಿ ಕೊಂಡು ತಿನ್ನೋಣ' ಎಂಬ ಭಾವನೆಯೇ ಆತನಲ್ಲಿ ಮೂಡುತ್ತಿರಲಿಲ್ಲ. ಸಮಯಕ್ಕೆ ತಕ್ಕಂತಹ ಬಣ್ಣ ಬದಲಾಯಿಸಿಕೊಳ್ಳುವ ಗೋಸುಂಬೆಯಂತಹ ಮನುಷ್ಯ ತುಂಬಾ ಅಪಾಯಕಾರಿಯಾಗಿದ್ದಾನೆ. ವ್ಯಕ್ತಿಯ ಈ ಮಾತುಗಳು ಸಾವಿನ ಭಯದಿಂದ ಹುಟ್ಟಿ ಬಂದದ್ದೇ ಹೊರತು ಎದೆಯಂತರಾಳದ್ದಲ್ಲ ಎನ್ನುವುದು ಅರಿವಾಗುತ್ತದೆ. ವ್ಯಕ್ತಿ ವಿಚಾರಣೆಗೆ ಒಳಗಾದಾಗ ಮೂವರಿಗೂ "ಇಲ್ಲೇ ಇದ್ದುಬಿಡಬಾರದ" ಎಂದು ಕೇಳುತ್ತಾ ಅವರ ಮನಃಪರಿವರ್ತನೆಗೆ ಪ್ರಯತ್ನಿಸುತ್ತಾನೆ. ಆದರೆ ಆತ ಹಿಂದಿನ ಯಜಮಾನನನ್ನು ಕೊಂದು ಹೇಗೆ ಮನೆಯೊಡೆಯನಾದನೆಂಬುದರ ಬಗ್ಗೆ ಅವರು ಶೋಧನೆಗೆ ತೊಡಗುತ್ತಾರೆ. 'ವ್ಯಕ್ತಿ'ಯ ಭೂತಕಾಲದ ನೆನಪುಗಳನ್ನು ವರ್ತಮಾನದ ಮುಂದೆ ನಿಲ್ಲಿಸಿ ವಿಚಾರಣೆಗೊಳಪಡಿಸಿದಾಗ 'ವ್ಯಕ್ತಿ'ಗೆ ಮೂವರ ಮೇಲೂ ಅನುಮಾನ ಉಂಟಾಗುತ್ತದೆ. ಶೂದ್ರರ ಪ್ರತಿನಿಧಿಯಾದ 'ಕಿಟ್ಟ' "ಇದ್ನೆಲ್ಲ ನೋಡ್ತಾ ನನ್ನ ತಲೆ ಸಿಡಕೊಳ್ತೈತಿ, ನನ್ನ ಕಾಲೆಲ್ಲ ಬಿದ್ಹೋಗೈತಿ. ನಂಗೆ ಒಪ್ಪಿಸಿಬಿಡ್ರಿ–ಕಣ್ಣುಮುಚ್ಚಿ ತೆಗೆಯೋದ್ರಾಗೆ..." ಎಂದು ತನ್ನವರ ಮೇಲೆ ಹಿಂದೆ ಆದ ಶೋಷಣೆಯನ್ನು ತೀರಿಸಿ ಕೊಳ್ಳಲು ಕಾತುರನಾಗಿರುವವನಂತೆ ಕಂಡುಬರುತ್ತಾನೆ. 'ಕಿಟ್ಟಿ'ಯ ಕೈಕಟ್ಟಿದಾಗ 'ವ್ಯಕ್ತಿ' ಮತ್ತೆ ದಬ್ಬಾಳಿಕೆಯ ಪ್ರತೀಕದಂತೆ ಇನ್ನಿಬ್ಬರನ್ನು ಎತ್ತಿ ಕಟ್ಟುತ್ತಾನೆ.

"ವಿಟ್ಟ : ತಪ್ಪಿಗೆ ತಕ್ಕ ಶಿಕ್ಷೆ ಆಗಲೇಬೇಕು ನೋಡಿ.

ಕಂಠಿ : ತಮಗೀಗ ಸಮಾಧಾನವಾಯಿತೆ ಸಾರ್ !

ವ್ಯಕ್ತಿ : ಶಿಕ್ಷೆ ಆಗಲಿ"

"ಕಂಠಿ : ಧರ್ಮಕ್ಕೆ ವಿರುದ್ಧ ಅಲ್ಲವೇ ಅಂತ.........

ವ್ಯಕ್ತಿ : ದುಷ್ಟರನ್ನ ಶಿಕ್ಷಿಸಬೇಕಾದದ್ದು ಎಲ್ಲರ ಕರ್ತವ್ಯ........."

ಎಂದು ಹೇಳುತ್ತಾ ತಾನೇ ನೇಣಿಗೆ ಆಹಾರವಾಗುವುದು ಅರ್ಥಪೂರ್ಣವಾಗಿದೆ. ಮನುಷ್ಯ ಸಮಯ ಸಿಕ್ಕಿದಾಗ ಮತ್ತೊಬ್ಬ ಮನುಷ್ಯನ ಮೇಲೆ ಯಾವ ರೀತಿ ಆಕ್ರಮಣ ಮಾಡಬಲ್ಲನೆಂಬುದನ್ನು ವ್ಯಕ್ತಿಯ ಮಾತುಗಳಿಂದ ಅರಿಯಬಹುದು.

ಮೂರೂ ಜನರ ಒರಟು ಮಾತುಗಳಿಂದ ಇವರು ಪೋಲೀಸಿನವರೆಂಬ ಅನುಮಾನ ಮೂಡಲಾರಂಭಿಸುತ್ತದೆ. ರಾಜಕಾರಣಿ ಮತ್ತು ಪೋಲಿಸ್ ಇಬ್ಬರೂ ಎಂತಹ! ಕೆಲಸವನ್ನಾದರೂ ಮಾಡಬಹುದು; ಮಾಡಿದ ಕೆಲಸವನ್ನು ಮುಚ್ಚಬಹು ದೆಂಬ ಮಾತಿನ ಹಿಂದೆ 'ವ್ಯಕ್ತಿ' ಅನುಭವಿಯಂತೆ ಕಾಣುತ್ತಾನೆ.

ವ್ಯಕ್ತಿಯ ಹಿಂದೆ ನೆರಳಿನಂತೆ ಹಿಂಬಾಲಿಸುವ ನಾಯಿಯನ್ನು ಲೇಖಕರು ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ನಾಯಿ ನಮ್ಮ ಕರ್ಮಕ್ಕೆ ಸಂಕೇತವಾಗಿ ಪುರಾಣ ಕಾಲದಿಂದಲೂ ಬಳಕೆಯಾಗಿರುವ ಪ್ರತಿಮೆ. ಅದೇ ರೀತಿ ಇಲ್ಲಿಯೂ ವ್ಯಕ್ತಿಯನ್ನು ನಾಯಿ ಸದಾ ಹಿಂಬಾಲಿಸುತ್ತದೆ. ಕ್ಲಾಸಿನ ಬಾಗಿಲಂತು ತೆರೆದಕೂಡಲೇ ಬುಲ್‌ಡಾಗ್ ಒಳಬರುತ್ತದೆ. ವಿಟ್ಟಿ ಮತ್ತು ಕಿಟ್ಟಿಯರು ನಾಯಿಯಂತೆ(ಕರ್ಮದಂತೆ) ವ್ಯಕ್ತಿಯನ್ನು ಬೇಟೆಯಾಡಲು ಬೆನ್ನುಹತ್ತಿದ್ದಾರೆ. ಕಂಠಿಯು "ತಲ ತಲಾಂತರದಿಂದ ತಪ್ಪಿಸಿಕೊಂಡು ಓಡ್ತಾನೇ ಇದ್ದೇವೆ. ಕಾಡಿಗೆ, ಶಾಸ್ತ್ರಕ್ಕೆ, ಸಂಕೇತಕ್ಕೆ, ಒಂದು ಸಲಾನಾದ್ರೂ ನಿಂತು ಎದುರಿಸಬೇಡವೆ"? ಎಂಬ ಮಾತಿನಲ್ಲಿ ಶೋಷಣೆಯು ನಡೆಯುತ್ತಿರುವ ಭೂತಕಾಲದ ನೆರಳೊಮ್ಮೆ ಮನಸ್ಸಿನಲ್ಲಿ ಸುಳಿಯುವುದನ್ನು ಕಾಣಬಹುದು. ಮೇಲುವರ್ಗದವರಿಂದ ಹೆದರಿಕೊಂಡು ಕಾಡೆಂಬ ಅಜ್ಞಾನಕ್ಕೆ, ಶಾಸ್ತ್ರವೆಂಬ ಮೂಢ ನಂಬಿಕೆಗೆ, ಸಂಕೇತವೆಂಬ ಅರ್ಥವಾಗದ ಮಾತಿಗೆ ಬಾಗಿಕೊಂಡೇ ಬಾಳಿದ್ದೇವೆ. ಒಮ್ಮೆಯಾದರೂ ಎದುರಿಸಿ ನಿಲ್ಲಬೇಕು. ಪ್ರತಿ ಹಿಂಸೆ ನಡೆಸಬೇಕು ಎಂಬ ಅರ್ಥ ಇಲ್ಲಿ ಧ್ವನಿಸುತ್ತದೆ.

'ವ್ಯಕ್ತಿ' ಸಮಾಜದಲ್ಲಿ ಪ್ರತಿಷ್ಠಿತನಾಗಬೇಕೆಂದು, ಸುಖದ ಸಾಗರದಲ್ಲಿ ತೇಲಬೇಕೆಂದು ಅನ್ಯಾಯದ, ಅನೀತಿಯ, ಅಧರ್ಮದ ಮಾರ್ಗಹಿಡಿಯುತ್ತಾನೆ. 'ಆಶೆ ಶುರುವಾಯ್ತು ಅಂದ್ರೇ ಮಿಕ್ಕ ವಿಚಾರಗಳೆಲ್ಲ ಮಾಸುತ್ತ ಬರುತ್ತೆ, ನನ್ನ ವಿಚಾರದಲ್ಲೂ ಹಾಗೇ ಆಯಿತು' ಎಂದು ಒಪ್ಪಿಕೊಂಡು ತಾನು ಮಾಡಿದ್ದೆಲ್ಲವನ್ನೂ ಸರಿಯೆಂದು ಸಮರ್ಥಿಸಿಕೊಳ್ಳುತ್ತಾನೆ. "ನಾನು ಭಾರತದ ಸತ್ಪ್ರಜೆ" "ಇವತ್ತು ನಾಲ್ಕು ಜನಕ್ಕೆ ನನ್ನ ಮಾತು ಅಂದ್ರೆ ಬೆಲೆ ಇದೆ, ನನ್ನ ಬಗ್ಗೆ ಗೌರವ ಇದೆ. ಒಂದು ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಯೊಬ್ಬನ ಯೋಗ್ಯತೆಯನ್ನು ಯಾವ ಮಾಪಕದಿಂದ ಸ್ವಾಮಿ ಗೊತ್ತು ಮಾಡೋದು ! ನನ್ನ ಎದುರು ಈವೊತ್ತು ಯಾವನು ನಿಂತು ಚುನಾವಣೇಲಿ ಗೆಲ್ತಾನೋ ಗೆಲ್ಲಲಿ ನೋಡೋಣ"..........ಎಂದು ಸವಾಲು ಹಾಕುತ್ತಾನೆ. ಆತನ ಆತ್ಮ ಪ್ರಶಂಸೆ ಹೆಚ್ಚಾದಂತೆ ಸಾವಿನ ಕ್ಷಣಗಳು ಸಮೀಪವಾಗುತ್ತವೆ. ಮೂವರೂ ಜೀವವನ್ನು ಕೊಂಡೊಯ್ಯುವ ಯಮದೂತರಂತೆ ಬೆಳೆದು ಬಿಟ್ಟಿದ್ದಾರೆ. ತಮ್ಮ ಹಿಂಸೆಯ ಸ್ವರೂಪದ ಕರಾಳ ಬಾಹುಗಳನ್ನು ನೀಡುತ್ತಾ ಹಿಂದೆ ನಡೆದ ಶೋಷಣೆಗಳ ಸುರುಳಿಯನ್ನು ಬಿಚ್ಚುತ್ತಾ ವ್ಯಕ್ತಿಯ ಮೇಲೆ ಆಕ್ರಮಣವನ್ನೆಸಗುತ್ತಾರೆ.

"ಸುಂದರ ಮಾತುಗಳ ಹಂದರಕ್ಕೆ ಹೋಗೋಕ್ಮುಂಚೆ, ತತ್ವಗಳ ಸುಪ್ಪತ್ತಿಗೆಗೆ ....ಕ್ರೌರ್ಯಗಳ ಗುಟ್ಟಿಗೆ..... ಕೊಲೆಯ ಆಳಕ್ಕೆ...... ತರಗತಿಗಳ ನಿರ್ಮಾಣಕ್ಕೆ ... ... ಯಜಮಾನರ ಪಲ್ಲಟಕ್ಕೆ ಎಂದು ಹೇಳುತ್ತಾ ಕ್ರೌರ್ಯದ ಮುಖವಾಡವನ್ನು ಧರಿಸಿ ಕೊನೆಯ ಆಸೆ ಏನೆಂದು ಕೇಳುವುದು, ನೇಣುಗಂಬಕ್ಕೆ ಏರಿಸುವ ವ್ಯಕ್ತಿಯನ್ನು

ಕೇಳುವಂತೆ ಕಾನೂನಿನ ಪರಿಧಿಯಲ್ಲಿಯೇ ತಮ್ಮ ಮುಯ್ಯನ್ನು ತೀರಿಸಿಕೊಳ್ಳುವಂತೆ ತೋರಿಸಿಕೊಳ್ಳುತ್ತಾರೆ

ವ್ಯಕ್ತಿಯು "ಎಲ್ಲವನ್ನು ಸರಳಗೊಳಿಸಿ ಜಡ್ಜ್ ಮಾಡ್ತಿದೀರ, ನಿಮಗೆ ನಿಮ್ಮಂಥ ಅಲ್ಪರಿಗೆ ಹೇಗೆ ಗೊತ್ತಾಗಬೇಕು?...ಹಗಲು ಗೊತ್ತು ನಿಮಗೆ, ರಾತ್ರಿಗೊತ್ತು ನಿಮಗೆ ಆ ಎರಡರ ನಡುವಿನ ಕೋಟಿ ಕೋಟಿ ಬಣ್ಣಗಳು, ಶಾಖಗಳು ನಿಮಗೆ ಹೇಗೆ ಗೊತ್ತಾಗಬೇಕು"? ಎಂಬ ಪ್ರಶ್ನೆಗೆ ಮೂವರೂ ನಿರುತ್ತರರಾಗುತ್ತಾರೆ. ಈ ಪ್ರಶ್ನೆಗಳು ಕೇವಲ ಆ ಮೂವರಿಗೆ ಮಾತ್ರವಲ್ಲದೆ ನಮ್ಮೆಲ್ಲರಿಗೂ ಹಾಕಿದಂತಹ ಸವಾಲುಗಳಾಗಿವೆ. ಈ ಮಾತುಗಳಿಂದ 'ನನ್ನಂತಹ ಕೆಲವೇ ವ್ಯಕ್ತಿಗಳನ್ನು ನೇಣಿಗೇರಿಸುವುದರಿಂದೇನು ಪ್ರಯೋಜನ? ಇನ್ನೂ ದೊಡ್ಡ ದೊಡ್ಡ ತಿಮಿಂಗಿಲಗಳು ಇವೆ. ಅಂತಹವರನ್ನು ನೇಣಿಗೇರಿಸಲು ಸಾಧ್ಯವೆ'? ವರ್ಗವ್ಯವಸ್ಥೆಯನ್ನು ಸರಿಪಡಿಸಲು ಸಾಧ್ಯವೇ ಇಲ್ಲವೆಂಬ ಅಂತರಾರ್ಥ ಇಲ್ಲಿ ಧ್ವನಿಸುತ್ತದೆ.

ಒಟ್ಟಾರೆ ಶೋಷಿತ ಜನರೇ ಅಧಿಕಾರದ ಗದ್ದುಗೆಯೇರಿದರೆ ಅವರೂ ಶೋಷಕ ರಾಗುತ್ತಾರೆ. ಇತರರನ್ನು ಶೋಷಣೆಗೊಳಪಡಿಸುತ್ತಾರೆಯೇ ಹೊರತು ಸಮಾನತೆ ಗಾಗಿ ತುಡಿಯುವುದಿಲ್ಲವೆಂಬುದನ್ನು ಅತ್ಯಂತ ಪರಿಣಾಮಕಾರಿಯಾಗಿ, ನಾಟಕೀಯ ವಾಗಿ ಓದುಗನ ಮನಮುಟ್ಟುವ ರೀತಿಯಲ್ಲಿ ತೆರೆಗಳು ಕೃತಿಯಲ್ಲಿ ನಿರೂಪಿಸಿರುವ ಲಂಕೇಶರು ತಮ್ಮ ಬೇರೆಲ್ಲ ಕೃತಿಗಳನ್ನು ಮೀರಿಸುವಂತೆ ಅತ್ಯಂತ ಪ್ರಬುದ್ಧವಾಗಿ, ಅದ್ಭುತವಾಗಿ ತಮ್ಮ ಸಾಮರ್ಥ್ಯವನ್ನಿಲ್ಲಿ ಮೆರೆದಿದ್ದಾರೆಂದು ಹೇಳಬಹುದು.

ಸಮಯದ ಗೊಂಬೆ

ತಲಘಟ್ಟಪುರ ನಟರಾಜ

ಈ ಬದುಕು
ಬೇರೊಬ್ಬನ ಕೈಗೊಂಬೆಯಾಗಿ
ನೆಲೆಕಾಣದೆ
ಕಕ್ಕಾಬಿಕ್ಕಿಯಾದ ಪಯಣದ ಉಸಿರು
ಪ್ರತಿದಿನದ ವಾಸ್ತವದೆಡೆಯಲ್ಲೂ
ಭೂತ ಭವಿಷ್ಯಗಳ ಸಂಕೋಲೆಯಲ್ಲೇ
ಬೆಂದು
ಬೂದಿಯಾಗುವ ಜೀವ

ಉಲಿವ ಮಾತುಗಳ ಹಿಂದೆ
ಭಗ್ನಗೊಂಡ ಮನಸ್ಸು
ನೆಲೆಕಾಣದ ಕನಸು
ಪ್ರತಿ ದಿನವೂ
ನೂರುಗಾಲಿಯ ಹೊಡಿತ
ಮೆದುಳ ಪರದೆಯ ಮೇಲೆ
ನಭಕೆ ತಾಗುವ ಹಾಗೆ
ನಗಲಾರದೆ
ಬಿಕ್ಕಿಬಿಕ್ಕಿ
ಅಳಲಾರದೆ

ಕತ್ತಲಾವರಿಸುವ ಕಣ್ಣಾಲಿಗಳಿಗೆ
ಸೋತು ಜೋತು ಬೀಳುವ ದೇಹ
ಏನೋ ! ಹೇಗೋ ? ಎಂತೋ
ಎಂಬುದರ ಚಿಂತೆಯಲ್ಲೇ
ವರುಷ ಕಾಮನ ಉತ್ಸವದಲ್ಲಿ
ಗಾಳಿಗೋಪುರ ನಿರ್ಮಾಣ

ಬದಲಿಲ್ಲ
ಕದಲಿಲ್ಲ
ಸೂರ್ಯ ಚಂದ್ರರು ಭಾವ ಭಾಷೆಗಳು

ಆದರೂ
ಹೊಸ ವರುಷ ಬಂತೆಂಬ
ಉತ್ಸಾಹದಲ್ಲಿ ಹಳೆಯುದರ
ಗೂಡಿನೊಳಗಿಂದ
ಬರಲಾರದೇ ಹೋದರೂ
ಹೊಸವರುಷದ ಸಂಭ್ರಮ
ಕಾಣಲಾರದೆ ಹೋದರೂ
ಕಾಲ ನಿಲ್ಲಬೇಕಲ್ಲ !

ಕಾಳಾಮುಖ ಚತುರಾಚಾರ್ಯರು

ಡಾ|| ಬಸವಲಿಂಗ ಸೊಪ್ಪಿಮಠ

ಮಧ್ಯಕಾಲೀನ ಕರ್ನಾಟಕದಲ್ಲಿ ಕಾಳಾಮುಖ ಶೈವರದು ಎದ್ದುಕಾಣುವ ಹೆಸರಾಗಿದೆ. ಸ್ಥಾವರಲಿಂಗ ಉಪಾಸಕರಾಗಿದ್ದ, ವಿದ್ವತ್ತು ತಪಶ್ಚರ್ಯೆಗಳಿಂದ ರಾಜಮನ್ನಣೆ ಗಳಿಸಿದ್ದ ಈ ಕಾಳಾಮುಖರು ಬಸವ ಪ್ರಣೀತ ವೀರಶೈವದ ಮುಂದೆ ನಿಲ್ಲದೆ ಹೋಗಿದ್ದರೂ, ವ್ಯಾಪಕ ಪ್ರಭಾವ ಗಳಿಸಿ ಕರ್ನಾಟಕದ ಬಹುಪಾಲು ಶಾಸನ ಗಳಲ್ಲಿ ತಮ್ಮ ಕೀರ್ತಿಯನ್ನು ಬಿಟ್ಟುಹೋಗಿರುವ ಇವರು ಮುಂದೆ ಏನಾದರು, ಎಲ್ಲಿ ಅಡಗಿದರು ಎಂಬುದೇ ಮಹಾ ರಹಸ್ಯವಾಗಿದೆ. ಇಂದಿನ ವೀರಶೈವ ಜಂಗಮ ವರ್ಗವೇ ಈ ಕಾಳಾಮುಖರು ಎನ್ನುತ್ತಾರೆ ಶ್ರೀ ಕಪಟರಾಳ ಕೃಷ್ಣರಾಯರು. ಆದರೆ ಜಂಗಮರ ಸೂತ್ರಗೋತ್ರ ಸಿಂಹಾಸನಗಳು ಪಂಚಾಚಾರ್ಯರು ಎಂಬ ಗುರುಸ್ಥಲದ ಸ್ವಾಮಿಗಳ ಅಧಿಪತ್ಯವನ್ನು ಹೊಂದಿವೆ; ಹಾಗಾದರೆ ಈ ಆಚಾರ್ಯರು ಕಾಳಾಮುಖ ಆಚಾರ್ಯರೆ? ಹಾಗಿದ್ದರೆ ಇವರ, ಇವರ ಪರಂಪರೆಯ ಉಲ್ಲೇಖ ಶಾಸನಗಳಲ್ಲಿ ಏಕೆ ಇಲ್ಲ? ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಇದಕ್ಕೆ ಉತ್ತರ ಕೊಡುವ ಪ್ರಯತ್ನವಾಗಿ ಈ ಲೇಖನ.

ರಾಯಚೂರು (ಜಿಲ್ಲಾ ಕೇಂದ್ರ) ನಗರ ಮಧ್ಯದಲ್ಲಿ ಎದ್ದುಕಾಣುವ ಬೆಟ್ಟ ವೊಂದಿದೆ; ಇದಕ್ಕೆ ಗುಟ್ಟೇರ ಬೆಟ್ಟವೆಂದು ಹೆಸರು. ಹಿಂದೆ ಇದಕ್ಕೆ ಪಂಚಲಿಂಗೇಶ್ವರ ಬೆಟ್ಟವೆಂದು ಕರೆಯುತ್ತಿದ್ದರೆಂದು ರಾಯಚೂರು ಸ್ಥಳಪುರಾಣ ಹೇಳುತ್ತದೆ. ಇದನ್ನು ಸಮರ್ಥಿಸುವಂತೆ ಬೆಟ್ಟದ ಮೇಲೆ ಪಂಚಲಿಂಗೇಶ್ವರ ದೇವಸ್ಥಾನದ ಅವಶೇಷಗಳು ಈಗಲೂ ಅಲ್ಲಿ ಇವೆ. ಹಾಗೂ ಈ ಬೆಟ್ಟದ ಪಶ್ಚಿಮ ದಿಕ್ಕಿನಲ್ಲಿ ಒಂದು ಪಂಚಲಿಂಗೇಶ್ವರ ದೇವಸ್ಥಾನವಿದ್ದು, ಇದು ರಾಯಚೂರು ನಗರದ ಸೋಮವಾರಪೇಟೆ ಹಿರಿಯಮಠದ ಶ್ರೀಗಳ ಸುಪರ್ದಿಯಲ್ಲಿದೆ. ಈ ದೇವಸ್ಥಾನ ಈಗ ನವೀಕರಿಸಲ್ಪಟ್ಟಿದ್ದು, ಇದರ ಸುತ್ತುಮುತ್ತಿನ ಪ್ರದೇಶ ಪಂಚಲಿಂಗೇಶ್ವರ ಬಡಾವಣೆ ಎನಿಸಿದೆ. ಪಂಚಲಿಂಗೇಶ್ವರ ದೇವಸ್ಥಾನಕ್ಕೆ ಸಂಬಂಧಿಸಿರುವ (ಅಧಿಕಾರಿಗಳು) ಸೋಮವಾರಪೇಟೆ ಹಿರಿಯಮಠದ ಶ್ರೀಗಳು ವೀರಶೈವ ಗುರುಸ್ಥಲದ ಅಂದರೆ ಪಂಚಾಚಾರ್ಯ ಪೀಠ ಪರಂಪರೆಯವರು. ಕಾಳಾಮುಖ-ಪಂಚಾಚಾರ್ಯ ಸಂಬಂಧದ ಬಗ್ಗೆ ಚರ್ಚಿಸುತ್ತಿರುವಾಗ ಪಂಚಲಿಂಗೇಶ್ವರ ದೇವಸ್ಥಾನ-ಪಂಚಾಚಾರ್ಯ ಪೀಠಪರಂಪರೆಯ ಸ್ವಾಮಿಗಳನ್ನು ಇಲ್ಲಿ ಎತ್ತಿಕೊಳ್ಳಲು ಕಾರಣವಿದೆ. ಈ ಸ್ವಾಮಿಗಳಿಗೂ ಈ ದೇವಸ್ಥಾನಕ್ಕೂ ಸಂಬಂಧವಿರುವ ಹಾಗೆ,

ಈ ಪಂಚಲಿಂಗೇಶ್ವರ ದೇವಸ್ಥಾನಕ್ಕೂ ಕಾಳಾಮುಖ ಆಚಾರ್ಯರಿಗೂ ಸಂಬಂಧವಿರುವ ಬಗ್ಗೆ ಕಾಳಾಮುಖರ ಶಾಸನಗಳಲ್ಲಿ, ಕಾಳಾಮುಖರ ಸ್ಥಾನಗಳಲ್ಲಿ ಸಾಕಷ್ಟು ಆಧಾರಗಳು ಕಣ್ಣಿಗೆ ಬೀಳುತ್ತಿರುವುದು ಗಮನಾರ್ಹವಾಗಿದೆ. ಪ್ರಸಿದ್ಧ ಕಾಳಾಮುಖ ಕೇಂದ್ರ ಗಳಾಗಿದ್ದ ಬಳ್ಳಿಗಾವೆ, ಹೂಲಿ, ಡಂಬಳ ಮೊದಲಾದ ಕಡೆಗಳಲ್ಲಿ ಪಂಚಲಿಂಗೇಶ್ವರ ದೇವಸ್ಥಾನಗಳಿದ್ದ ಬಗೆಗೆ ಅಲ್ಲಿನ ಶಾಸನಗಳು ಉಲ್ಲೇಖಿಸುತ್ತವೆ. ಪಂಚಮಠ ಪಂಚಲಿಂಗನಮಠ ಹೆಸರುಗಳೂ ಅಲ್ಲಿ ಕೇಳಿಬರುತ್ತವೆ. ಹೀಗೆ ದೇವಸ್ಥಾನ–ಮಠಗಳಿಗೆ ಸಂಬಂಧಿಸಿ 'ಪಂಚ ಲಿಂಗ' ವು ಒಂದೇ ಸ್ಥಾವರಲಿಂಗದಲ್ಲಿ ಕೆತ್ತಲಾದ ಐದು ಲಿಂಗಗಳ ಸಮೂಹವಾಗಿರುವಂತೆ ಕಾಣುತ್ತದೆ. ಶಿವನ ಪಂಚವದನ ಕಲ್ಪನೆಯು ಇದಕ್ಕೆ ಹಿನ್ನೆಲೆ ಯಾಗಿರುವಂತೆ ತೋರುತ್ತದೆ. ಬಳ್ಳಿಗಾವೆಯ ಪಂಚಲಿಂಗ ದೇವಸ್ಥಾನವು ಶಕ್ತಿ ಪರ್ಷಿಯ ಭುಜಂಗಾವಳಿಗೆ ಸೇರಿದ ಇಟ್ಟಿಗೆ ಸಂತತಿಯ ಕಾಳಾಮುಖ ಆಚಾರ್ಯರಿಗೆ ಸೇರಿದುದು ಆಗಿತ್ತು. "ಪಂಚಮಠ ಸ್ಥಾನಮಂ ಪೂರ್ವಮರ್ಯಾದೆಯೊಳ್ ಪ್ರತಿ ಪಾಳಿಸುವುದು" ಎಂಬ ಮಾತು ಜಾಗಳಿಯ ಶಾಸನದಲ್ಲಿ (ಹರಪನಹಳ್ಳಿ ತಾ., ಬಳ್ಳಾರಿ ಜಿ.) ಬರುತ್ತದೆ. ಹೂಲಿಯ 'ಅಭಿನವ ಪಾಶುಪತ ಮಠ' ಕ್ಕೆ ಒಡೆಯರಾಗಿದ್ದ ವಿದ್ಯಾರಾಶಿಪಂಡಿತ ದೇವರು ಅಲ್ಲಿನ ಪಂಚಲಿಂಗದೇವನ ಆರಾಧಕರಾಗಿದ್ದರು. ಹೀಗೆ ಕಾಳಾಮುಖರ ಶಾಸನಗಳಲ್ಲಿ ಪಂಚಲಿಂಗ, ಪಂಚಮಠ ಹೆಸರುಗಳು ಕಾಳಾಮುಖ ಗುರುಗಳಿಗೆ ಸಂಬಂಧಿಸಿ ಕಾಣಿಸಿಕೊಳ್ಳುತ್ತಿದ್ದು, ವೀರಶೈವ ಪಂಚಾಚಾರ್ಯರ 'ಪಂಚ ಪೀಠ' ಕ್ಕೂ ಕಾಳಾಮುಖರ 'ಪಂಚಲಿಂಗ' ದೇವಸ್ಥಾನದ 'ಪಂಚಮಠ' ಕ್ಕೂ ಏನಾದರೂ ಸಂಬಂಧವಿದ್ದಿರಬಹುದೆ : ಎಂಬ ಪ್ರಶ್ನೆಗೆ ರಾಯಚೂರಿನ ಪಂಚಾಚಾರ್ಯ ಪರಂಪರೆಯ ಹಿರಿಯಮಠ (ಬಾಳೇಹಳ್ಳಿ ಪೀಠ) ವು ಪಂಚಲಿಂಗೇಶ್ವರ ದೇವಸ್ಥಾನದ ಆಡಳಿತ ಹೊಂದಿರುವುದೇ ಜೀವಂತ ಉದಾಹರಣೆಯಾಗುತ್ತದೆ ಎಂದು ಹೇಳಬಹುದು. ಪಂಚಾಚಾರ್ಯರು ಕಾಳಾಮುಖ ಶೈವರೇ ಆಗಿದ್ದರು ಎಂಬುದು ಇದರಿಂದ ಸಾಧಿತ ವಾಗುತ್ತದೆ. ಆದರೆ ಬಸವ (ಪೂರ್ವ) ಯುಗದಲ್ಲಿ ಇದ್ದವರು ಪಂಚಾಚಾರ್ಯರಲ್ಲ, ಚತುರಾಚಾರ್ಯರು ಎಂಬುದು ಸರ್ವವಿದಿತ. ಸ್ಥಾವರ ಲಿಂಗೋದ್ಭವರಾಗಿದ್ದ ಇವರು ಸ್ಥಾವರಲಿಂಗಪೂಜಕರಾಗಿ ಕಾಳಾಮುಖರಾಗಿದ್ದರು. ಇದನ್ನು ವಿವರಿಸುತ್ತೇನೆ–

ಕಾಳಮುಖರ ಶಾಸನಗಳಲ್ಲಿ ವಾಮಶಕ್ತಿ, ಈಶಾನ ಪಂಡಿತ, ತತ್ಪುರುಷ ಶಿವಾಚಾರ್ಯ, ಏಕೋದೇವ ಮೊದಲಾದ ಕಾಳಾಮುಖ ಗುರುಗಳ ಹೆಸರುಗಳು ಸಾಮಾನ್ಯ. ಇವು ಆ ಆಚಾರ್ಯರ ರೂಢಹೆಸರುಗಳಾಗಿರದೆ, ಶಿವನ ಪಂಚಮುಖಿಗಳ ಹೆಸರಾಗಿವೆ. 'ಗುರುರಾಜ ಚಾರಿತ್ರ'ದ ಕೆಳಗಿನ ಪದ್ಯ ನೋಡಿ :

ಸಾರಂಗಸಿದ್ಧ ಸದ್ಯೋಜಾತ ವದನ ವಿ
ಸ್ತಾರ ಘಂಟಾಸಿದ್ಧ ವಾಮದೇವಾನನಂ
ಚಾರು ಶಿವರೇಶ ತತ್ಪುರುಷಾಸ್ಯ ಹಾಟಕೇಶ್ವರನ ಘೋರಾನನವದು ॥

ಮಾರಾರಿ ಮಲ್ಲಿಕಾರ್ಜುನನೆ ಈಶಾನ್ಯಮುಖ
ವಾರಯ್ಯ ಪಂಚಮುಖದನಕ್ಷ ಶ್ರೀಗಿರಿನಾಥ
ಭೂರಿ ಮನುಮುನಿ ವಿಷ್ಣುವಿಧಿ ಮುಖ್ಯರಿಗೆ ಪೂಜೆಗೊಂಡಿಪ್ಪವೀವುತಿಹನು[1] ॥

ಶ್ರೀಶೈಲದ ಒಡೆಯ (ಶ್ರೀಗಿರಿನಾಥ)ನ ಐದು ಲಿಂಗಸ್ಥಾನಗಳಾದ ಸಾರಂಗಸಿದ್ಧ, ಘಂಟಾಸಿದ್ಧ ಇತ್ಯಾದಿ ದೇವರುಗಳು ಆ ಶಿವನ ಸದ್ಯೋಜಾತ, ವಾಮದೇವ, ತತ್ಪುರುಷ ಇತ್ಯಾದಿ ಪಂಚಮುಖಗಳೆಂದು ಇಲ್ಲಿ ಹೇಳಲಾಗಿದೆ. ಇವು ಕಾಳಾಮುಖ ಗುರುಗಳ ಹೆಸರುಗಳಾಗಿರುವಂತೆ, ವೀರಶೈವ ಪಂಚಾಚಾರ್ಯರ ಪಂಚಮುಖಗಳಾಗಿರುವುದು ಕಾಳಾಮುಖ ಹಾಗೂ ಪಂಚಾಚಾರ್ಯ ಪರಂಪರೆ ಒಂದೇ ಮೂಲದ್ದು ಎನ್ನಲು ಆಧಾರವಾಗಬಲ್ಲದಾಗಿದೆ. ಪಂಚಾಚಾರ್ಯರು ಪ್ರತಿನಿಧಿಸುವ ಶಿವನ ಪಂಚಮುಖಗಳಿವು :

ಶಿವನ ಮುಖ	ಪಂಚಾಚಾರ್ಯ	ಪೀಠಸ್ಥಾಪನೆ
ಸದ್ಯೋಜಾತ	ರೇವಣಾರಾಧ್ಯ	ಬಾಳೇಹಳ್ಳಿ
ವಾಮದೇವ	ಮರುಳಾರಾಧ್ಯ	ಉಜ್ಜಯಿನಿ
ಅಘೋರ	ಏಕೋರಾವಣಾರಾಧ್ಯ	ಕೇದಾರ
ತತ್ಪುರುಷ	ಪಂಡಿತಾರಾಧ್ಯ	ಶ್ರೀಶೈಲ
ಈಶಾನ	ವಿಶ್ವಾರಾಧ್ಯ	ವಾರಣಾಸಿ

ಇಲ್ಲಿ ಉಕ್ತರಾದ ರೇವಣ–ಮರುಳ–ಏಕೋರಾಮ–ಪಂಡಿತಾರಾಧ್ಯ ಈ ನಾಲ್ವರು ಚತುರಾಚಾರ್ಯರೆನಿಸಿದ್ದು ಬಸವಯುಗದವರಾಗಿದ್ದಾರೆ; ವಿಶ್ವಾರಾಧ್ಯರು ಬಸವೋತ್ತರ ಯುಗದವರಾಗಿದ್ದಾರೆ. ಆದರೆ ಇವರು ಪ್ರತಿನಿಧಿಸುವ ಸದ್ಯೋಜಾತ ಇತ್ಯಾದಿ ಶಿವನ ಪಂಚಮುಖಗಳು ಕಾಳಾಮುಖ ಗುರುಗಳ ಹೆಸರಾಗಿರುವುದನ್ನು ಲಕ್ಷಿಸಬೇಕು. ಈ ಮುಖಗಳು ಕಾರಣವಾಗಿ ಹುಟ್ಟಿಕೊಂಡಿರಬಹುದಾದ ಕಾಳಾಮುಖ ಶಾಸನೋಕ್ತ ಪಂಚಲಿಂಗ ಪಂಚಮಠ ಕಲ್ಪನೆ ಇವರಿಗಿಂತ ಪ್ರಾಚೀನ ಎನ್ನುವಲ್ಲಿ ಸಂದೇಹವಿಲ್ಲ. ಪಂಚಾಚಾರ್ಯರಿಗೆ ಪೂರ್ವದಲ್ಲಿ ಕೇದಾರ ಶ್ರೀಶೈಲ ಇತ್ಯಾದಿ ನೆಲೆಗಳು, ವೀರಶೈವ ಪೀಠಗಳಾಗಿರದೆ ಕಾಳಾಮುಖ ಗುರುಗಳ 'ಮೂಲಸ್ಥಾನ' ಗಳೆನಿಸಿ ಸ್ಥಾವರಲಿಂಗನೆಲೆ ಮಾತ್ರವಾಗಿದ್ದವು. ಬಸವೋತ್ತರ ಕಾಲದಲ್ಲಿ ವೀರಶೈವದ ಮೇಲೆ ತಮ್ಮ ಹಿಡಿತ ಸಾಧಿಸಿದ ಕಾಳಾಮುಖರ ಪಂಚಪೀಠ ಕಲ್ಪನೆಗೆ ಆಮೇಲೆ ದಾರಿಮಾಡಿಕೊಂಡಂತೆ ಕಾಣುತ್ತದೆ. ಇವರ ಈ ಕಲ್ಪನೆಗೆ ಸಹಾಯಕವಾದುದು, ಅಂದರೆ ಪಂಚಪೀಠ ಕಲ್ಪನೆ

1. ಪ್ರೊ. ಸಂ. ಶಿ. ಭೂಸನೂರಮಠ (ಸಂ.), ಗುರುರಾಜ ಚಾರಿತ್ರ, ಸಂ. 10. ಪು. 9
2. ಡಾ॥ ಎಂ. ಚಿದಾನಂದಮೂರ್ತಿ, ಜಂಗಮಜಾತಿಯಲ್ಲಿ ಅನುಶ್ರೇಣಿ, ಸಾಧನೆ–ಸಂಪುಟ 13, ಸಂಚಿಕೆ 1 (1984), ಪು. 8

ಹುಟ್ಟಿಕೊಂಡುದು ಬಹುಶಃ ಕಾಳಾಮುಖರಲ್ಲಿದ್ದ ಪಂಚಲಿಂಗ–ಪಂಚಮಠ ಸಂಪ್ರದಾಯದಿಂದ ಎಂದೇ ತೋರುತ್ತದೆ. ಹೀಗೆ ಶಿವನ ಪಂಚಮುಖಗಳೇ ಕಾಳಾಮುಖರಲ್ಲಿ 'ಪಂಚಲಿಂಗೇಶ್ವರ' ದೇಗುಲ–ಮಠಕ್ಕೆ ಕಾರಣವಾಗಿ ಪಂಚಾಚಾರ್ಯರಲ್ಲಿ 'ಪಂಚಪೀಠ'ಕ್ಕೆ ಆಸ್ಪದವಾಗಿದೆಯೆಂದು ಸ್ಪಷ್ಟವಾಗಿ ನುಡಿಯಬಹುದು.

ಚತುರಾಚಾರ್ಯರಿಗೆ ಸಂಬಂಧಿಸಿ ಪ್ರಸಾದಿ ಭೋಗಣ್ಣನ ವಚನವೊಂದು ಹೀಗಿದೆ:

ಸದ್ಯೋಜಾತಮುಖ ಚೆನ್ನಮಲ್ಲಿಕಾರ್ಜುನಲಿಂಗವಾಯಿತ್ತು
ವಾಮದೇವಮುಖ ಭೋಗಮಲ್ಲಿಕಾರ್ಜುನ ಲಿಂಗವಾಯಿತ್ತು
ಅಘೋರಮುಖ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವಾಯಿತ್ತು
ತತ್ಪುರುಷಮುಖ ಶಾಂತಮಲ್ಲಿಕಾರ್ಜುನ ಲಿಂಗವಾಯಿತ್ತು
ಈಶಾನ್ಯಮುಖ ಇಂತೀ ಚತುರ್ವಿಧ ಆಚಾರಿಯಂಗೆ ಗುರುಮೂರ್ತಿಯಾದಲ್ಲಿ
ಇಷ್ಟಲಿಂಗನ ಕೊಡಬೇಕೆಂದು ತನ್ನ ದೃಷ್ಟಕ್ಕೆ ದೃಷ್ಟನಾದೆಹೆನೆಂದು
ಬಂದುದನಱಿತು ನಿಂದಮಾರ್ಗವೆ ಗುರುಸ್ಥಲ
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನ ಲಿಂಗವನಱಿವುದಕ್ಕೆ
ಉಭಯಮಾರ್ಗ ಗುರುಸ್ಥಲ[1]

ಚತುರಾಚಾರ್ಯರ ಗುರುಸ್ಥಲ ಮಾರ್ಗವನ್ನು ನಿರೂಪಿಸುವ ಈ ವಚನ ಶಿವನ ಪ್ರತಿನಿಧಿಗಳಾದ ಇವರ ಚತುರ್ವಿಧ ಮುಖ ಮತ್ತು ಲಿಂಗಗಳನ್ನು ವಿವರಿಸುತ್ತಿದೆ. ಸದ್ಯೋಜಾತ ಮೊದಲಾದ ಶಿವನ ಮುಖಗಳ ಚತುರಾಚಾರ್ಯರ ಹೆಸರು ಮತ್ತು ಪೀಠಗಳ ಪಟ್ಟಿ ಮೇಲೆ ಬಂದಿದ್ದು, ಪ್ರಸ್ತುತ ವಚನದ ಬೆಳಕಿನಲ್ಲಿ ಚೆನ್ನಮಲ್ಲಿಕಾರ್ಜುನ ಮೊದಲಾದ ಲಿಂಗಗಳು ಯಾವ ಯಾವ ಆಚಾರ್ಯರಿಗೆ ಸಂಬಂಧಿಸುತ್ತವೆ ಎಂಬುದನ್ನು ಪರಿಶೀಲಿಸಬೇಕು; ಆ ಮುಂಚೆ, ಚತುರಾಚಾರ್ಯರ ಚರಿತ್ರೆಯನ್ನು ಕಥಿಸುವ ಗುರುರಾಜ ಚಾರಿತ್ರ, ಸಾಂದರ್ಭಿಕವಾಗಿ ಉಲ್ಲೇಖಿಸುವ ಚೆನ್ನಬಸವ ಪುರಾಣ ಎಂಬ ಕೃತಿಗಳು ಮುಖ್ಯವಾಗಿ ಈ ಕುರಿತು ಏನು ಹೇಳುತ್ತವೆ ನೋಡೋಣ:

ಗುರುರಾಜ ಚಾರಿತ್ರ:

1 "ತತ್ಪುರುಷ ವದನಂ......ಭಾವಿಸಲ್ಲಿಯೆಸೆವಾಚಾರ್ಯರು ಗುರುರೇವಣಾಸಿದ್ಧ ದೇವರು......ಪ್ರಾಣಲಿಂಗಂ ಶಾಂತಮಲ್ಲೇಶನೌ" (ಸಂ. 1, ಪ. 62–63)

2 "ಅಘೋರಾಸ್ಯ ಆಚಾರ್ಯರೆ ಮರುಳಸಿದ್ಧೇಶ......ಪ್ರಾಣಲಿಂಗವೆಂಬುವದು ...ಕಪಿಲಸಿದ್ಧ ಮಲ್ಲೇಶ್ವರಂ" (ಪ. 66–67)

3 "ವಾಮದೇವಾಸ್ಯ.....ಆಚಾರ್ಯ ಪಂಡಿತಾರಾಧ್ಯ......ಪ್ರಾಣಲಿಂಗಂ ಚೆನ್ನಮಲ್ಲೇಶ್ವರಂ" (ಪ. 69-70)

1. ಡಾ॥ ಎಂ. ಎಸ್. ಸುಂಕಾಪುರ (ಸಂ.). ಸಕಲಪುರಾತನರ ವಚನಗಳು-2. ಪ್ರ. 479

4 "ಸದ್ಯೋಜಾತ ಮುಖಂ...ಏಕೋರಾಮ ತಂದೆಗಳರಾ......ಪ್ರಾಣಲಿಂಗವೇ ಭೋಗಮಲ್ಲೇಶ ದೇವಂ" (ಪ. 72-73)

ಚನ್ನಬಸವಪುರಾಣ :

1 ರೇವಣಂಗಾದಿ ಶಕ್ತಿ ತತ್ಪುರುಷ ಮುಖಂ...ತನ್ನ ಕರದಿನಗಲದ ಶಾಂತಮಲ್ಲಿ-ಕಾರ್ಜುನ ಲಿಂಗ" (ಸಂ. 59, ಪ,22)

2 "ಮರುಳಸಿದ್ಧೇಶ್ವರಂಗಘೋರಾಸ್ಯಂ......ಬಾಯೊಳಮಳ್ಕೈಕ್ಯ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗ" (ಪ. 24)

3 "ಏಕೋರಾಮ ತಂದೆಗಂ ವಾಮದೇವಮುಖ...ಶಿಖಿಗೆ ಅಮರ್ದಿಪ್ಪ ವರ ಭೋಗಮಲ್ಲಿಕಾರ್ಜುನ ಲಿಂಗಂ" (ಪ. 26).

4 "ವರ ಪಂಡಿತಾರಾಧ್ಯರಿಗೆ......ಸದ್ಯೋಜಾತಮುಂ...... ಕಕ್ಷದೊಳಗಾದೊಡಂ ಧರಿಸಿಹುದು ವರ ಚೆನ್ನಮಲ್ಲಿಕಾರ್ಜುನ ಲಿಂಗಂ"

ಎರಡೂ ಕೃತಿಗಳ ಈ ವಿವರಗಳನ್ನು ಗಮನಿಸಿದರೆ, ತತ್ಪುರುಷ ಅಘೋರ ಇತ್ಯಾದಿ ಹೆಸರುಗಳು ಚತುರಾಚಾರ್ಯರಿಗೆ (ಕಾಳಾಮುಖರ ಹಾಗೆ) ಸಂಬಂಧಿಸಿದೆ. ಹಾಗೂ ಅನ್ವಯದಲ್ಲಿ ಕೆಲವು ಸಮಾನವೂ ಕೆಲವು ವಿರೋಧವೂ ಆದ ಅಂಶಗಳೂ ಇಲ್ಲಿವೆ. ರೇವಣಸಿದ್ಧ ಹಾಗೂ ಮರುಳಸಿದ್ಧರಿಗೆ (ಕ್ರಮವಾಗಿ ತತ್ಪುರುಷ ಅಘೋರ ಮುಖವನ್ನು ಶಾಂತಮಲ್ಲಿಕಾರ್ಜುನ ಕಪಿಲ ಸಿದ್ಧ ಮಲ್ಲಿಕಾರ್ಜುನ ಲಿಂಗಗಳನ್ನು ಹೇಳಿರುವುದು ಗುರುರಾಜ ಚಾರಿತ್ರ ಚೆನ್ನಬಸವಪುರಾಣ ಕೃತಿಗಳಲ್ಲಿ ಸಮಾನ ಅಂಶ ವಾಗಿದೆ. ಆದರೆ ಭೋಗ ಮಲ್ಲಿಕಾರ್ಜುನ ಲಿಂಗದ ಏಕೋರಾಮ ತಂದೆಯನ್ನು ಸದ್ಯೋಜಾತ ಮುಖವೆಂದು ಚೆನ್ನಬಸವ ಪುರಾಣ ಹೇಳುತ್ತಿರುವುದು ವಿಚಿತ್ರವಾಗಿವೆ. ಚೆನ್ನಮಲ್ಲಿಕಾರ್ಜುನ ಪಂಡಿತಾರಾಧ್ಯರ ವಿಷಯಕ್ಕೂ ಈ ಪರಸ್ಪರ ವಿರುದ್ಧ ಅಭಿಪ್ರಾಯ ಗಳಿವೆ ; ವಾಮದೇವ ಮುಖವೆಂದು ಗುರುರಾಜ ಚಾರಿತ್ರ, ಸದ್ಯೋಜಾತ ಮುಖವೆಂದು ಚೆನ್ನಬಸವ ಪುರಾಣ ಹೇಳುತ್ತಿವೆ. ಅಂದರೆ ಚತುರಾಚಾರ್ಯರಲ್ಲಿ ಅವರು ಹೊಂದಿರುವ ಲಿಂಗಗಳ ವಿಷಯಕ್ಕೆ ವಿವಾದ ಇರದೆ, ಪ್ರತಿನಿಧಿಸುವ ಶಿವನ ಮುಖದ ವಿಷಯದಲ್ಲಿ ಗೊಂದಲ ಇದೆ, ಅದರಲ್ಲೂ ರೇವಣಸಿದ್ಧ-ಮರುಳಸಿದ್ಧರು ನಿರ್ವಿವಾದವಾಗಿ ವ್ಯಕ್ತ ವಾಗಿದ್ದರೆ, ಏಕೋರಾಮ-ಪಂಡಿತಾರಾಧ್ಯರಲ್ಲಿ ಮಾತ್ರ ಶಿವ ವದನಗಳು ಇಲ್ಲಿ ಪರಸ್ಪರ ಅದಲು ಬದಲಾಗಿವೆ. ಹಿಂದೆ ಕಾಣಿಸದಾದ, ಡಾ॥ ಚಿದಾನಂದ ಮೂರ್ತಿಗಳು ಕೊಟ್ಟ ಪಟ್ಟಿಯಲ್ಲಿ ಸಂಪೂರ್ಣ ಗೊಂದಲವಿದೆ. ತತ್ಪುರುಷ ಮುಖದ ರೇವಣಸಿದ್ಧ ರನ್ನು ಸದ್ಯೋಜಾತ ಎಂದೂ, ಅಘೋರ ಮುಖದ ಮರುಳಸಿದ್ಧರನ್ನು ವಾಮದೇವ ಎಂದೂ ಹೇಳಲಾಗಿದೆ. ಅಘೋರ-ತತ್ಪುರುಷ ಮುಖಗಳನ್ನು ಕ್ರಮವಾಗಿ ಏಕೋ-ರಾಮ ಪಂಡಿತಾರಾಧ್ಯರಿಗೆ ಅನ್ವಯಿಸಲಾಗಿದೆ. ಪ್ರಸಾದಿ ಭೋಗಣ್ಣ 'ಸದ್ಯೋಜಾತ

ಮುಖ ಚನ್ನಮಲ್ಲಿಕಾರ್ಜುನ ಲಿಂಗವಾಯಿತ್ತು, ವಾಮದೇವ ಮುಖ ಭೋಗ ಮಲ್ಲಿಕಾರ್ಜುನ ಲಿಂಗವಾಯಿತು, ಅಘೋರಮುಖ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗ ವಾಯಿತ್ತು, ತತ್ಪುರುಷ ಮುಖ ಶಾಂತ ಮಲ್ಲಿಕಾರ್ಜುನ ಲಿಂಗವಾಯಿತ್ತು.. " ಎಂದಿರುವಲ್ಲಿ, ಚತುರಾಚಾರ್ಯರ ಹೆಸರು ಹೇಳಿರದೆ ಅವರು ಪ್ರತಿನಿಧಿಸುವ ಶಿವನ ಮುಖ, ಅವರು ಹೊಂದಿರುವ ಲಿಂಗವನ್ನು ಮಾತ್ರ ಹೇಳಿರುವುದು ಸ್ಪಷ್ಟ. ಗುರು ರಾಜ ಚಾರಿತ್ರ, ಚೆನ್ನಬಸವ ಪುರಾಣಗಳ ಮೂಲಕ ಚತುರಾಚಾರ್ಯರನ್ನು ಹೊಂದಿಸಿ ಕೊಳ್ಳಬೇಕು. ಈ ಕಾವ್ಯಗಳ ಹಾಗೆ ಪ್ರಸಾದಿ ಭೋಗಣ್ಣನ ಈ ವಚನವಾದರೂ ರೇವಣ–ಮರುಳರ ವಿಷಯಕ್ಕೆ ಸಂದಿಗ್ಧತೆಗೆ ಒಳಗಾಗಿಲ್ಲ. ಹಾಗೂ ಏಕೋರಾಮ-ಪಂಡಿತಾರಾಧ್ಯರ ವಿಷಯದಲ್ಲಿ ಗುರುರಾಜ ಚಾರಿತ್ರದ ವಿವರಗಳನ್ನೇ ಅನುಮೋದಿಸು ತ್ತಿದೆ. ಇದರಿಂದ ಪ್ರಸಾದಿ ಭೋಗಣ್ಣನ ವಚನ ಹಾಗೂ ಸಿದ್ಧನಂಜೇಶನ ಗುರುರಾಜ ಚಾರಿತ್ರ ಕೊಡುವ ವಿವರಗಳೇ ಅಧಿಕೃತ, ವಿಶ್ವಸನೀಯ ಎನ್ನಬೇಕಾಗುತ್ತದೆ.

ಚತುರಾಚಾರ್ಯರಿಗೆ ಸಂಬಂಧಿಸಿ ಮೇಲೆ ಹೇಳಲಾದ ಲಿಂಗಗಳನ್ನು ಗುರುರಾಜ ಚಾರಿತ್ರ 'ಪ್ರಾಣಲಿಂಗ' ಗಳೆಂದು ಸ್ಪಷ್ಟವಾಗಿ ಕರೆದಿದೆ. ಮುಂದುವರಿದು ಚೆನ್ನಬಸವ ಪುರಾಣ ಈ ಲಿಂಗಗಳ ಧಾರಣ ಸ್ಥಾನವನ್ನು ಹೇಳಿರುವುದರಿಂದ ಇವು ಇವರ 'ಇಷ್ಟಲಿಂಗ' ಗಳೆಂಬುದು ಸ್ಪಷ್ಟ. ಲಿಂಗೋದ್ಭವರೆಂದೇ ಪಂಚಾಚಾರ್ಯರ ಪ್ರತೀತಿ. ಉದಾಹರಣೆಗೆ, ಕೊಲ್ಲಿಪಾಕಿಯ ಸೋಮನಾಥ ಲಿಂಗದಿಂದ ರೇವಣಸಿದ್ಧ (ರೇಣುಕಾ ಚಾರ್ಯ) ಅವತರಿಸಿದನೆಂಬ ಮಾತಿದೆ. ಈ ಅವತರಣವನ್ನು ವ್ಯಾಖ್ಯಾನಿಸುವಲ್ಲಿನ ತೊಂದರೆ ಏನಾದರೂ ಇರಲಿ, ರೇವಣಸಿದ್ಧನ ಇಷ್ಟಲಿಂಗ ಸೋಮನಾಥ ಎಂದಿರದೆ ಶಾಂತಮಲ್ಲಿಕಾರ್ಜುನ ಎಂದಿರುವುದು ಮಹತ್ವದ್ದು. ಇಷ್ಟು ಹೇಳಬಹುದು : ಕಾಳಾಮುಖ ಪರಂಪರೆಯಲ್ಲಿ ಸೋಮನಾಥ ಭಕ್ತನಾಗಿದ್ದ ರೇವಣಸಿದ್ಧ ಬಸವ ಯುಗದಲ್ಲಿ ವೀರಶೈವಕ್ಕೆ ಒಲಿದವನು ಇಷ್ಟಲಿಂಗ ದೀಕ್ಷಿತನಾಗಿ ಶಾಂತಮಲ್ಲಿಕಾರ್ಜುನ ಎಂಬ ಇಷ್ಟ–ಪ್ರಾಣ–ಭಾವ ಮೂರೂ ಆಗಿರುವ ಲಿಂಗಯ್ಯನ ಸಾಧಕನಾಗಿದ್ದಾನೆ. (ಗುರು ಶಾಂತಿಮಯ್ಯ, ಲಿಂಗಶಾಂತಮಲ್ಲಿಕಾರ್ಜುನ) ಇದೇ ಮಾತನ್ನು ಉಳಿದವರಿಗೂ ಅನ್ವಯಿಸಬಹುದು. ಹೀಗೆ ಕೊಲ್ಲಿಪಾಕಿ, ಕೇದಾರ, ಶ್ರೀಶೈಲ, ವಾರಣಾಸಿ ಇತ್ಯಾದಿ ಶೈವಸ್ಥಾನಗಳ ಆಚಾರ್ಯರು ಹನ್ನೆರಡನೆಯ ಶತಮಾನದಲ್ಲಿ ವೀರಶೈವ ಗುರುಗಳಾಗಿ ದ್ದಾರೆ. ಹನ್ನೆರಡನೆಯ ಶತಮಾನಕ್ಕೂ ಹಿಂದೆ ಅವರ ಇತಿಹಾಸವೆಂದರೆ ಕಾಳಾಮುಖ ಇತಿಹಾಸವೆಂದೇ ನನಗೆ ತೋರುತ್ತದೆ. ಕಾಳಾಮುಖ ಎಂದಾಗ ಕಾಳಾಮುಖ ದೀಕ್ಷೆ ಹೊಂದಿರದ ಲಾಕುಳ ಶೈವರೂ ಅದರಲ್ಲಿ ಸಮಾವೇಶಗೊಂಡಿದ್ದಾರೆಂದು ಭಾವಿಸುವುದು ಸರಿ.

ಮೇಲೆ ನೋಡಿದ ಚತುರಾಚಾರ್ಯರ ನಾಲ್ಕೂ ಪ್ರಾಣಲಿಂಗಗಳು ಶಾಂತ, ಚೆನ್ನ, ಭೋಗ, ಕಪಿಲ ಎಂಬ ವಿಶೇಷಣಗಳೊಂದಿಗೆ 'ಮಲ್ಲಿಕಾರ್ಜುನ' ಹೆಸರನ್ನು

ಸಾಮಾನ್ಯವಾಗಿ ಹೊಂದಿರುವುದು ಕುತೂಹಲಕಾರಿಯಾಗಿದೆ. ಮಲ್ಲಿಕಾರ್ಜುನ ನೆಲೆ ಶ್ರೀಶೈಲವಾಗಿದ್ದು, ಹನ್ನೆರಡನೆಯ ಶತಮಾನದ ಪ್ರಮುಖ ಕಾಳಾಮುಖ ನೆಲೆ ಶ್ರೀಶೈಲವೆಂದೇ ಭಾವಿಸಬೇಕೆ? ಕಾಳಾಮುಖರ 'ಪರ್ವತಾವಳಿ' ಶ್ರೀಶೈಲವನ್ನೇ ಹೇಳುತ್ತಿಲ್ಲವೆ? ಈ ನಿಟ್ಟಿನಲ್ಲಿ ಬಸವಣ್ಣನವರ ವಚನವೊಂದು ನಮ್ಮನ್ನು ಸೆಳೆಯುತ್ತದೆ-

ಕೃತಯುಗದಲ್ಲಿ ಕೇತಾರವೆಂಬ ಮೂಲಸ್ಥಾನ
ತ್ರೇತಾಯುಗದಲ್ಲಿ ವಾರಣಾಸಿಯೆಂಬ ಮೂಲಸ್ಥಾನ
ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ
—ಈ ನಾಲ್ಕು ಮೂಲಸ್ಥಾನ
ನಾನಾ ಸ್ಥಾನಂಗಳ ಮುಟ್ಟದೆ ಜಂಗಮವೆ ಲಿಂಗವೆಂದು ನಂಬಿದೆ
ಕೂಡಲಸಂಗಮದೇವಾ।

ಜಂಗಮವೇ ಲಿಂಗವೆಂದು ನಂಬುವ ಬಸವಣ್ಣ, ಸ್ಥಾವರಲಿಂಗೋಪಾಸಕರಾದ ಶೈವ ಪರಂಪರೆಯನ್ನು ಹೇಳುತ್ತ ನಾಲ್ಕು ಯುಗ ಅರ್ಥಾತ್ ಬೆಳವಣಿಗೆಯ ನಾಲ್ಕು ಘಟ್ಟಗಳಲ್ಲಿ ತನ್ನ ಕಾಲಕ್ಕೆ ಹತ್ತಿರವಿರುವ ನಾಲ್ಕನೆಯ ಘಟ್ಟವನ್ನು ಕಲಿಯುಗವೆಂದು ನಿರ್ದೇಶಿಸುತ್ತ 'ಪರ್ವತವೆಂಬ ಮೂಲಸ್ಥಾನ' ಎನ್ನುತ್ತಾನೆ[2]. 'ಮೂಲಸ್ಥಾನ'ವೆಂಬುದು ಕಾಳಾಮುಖ ಪರಿಭಾಷೆಯಾಗಿರುವ ಹಾಗೆ, 'ಪರ್ವತ'ವು ಶ್ರೀಶೈಲವೇ ಆಗಿದೆ. ಅಂದರೆ ಬಸವಯುಗದಲ್ಲಿಯೇ ಜೀವಿಸಿದ್ದ ರೇವಣಾದಿ ಚತುರಾಚಾರ್ಯರು ಪರ್ವತ ಅಂದರೆ ಶ್ರೀಶೈಲ 'ಮೂಲ'ದ ಕಾಳಾಮುಖ ಆಚಾರ್ಯರೇ ಆಗಿದ್ದು, ವೀರಶೈವಕ್ಕೆ ಹೊರಳಿದ ಮೇಲೆ ಶ್ರೀಶೈಲ ಮಲ್ಲಿಕಾರ್ಜುನನನ್ನು ಚೆನ್ನ, ಕಪಿಲ ಮೊದಲಾದ ವಿಶೇಷಣಗಳೊಂದಿಗೆ ಕರೆದುಕೊಂಡಿದ್ದಾರೆ. ಚೆನ್ನಮಲ್ಲಿಕಾರ್ಜುನ ಏಕೋರಾಮನ ಲಿಂಗವಿರುವ ಹಾಗೆ[3], ಮಹಾದೇವಿಯಕ್ಕನ ದೈವವೂ ವಚನಾಂಕಿತವೂ ಆಗಿದೆ; ಕಪಿಲಸಿದ್ಧ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಲಿಂಗವಿರುವ ಹಾಗೆ ಸಿದ್ಧರಾಮನ ದೈವವೂ ವಚನಾಂಕಿತವೂ ಆಗಿದೆ. ಮಲ್ಲಿಕಾರ್ಜುನ (ಶ್ರೀಶೈಲ) ಹೇಗೆ ಈ ಕಾಲದಲ್ಲಿ ಅನಂತ ವಿಶೇಷಣಗಳೊಂದಿಗೆ ಅನೇಕರಿಗೆ ಇಷ್ಟ ದೈವವಾಗಿದ್ದ ಎಂಬುದಕ್ಕೆ ಈ ಮಾತು. ಅಂಕಿತಗಳ ಹಾಗೆ ಕೇಳಿಸುತ್ತಿರುವ ರೇವಣಸಿದ್ಧ ಮೊದಲಾದವರ ಇಷ್ಟಲಿಂಗಗಳ ಹೆಸರಿನಲ್ಲಿ ವಚನ ಸಾಹಿತ್ಯವೇನಾದರೂ ರಚನೆಯಾಗಿದೆಯೆ? ಶೋಧಿಸಬೇಕಿದೆ.

1. ಡಾ॥ ಆರ್. ಸಿ. ಹಿರೇಮಠ (ಸಂ), ಬಸವಣ್ಣನವರ ವಚನಗಳು, ವ. ಸಂ. 394.
2. 'ಕಲಿಯುಗ... ಶ್ರೀಶೈಲ ಮಲ್ಲಿಕಾರ್ಜುನದೇವರು ಮೂಲಸ್ಥಾನ' ಎನ್ನುವ ಚೆನ್ನಬಸವಣ್ಣನಲ್ಲೂ ಬಸವಣ್ಣ ಹೇಳುವ 'ಪರ್ವತ' ವೆಂಬ ಮೂಲ ಸ್ಥಾನದ ಅಭಿಪ್ರಾಯವೇ ಇದೆ. (ಚೆ.ಬ.ವ.–526)
3. ಏಕೋರಾಮನ ಇಷ್ಟಲಿಂಗ ಭೋಗಮಲ್ಲಿಕಾರ್ಜುನ ಇರಬಹುದೆ? ಎಂದು ನನಗೆ ಅನುಮಾನ. ಅವನ ಊರಾದ ಮುದನೂರಿನಲ್ಲಿ ಭೋಗಮಲ್ಲೇಶನ ದೇವಸ್ಥಾನ ಇರುವುದರಿಂದ ಈ ಮಾತು.

ವಿಶಿಷ್ಟಾದ್ವೈತ ದರ್ಶನ ಮೂಲಾಂಶಗಳು

ಡಾ॥ ಟಿ. ಬಿ. ಬಸವರಾಜು

ಶ್ರೀರಾಮಾನುಜರು ವಿಶಿಷ್ಟಾದ್ವೈತ ತತ್ತ್ವ ಸಿದ್ಧಾಂತ ಪ್ರವರ್ತಕರು. ವಿಶಿಷ್ಟಾದ್ವೈತ ಸಿದ್ಧಾಂತವು ಶ್ರೀವೈಷ್ಣವ ಸಿದ್ಧಾಂತವೆಂದೂ ಹೆಸರಾಗಿದೆ. ವಾಸ್ತವವಾಗಿ ಈ ಸಿದ್ಧಾಂತವು ಶ್ರೀರಾಮಾನುಜರಿಗಿಂತ ಬಹು ಪ್ರಾಚೀನಕಾಲದಿಂದಲೂ ಸಂಸ್ಕೃತ, ದ್ರಾವಿಡಮಯ ಗ್ರಂಥಗಳಿಂದ ಪ್ರಚಾರದಲ್ಲಿತ್ತು. ಪೂರ್ವಕಾಲದಲ್ಲಿದ್ದ ಭಗವದ್ ಭಕ್ತರಾದ ಆಳ್ವಾರರುಗಳಿಂದ ಸೃಷ್ಟಿಯಾಗಿ, ನಾಲಾಯಿರ ದಿವ್ಯಪ್ರಬಂಧಗಳೆಂದೂ, ದ್ರಾವಿಡವೇದಗಳೆಂದೂ ಹೆಸರಾಗಿರುವ ಗ್ರಂಥಗಳು ಈ ಸಿದ್ಧಾಂತಕ್ಕೆ ಆಧಾರವಾಗಿವೆ.

ಶ್ರೀರಾಮಾನುಜರೇ ತಮ್ಮ ಪ್ರಸಿದ್ಧ ಶ್ರೀಭಾಷ್ಯದಲ್ಲಿ ಪ್ರಾಚೀನಕಾಲದಲ್ಲಿ ವಿಶಿಷ್ಟಾದ್ವೈತವನ್ನು ಪ್ರತಿಪಾದಿಸಿದ ಆಚಾರ್ಯರುಗಳನ್ನು ಉಲ್ಲೇಖಿಸಿ ಅವರನ್ನು ಪೂರ್ವಾಚಾರ್ಯರುಗಳೆಂದೇ ಕರೆದಿರುವರು. ಪೂರ್ವಕಾಲದ ಆಚಾರ್ಯರೆಂದರೆ, 'ಪರಾಶರ', 'ಬೋಧಾಯನ', 'ಟಂಕ', 'ದ್ರಮಿಡ' 'ಗುಹದೇವ', 'ಭಾರುಚಿ' ಮುಂತಾದವರು. ಇವರೆಲ್ಲಾ 'ಸಂಸ್ಕೃತ' ಪರಂಪರೆಗೆ ಸೇರಿದವರಾದರೆ, 'ಆಳ್ವಾರರು' 'ತಮಿಳು' ಪರಂಪರೆಗೆ ಸೇರಿದವರು. ಆಳ್ವಾರರ ನಂತರ 'ನಾಥಮುನಿ'ಗಳು, ಈ ತಮಿಳು ಪ್ರಬಂಧಗಳಿಗೆಲ್ಲಾ ಸಂಗೀತ ಹಚ್ಚಿ, ಜನಪ್ರಿಯತೆ ದೊರಕುವಂತೆ ಮಾಡಿ, ಇವುಗಳನ್ನು ದೇವಗಾನಗಳೆಂದೂ, ದಿವ್ಯಪ್ರಬಂಧಗಳೆಂದೂ ಕರೆದು ಕೊಂಡಾಡಿದರು.

ಒಟ್ಟಾರೆ ಪ್ರಾಚೀನ ಕಾಲದಲ್ಲಿ ಹುಟ್ಟಿ ಹರಿದುಬಂದ ಎರಡು ಚಿಂತನಾವಾಹಿನಿಗಳು ಇಲ್ಲಿ ಸಂಗಮಗೊಂಡಿವೆ. ಆದುದರಿಂದಲೇ ಈ ದರ್ಶನವನ್ನು 'ಉಭಯ ವೇದಾಂತ' ವೆಂದೂ ಕರೆಯುವರು. ಶ್ರೀ ವೈಷ್ಣವ ಸಿದ್ಧಾಂತದ ಆಚಾರ್ಯ ಪರಂಪರೆಯಲ್ಲಿ ನಾಥಮುನಿಗಳು [ಕ್ರಿ. ಶ. 582ನೇ ಸಂವತ್ಸರ] ಮೊದಲನೆಯವರು. ಇವರ ಶಿಷ್ಯ ಪರಂಪರೆಯಲ್ಲಿ ಶ್ರೀರಾಮಾನುಜರು ಏಳನೆಯವರು.

ಶ್ರೀರಾಮಾನುಜರು ಪ್ರತಿಪಾದಿಸಿದ ಸಿದ್ಧಾಂತ 'ದೊಡ್ಡದು' ! ಅವರ ಬದುಕು ಮತ್ತೂ 'ದೊಡ್ಡದು' !! ಶ್ರೀರಾಮಾನುಜರು ಬದುಕಿದ ರೀತಿಯೇ ವಿಶಿಷ್ಟವಾದದ್ದು, ಉದಾರವಾದದ್ದು, ಮಾನವೀಯವಾದದ್ದು : ಈ ಕಾರಣದಿಂದಲೇ ಅವರ ಬದುಕಿನಲ್ಲಿ ರೋಗಗ್ರಸ್ಥವಾದ, ಅಲ್ಪವಾದ ಎಲ್ಲ ಬಗೆಯ ವಿಧಿ-ನಿಷೇಧಗಳನ್ನು ದಾಟುವ, ಮೀರಿ ನಿಲ್ಲುವ ತವಕ, ಪ್ರಯತ್ನ ಕಂಡುಬರುತ್ತದೆ. ಸಾಂಪ್ರದಾಯಿಕ ಚೌಕಟ್ಟನ್ನು ಮೀರಿ

ನಿಂತು, ಜನಸಾಮಾನ್ಯರಿಗೂ ಸಹ ದೈವಭಕ್ತಿ, ಜ್ಞಾನ, ಋಜುಮಾರ್ಗಗಳ ಅಗತ್ಯತೆಯನ್ನು ಎತ್ತಿಹಿಡಿದು, ಯಾವ ಭೇದವನ್ನೂ ತೋರದೆ ಸರ್ವರಿಗೂ ಆತ್ಮೋದ್ಧಾರದ ಬೆಳಕನ್ನು ನೀಡುವ ಶ್ರೀರಾಮಾನುಜರ ಆಶಯ, ಮಾನವಪ್ರೇಮ ಅವರ ಬದುಕಿನುದ್ದಕ್ಕೂ ಕಾಣಸಿಗುತ್ತದೆ; ಅವರನ್ನು ಕಾಲದ (·) ಸಂದರ್ಭದಲ್ಲಿಟ್ಟು ನೋಡಿದಾಗಲೇ ಅವರ ಮಹತ್ತ್ವದ ಅರಿವಾಗುವುದು! ಆ, ಕಾಲದಲ್ಲೇ ಅವರಿಟ್ಟ ದಿಟ್ಟ ಹೆಜ್ಜೆಗಳ ಗಟ್ಟಿತನ ನಮ್ಮ ಅಂತಃ ಪ್ರಜ್ಞೆಯನ್ನು ತಟ್ಟುವುದು! 120 ವರ್ಷಗಳ (?) ತುಂಬು ಬಾಳಿನಲ್ಲಿ ಅವರು ಅದ್ಭುತ ಸಾಧನೆ ಮಾಡಿದರು! ಶ್ರೀರಾಮಾನುಜರು ಇಡೀ ಮಾನವ ಜನಾಂಗಕ್ಕೇ ಸಲ್ಲುವ ಮಹಾನ್ ಚೇತನ.

(i)

ವಿಶಿಷ್ಟಾದ್ವೈತವೆಂದರೆ ವಿಶೇಷಣಗಳಿಂದ ಕೂಡಿರುವ ಅದ್ವೈತವೆಂದು ಅರ್ಥ. 'ಅಂತಿಮ ಸತ್ಯ' ಎನಿಸಿದ 'ಬ್ರಹ್ಮತತ್ತ್ವ' ಒಂದೇ ಆದರೂ 'ಚಿತ್' ಮತ್ತು 'ಅಚಿತ್' ಗಳು ಅದರ ವಿಶೇಷಣಗಳು. ಪರವಸ್ತುವಾದ ಬ್ರಹ್ಮವು ಈ ವಿಶೇಷಣಗಳಿಂದ ಕೂಡಿರುವ ಏಕಮೇವಾ ದ್ವಿತೀಯ. 'ಚಿತ್' ಎಂದರೆ ಜೀವಾತ್ಮ 'ಅಚಿತ್' ಎಂದರೆ ಜಡ ಪ್ರಪಂಚ. 'ಚಿತ್' ಹಾಗೂ 'ಅಚಿತ್' ಗಳು ಬ್ರಹ್ಮನಷ್ಟೇ ಸತ್ಯ; ಅವುಗಳು ಬ್ರಹ್ಮನಿಂದ ಬೇರೆಯಾದರೂ ಬ್ರಹ್ಮನಲ್ಲಿದ್ದುಕೊಂಡು ಬ್ರಹ್ಮಕ್ಕೆ ಅಧೀನವಾಗಿವೆ. ಬ್ರಹ್ಮನು 'ಚಿತ್' ಮತ್ತು ಅಚಿತ್' ಗಳಿಂದ ವಿಶಿಷ್ಟನಾಗಿ ಏಕನೂ, ನಿತ್ಯನೂ, ಶಾಶ್ವತನೂ ಆಗಿದ್ದಾನೆ.

ವಿಶಿಷ್ಟಾದ್ವೈತ ದರ್ಶನದಲ್ಲಿ ಬ್ರಹ್ಮ ನಿರ್ಗುಣನಲ್ಲ, 'ಸಗುಣ. ಬ್ರಹ್ಮ ತತ್ತ್ವಕ್ಕೆ ಈ ದರ್ಶನದಲ್ಲಿ ಸಗುಣ ನಿಲುವಿಗೆ ಅನುಸಾರವಾಗಿ ನಾಮ, ರೂಪಗಳನ್ನು ಅನ್ವಯಿಸಲಾಗಿದೆ. ಈ ರೀತಿಯಲ್ಲಿಯೇ ಬ್ರಹ್ಮತತ್ತ್ವವನ್ನು ಇಲ್ಲಿ 'ನಾರಾಯಣ', 'ವಿಷ್ಣು' ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಶ್ರೀಮನ್ನಾರಾಯಣನು 'ಸಕಲ ಕಲ್ಯಾಣಗುಣಪರಿಪೂರ್ಣ', 'ಸರ್ವಾಂತರ್ಯಾಮಿ', 'ಅನಂತ', 'ಸರ್ವವ್ಯಾಪಿ': ಅವನು ಸತ್ಯನೂ, ಜ್ಞಾನಮಯನೂ ಆಗಿದ್ದಾನೆ. ನಾರಾಯಣ ಹಾಗೂ ಜೀವ, ಜಗತ್ತುಗಳ ನಡುವಿನ ಸಂಬಂಧ ಅನನ್ಯ, ಅತಿ ನಿಕಟ, ಬೇರ್ಪಡಿಸಲು ಸಾಧ್ಯವಿಲ್ಲ. ಜೀವ-ಜಗತ್ತುಗಳೂ ಸಹ ಸತ್ಯವಾದರೂ ಅವು ಶ್ರೀಮನ್ನಾರಾಯಣನನ್ನೇ ಆಧರಿಸಿವೆ. ಶ್ರೀಮನ್ನಾರಾಯಣನನ್ನು ಬಿಟ್ಟು ಅವು ಇರುವುದು ಅಸಾಧ್ಯ; ಈ ಬಗೆಯ ಸಂಬಂಧವನ್ನು ಈ ದರ್ಶನದಲ್ಲಿ 'ಅಪೃಥಕ್‌ಸಿದ್ಧಿ ಸಂಬಂಧ' ವೆಂದೇ ಕರೆಯಲಾಗಿದೆ. ನಾರಾಯಣ, ಜೀವ ಹಾಗೂ ಜಗತ್ತುಗಳೆಂಬ ಮೂರೂ ತತ್ತ್ವಗಳು ಪರಸ್ಪರ ಬೇರ್ಪಡಿಸಲಾರದ ಸಂಬಂಧವನ್ನು ಹೊಂದಿದ್ದರೂ, ಅವು ಮೂರೂ ವಿಭಿನ್ನ ತತ್ತ್ವಗಳು ಎನ್ನುವ ಅಂಶ ಇಲ್ಲಿ ಮೂಲಭೂತವಾದುದು.

ಭಗವಂತ (ನಾರಾಯಣ) ನಿಯಾಮ, ಜೀವ–ಜಗತ್ತುಗಳ ನಿಯಾಮ್ಯ; ನಾರಾಯಣ ಶೇಷಿ, ಜೀವ–ಜಗತ್ತುಗಳು ಶೇಷರು; ನಾರಾಯಣನ ಶರೀರಗಳೇ ಜೀವ ಹಾಗೂ ಜಗತ್ತು; ಭಗವಂತನು ಜೀವ–ಜಗತ್ತುಗಳ ಆತ್ಮನಾಗಿದ್ದಾನೆ. ಆದರೆ ಜೀವ–ಜಗತ್ತುಗಳ ಸುಖ–ದುಃಖಗಳಿಂದಾಗುವ ಪರಿಣಾಮಗಳಿಗೆ, ಕರ್ಮ ಬಂಧನ ಗಳಿಗೆಲ್ಲಾ ಆತ ಅತೀತ; ಅವನು ಜ್ಞಾನ, ಶಕ್ತಿ, ಐಶ್ವರ್ಯ, ಬಲ, ವೀರ್ಯ, ತೇಜಸ್ಸುಗಳೆಂಬ ಷಡ್ಗುಣ ಸಂಪನ್ನ; ಪರಮ ಪುರುಷ, ಪೂರ್ಣ ಪುರುಷ.

(ii)

ವಿಶಿಷ್ಟಾದ್ವೈತ ದರ್ಶನ ಪ್ರತಿಪಾದಿಸುವಂತೆ ಜೀವಾತ್ಮನೂ ಕೂಡ ಸತ್ಯ, ಶ್ರೀಮನ್ ನಾರಾಯಣನ ಅಂಶ; ಇಚ್ಛೆ, ಜ್ಞಾನ, ಕ್ರಿಯೆಗಳಿಂದ ಕೂಡಿ ಕರ್ತನೂ, ಭೋಕ್ತೃವೂ ಆಗಿರುವನು; ನಾರಾಯಣನಿಂದ ವಿಭಿನ್ನನಾಗಿದ್ದರೂ ಅವನಿಗೆ ಅಧೀನ, ಪರತಂತ್ರ, ಅಣುಪ್ರಮಾಣ; ಭಗವಂತನ ಸೇವಕ ಮತ್ತು ದಾಸ.

ಜೀವಾತ್ಮರುಗಳು ಸಂಖ್ಯೆಯಲ್ಲಿ ಅನೇಕ; ಕರ್ಮ ಸಿದ್ಧಾಂತಕ್ಕನುಗುಣವಾಗಿ ಸಂಸಾರದಲ್ಲಿ ಸುಖ ಮತ್ತು ದುಃಖಗಳನ್ನು ಹೊಂದುವ ಜೀವಾತ್ಮ ಭಗವಂತನ ಕೃಪಾಕಟಾಕ್ಷದಿಂದಲೇ ಮೋಕ್ಷ ಹೊಂದುವನು. ಜೀವಾತ್ಮನ ಗುಣವಿಶೇಷವಾದ ಧರ್ಮಭೂತಜ್ಞಾನವು[ಅರಿವು]ಪ್ರಾಪಂಚಿಕ ಜ್ಞಾನವನ್ನು ಪಡೆಯಲು ನೆರವಾಗುವುದು. ಭಗವಂತನೂ ಸಹ ಧರ್ಮಭೂತ ಜ್ಞಾನವನ್ನು ಹೊಂದಿರುವನು, ಅವನ ಧರ್ಮ ಭೂತ ಜ್ಞಾನ ಸಂಪೂರ್ಣ ವಿಕಾಸವಾಗಿಯೇ ಇರುವುದು; ಆದುದರಿಂದಲೇ ಅಜ್ಞಾನ, ಬಂಧನಗಳು ಭಗವಂತನಿಗೆ ಅನ್ವಯವಾಗಲಾರವು; ಆದರೆ ಜೀವಾತ್ಮನ ಧರ್ಮಭೂತ ಜ್ಞಾನವು ಸಂಪೂರ್ಣ ವಿಕಾಸವಾಗಿರದೆ ಸಂಕುಚಿತವಾಗಿರುವುದು; ಮೋಕ್ಷದಲ್ಲಿ ಅದು ಪೂರ್ಣ ವಿಕಾಸ ಹೊಂದಿ ಭಗವಂತನ ಧರ್ಮಭೂತ ಜ್ಞಾನಕ್ಕೆ ಸಮನಾಗುವುದು.

(iii)

ಈ ದರ್ಶನದ ನಿಲುವಿನಂತೆ ಈ ಗೋಚರ ಪ್ರಪಂಚ ಮಿಥ್ಯೆಯಲ್ಲ. ಸತ್ಯ ವಾದುದು. ಅಚಿತ್‌ನಿಂದಾಗಿರುವ ಜಗತ್ತನ್ನು ಶ್ರೀಮನ್ ನಾರಾಯಣನೇ ಸೃಷ್ಟಿಸಿ ದ್ದಾನೆ. ಜಗತ್ತಿನ ಸಮಸ್ತಕ್ಕೂ ಅವನೇ ಆಧಾರ, ಆದರೆ ಈ ಜಗತ್ತಿನಿಂದ ಅವನಿಗೆ ಯಾವ ಲಾಭವೂ ಇಲ್ಲ, ಅವನು ಪರಿಪೂರ್ಣ, ಸತ್ಯ ಸಂಕಲ್ಪ ಅರ್ಥಾತ್ ನಾರಾಯಣನ ಸ್ವ-ಸಂಕಲ್ಪದಿಂದ, ಲೀಲಾವಿಲಾಸದಿಂದಲೇ ಈ ಜಗತ್ತು ಸೃಷ್ಟಿಯಾಗಿದೆ. ಶ್ರೀಮನ್ ನಾರಾಯಣನ ವಿಶೇಷಣವಾಗಿ, ಅವನಿಗಿಂತ ಭಿನ್ನವಾಗಿ, ಅವನ ನಿತ್ಯ ನಿಯಂತ್ರಣಕ್ಕೊಳಗಾದ ಜಗತ್ತು ಸತ್ವ, ರಜಸ್, ತಮೋಗುಣಗಳನ್ನು ಹೊಂದಿರು ವುದು. ಶ್ರೀಮನ್ ನಾರಾಯಣನು ಜಗತ್ತಿನ ಉಪಾದಾನ ಹಾಗೂ ನಿಮಿತ್ತ ಕಾರಣನು.

ಶ್ರೀಮನ್ ನಾರಾಯಣನನ್ನೇ ಆಧರಿಸಿರುವ ಪ್ರಕೃತಿಯೂ ನಿತ್ಯ, ಅದು ಲಕ್ಷ್ಮೀ ದೇವಿಯ ಸಲಹೆ, ನಾರಾಯಣನ ಮಾರ್ಗದರ್ಶನ ಬಲದಿಂದಲೇ ಜಗತ್ತಾಗಿ ಪರಿಣಾಮ ಹೊಂದುವುದು.

ಈ ದರ್ಶನದಲ್ಲಿ ಒಟ್ಟು ಆರು ದ್ರವ್ಯಗಳನ್ನು ಒಪ್ಪಿಕೊಳ್ಳಲಾಗಿದೆ. ಅವುಗಳು ಭಗವಂತ, ಜೀವಾತ್ಮ, ಜಗತ್ತು, ನಿತ್ಯ ವಿಭೂತಿ, ಕಾಲ ಮತ್ತು ಧರ್ಮಭೂತ ಜ್ಞಾನ. ನಾರಾಯಣ ಹಾಗೂ ಜೀವಾತ್ಮ ಚಿತ್ ತತ್ತ್ವಗಳೆನಿಸಿದರೆ, ಜಗತ್ತು, ನಿತ್ಯವಿಭೂತಿ ಮತ್ತು ಕಾಲ ಅಜಿತ್ ತತ್ತ್ವಗಳೇ ಹೌದು. ಧರ್ಮಭೂತ ಜ್ಞಾನವನ್ನು ವಿಶಿಷ್ಟಾ ದ್ವೈತದರ್ಶನದಲ್ಲಿ 'ಅಜಡ' ಎಂದೇ ಹೆಸರಿಸಿ, ಅದನ್ನು ದೀಪಕ್ಕೆ ಹೋಲಿಸಲಾಗಿದೆ; ಬೇರೆ ಬೇರೆ ವಸ್ತುಗಳನ್ನು ಪ್ರಕಾಶ ಪಡಿಸುವ ಧರ್ಮಭೂತ ಜ್ಞಾನವು ತನ್ನನ್ನು ತಾನು ಅರಿಯಲಾರದು, ಆದುದರಿಂದಲೇ ಇದು ಸಂಪೂರ್ಣ ಚೈತನ್ಯವೂ ಅಲ್ಲ, ಜಡವೂ ಅಲ್ಲವೆನಿಸಿದೆ; ಆದರೆ, ನಿತ್ಯವಿಭೂತಿಯು ಪೂರ್ಣ ಸತ್ವದಿಂದ ಕೂಡಿ ರಜಸ್ಸು, ತಮಸ್ಸುಗಳಿಂದ ಮುಕ್ತವಾಗಿದೆ. ನಾರಾಯಣ ಅಥವಾ ವಿಷ್ಣುವಿನ ಮಂಗಳ ದೇಹವು ನಿತ್ಯ ವಿಭೂತಿಯಿಂದಲೇ ಆಗಿರುವುದು ಎಂದು ಪ್ರಸ್ತುತಪಡಿಸುವ ಈ ದರ್ಶನವು ಶ್ರೀಮನ್ ನಾರಾಯಣನು ವೈಕುಂಠದಲ್ಲಿ ಲಕ್ಷ್ಮೀ ಸಮೇತ ರೂಢನಾಗಿರು ವನು ಎಂದೇ ನಂಬುತ್ತದೆ.

iv

ಪರಮಾತ್ಮನಾದ ಶ್ರೀಮನ್ ನಾರಾಯಣನು ಪರಮ ಸೌಶೀಲ್ಯ, ದಯಾನಿಧಿ, ಭಕ್ತವತ್ಸಲ ತನ್ನ ಭಕ್ತರ ಪ್ರಾರ್ಥನೆಗೆ ಅನುಗುಣವಾಗಿ, ಸರ್ವರ ಪಾಪ ವಿಮೋಚ ನೆಯ ಸಲುವಾಗಿ ಈ ಜಗತ್ತಿನಲ್ಲಿ ಐದು ರೂಪಗಳಲ್ಲಿ ಅಭಿವ್ಯಕ್ತಗೊಳ್ಳುವನು :

(i) ಪರಾ—ಅರ್ಥಾತ್, ನಿತ್ಯನಾಗಿ, ನಿರ್ವಿಕಾರನಾಗಿ, ಜಗತ್ತಿನಿಂದ ಅತೀತ ನಾಗಿರುವುದು.

(ii) ವ್ಯೂಹ—ಅರ್ಥಾತ್, ಜಗತ್ತಿನ ಸರ್ವ ಅಸ್ತಿತ್ವ ಹಾಗೂ ಕ್ರಿಯೆಗಳಿಗೂ ಆಧಾರವಾಗಿ ಎಲ್ಲವನ್ನೂ ಆವರಿಸಿರುವುದು.

(iii) ಅಂತರ್ಯಾಮಿ—ಅರ್ಥಾತ್, ಪ್ರತೀ ಜೀವಾತ್ಮನಲ್ಲಿಯೂ ವಿಶಿಷ್ಟ ರೀತಿ ಯಲ್ಲಿದ್ದುಕೊಂಡು ಅದರ ಅನುಭವಗಳಲ್ಲಿ ಆನಂದವನ್ನು ಅನುಭವಿಸುತ್ತಿರುವುದು.

(iv) ಅರ್ಚಾ—ಅರ್ಥಾತ್, ಭಕ್ತನ ಕಲ್ಪನೆಗೆ ಒಳಪಟ್ಟು ಆತನ ಅನುಕೂಲ ಕ್ಕಾಗಿ ಪೂಜಿಸಲ್ಪಡುವ ಭೌತಿಕವಾದ ವಿಗ್ರಹದಲ್ಲಿ ಅಡಗಿರುವುದು.

(v) ಅವತಾರ—ಅರ್ಥಾತ್, ಜಗತ್ತಿನಲ್ಲಿ ಆಗಾಗ ಸಂಭವಿಸಬಹುದಾದ ಅಧರ್ಮವನ್ನು ನಾಶಮಾಡಿ, ಧರ್ಮವನ್ನು ಎತ್ತಿಹಿಡಿಯಲು ಒಬ್ಬ ವ್ಯಕ್ತಿ ಅಥವಾ ಮಹಾಪುರುಷನಂತೆ ಜನ್ಮತಾಳಿ ಬರುವುದು.

ಪರಮಕಾರುಣ್ಯಮೂರ್ತಿ ಶ್ರೀಮನ್ ನಾರಾಯಣನು ಈ ಮೇಲಿನ ಹಂತಗಳಲ್ಲಿ ಜಗತ್ತಿನ ಕಲ್ಯಾಣಕ್ಕಾಗಿ ತನ್ನನ್ನು ತಾನೇ ಅಭಿವ್ಯಕ್ತಪಡಿಸಿಕೊಳ್ಳುತ್ತಾನೆ.

ಅನಿಷ್ಟ ಹಾಗೂ ದುಃಖಗಳ ಮೂಲ ವ್ಯಕ್ತಿಗಳ ಕರ್ಮ; ಸತ್ಕರ್ಮದ ಫಲ ಸುಖ, ದುಷ್ಕರ್ಮದ ಫಲ ದುಃಖ, ಮೋಕ್ಷ ಪಡೆಯಲು ಮಾನವನು ಸತ್ಕರ್ಮ ಮಾಡುವುದರ ಜೊತೆಗೆ ಭಗವಂತನ ಅನುಗ್ರಹವನ್ನೂ ಸಂಪಾದಿಸಬೇಕು. ಶ್ರೀಮನ್ ನಾರಾಯಣನ ಮೇಲಿನ ಪರಿಪೂರ್ಣ ಭಗವತ್‌ಭಕ್ತಿ, ಜ್ಞಾನಗಳು ಅವನ ಅನುಗ್ರಹಕ್ಕೆ ಸಾಧನಗಳು; ಭಗವದನುಗ್ರಹವನ್ನು ಯಾವುದೇ ಕುಲ, ಲಿಂಗ, ಜಾತಿ, ಮತ ಭೇದ ವಿಲ್ಲದೆ ಎಲ್ಲರೂ ಹೊಂದಬಹುದು.

(v)

ಮೋಕ್ಷ ಸ್ವರೂಪ ಮತ್ತು ಮೋಕ್ಷ ಸಾಧನೆಗಳ ಬಗೆಗೆ ವಿಶಿಷ್ಟಾದ್ವೈತ ನಿಲುವನ್ನು ಈಗ ವಿವರಿಸಬಹುದು. ಜೀವಾತ್ಮನು ಎಲ್ಲ ಬಗೆಯ ಪಾಶಗಳಿಂದ ದೂರಾಗಿ, ಸಂಸಾರದಿಂದ ಬಿಡುಗಡೆ ಪಡೆಯುವುದೇ ಮೋಕ್ಷದ ಅರ್ಥ. ದೇಹ ತ್ಯಜಿಸಿದ ನಂತರವೇ ಮೋಕ್ಷ ಲಭಿಸುವುದು. ಈ ಸಿದ್ಧಾಂತದ ಪ್ರಕಾರ ಅಂತಿಮವಾಗಿ ಮುಕ್ತನಾದ ಜೀವಾತ್ಮನು ಶ್ರೀಮನ್ ನಾರಾಯಣನಲ್ಲಿ ಐಕ್ಯನಾಗುವುದಿಲ್ಲ. ಬದಲಾಗಿ ತನ್ನತನವನ್ನು ಉಳಿಸಿಕೊಂಡು ನಾರಾಯಣನ ನಿತ್ಯಸಾಕ್ಷಾತ್ಕಾರ ಆನಂದವನ್ನು ಹೊಂದುವನು. ಶ್ರೀಮನ್ ನಾರಾಯಣನ ಪ್ರೀತಿಯಲ್ಲಿ ತಲ್ಲೀನನಾಗಿ, ಅವನ ಕೈಂಕರ್ಯದಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾ 'ನಾನು ಆನಂದವನ್ನು ಅನುಭವಿಸುತ್ತಿರುವೆ' 'ನಾನು ಶ್ರೀಮನ್ ನಾರಾಯಣನಲ್ಲ', 'ಶ್ರೀಮನ್ ನಾರಾಯಣನೇ ನನಗೆ ಆಧಾರ ಗತಿ' 'ನಾನು ಅವನ ದಾಸ, ಪರಮ ಸೇವಕ' ಎಂಬ ಅರಿವನ್ನು ಹೊಂದಿರುವುದು.

ಮೋಕ್ಷವನ್ನು ಪಡೆಯಲು ಜೀವಾತ್ಮನು ಸ್ವ-ಪ್ರಯತ್ನದ ಜೊತೆಗೆ ಭಗವದನುಗ್ರಹವನ್ನೂ ಸಂಪಾದಿಸಬೇಕಾದುದು ಅತೀಮುಖ್ಯ. ಮುಕ್ತಿ ಪಡೆಯುವ ಸಲುವಾಗಿ ಸಾಧಕ ಸಾಧನಾಮಾರ್ಗವನ್ನು ಅನುಸರಿಸುವುದು ಅತ್ಯಗತ್ಯ. ಸಾಧನಾ ಮಾರ್ಗವು ಮುಖ್ಯವಾಗಿ ಮೂರು ಹಂತಗಳಾಗಿ ವಿಭಾಗಿಸಲ್ಪಟ್ಟಿದೆ:—

(i) **ಕರ್ಮಯೋಗ**—ಅಂದರೆ ವೇದಾಧ್ಯಯನ, ದುಷ್ಕರ್ಮಗಳಿಂದ ದೂರಾಗಿ, ಭಗವದುಪಾಸನೆ, ದಾನ ಮುಂತಾದ ಸತ್ಕರ್ಮಗಳನ್ನು ಮಾಡುವುದು.

(ii) **ಜ್ಞಾನಯೋಗ**—ಅಂದರೆ, ತಾನು ಪ್ರಕೃತಿಯಿಂದ ಬೇರೆಯೆಂದೂ, ಶ್ರೀಮನ್ ನಾರಾಯಣನ ಮೇಲೆ ಸಂಪೂರ್ಣ ಅವಲಂಬಿತನಾಗಿರುವೆನೆಂಬ ಪ್ರಮಾಣ ಪೂರ್ವಕವಾದ ಅರಿವನ್ನು ಹೊಂದುವುದು.

(iii) ಭಕ್ತಿಯೋಗ—ಅಂದರೆ, ಶ್ರೀಮನ್ ನಾರಾಯಣನ ಮೇಲೆ ಮನಸ್ಸನ್ನು ಸಂಪೂರ್ಣ ನೆಟ್ಟು, ಅವನನ್ನೇ ಕುರಿತು ಧ್ಯಾನಿಸುವುದು.

ಶ್ರೀಮನ್ ನಾರಾಯಣನ ಮೇಲೆ ಮನಸ್ಸನ್ನು ಕೇಂದ್ರೀಕರಿಸಲು ಅಷ್ಟಾಂಗಗಳು ನೆರವು ನೀಡುತ್ತವೆ. ಅಷ್ಟಾಂಗಗಳು ಹೀಗಿವೆ :—

ಅ.	ಯಮ	[ಬ್ರಹ್ಮಚರ್ಯ, ಸತ್ಯ, ಅಹಿಂಸೆ, ಅಸ್ತೇಯ]
ಆ.	ನಿಯಮ	[ಶರೀರ ಹಾಗೂ ಮನಸ್ಸಿನ ಪರಿಶುದ್ಧತೆ ಕಾಪಾಡುವುದು, ಭಗವದಾರಾಧನೆ, ತೃಪ್ತಿ ಇತ್ಯಾದಿ]
ಇ.	ಆಸನ	[ಧ್ಯಾನಕ್ಕೆ ಪೂರಕವಾಗುವ ವಿವಿಧ ಶಾರೀರಿಕ ಭಂಗಿಗಳು]
ಈ.	ಪ್ರಾಣಯಾಮ	[ಉಸಿರನ್ನು ನಿಯಂತ್ರಿಸಿ ಧ್ಯಾನಮಾಡುವಿಕೆ]
ಉ.	ಪ್ರತ್ಯಾಹಾರ	[ಇಂದ್ರಿಯನಿಗ್ರಹ ಮಾಡಿ, ಅವು ಮನಸ್ಸಿನ ಜೊತೆ ಧ್ಯಾನದಲ್ಲಿ ಸಹಕರಿಸುವಂತೆ ಮಾಡುವುದು]
ಊ.	ಧಾರಣ	[ಶ್ರೀಮನ್ ನಾರಾಯಣನ ಮೇಲೆ ಮನಸ್ಸನ್ನು ಕೇಂದ್ರೀಕರಿಸುವುದು]
ಋ.	ಧ್ಯಾನ ಮತ್ತು ಸಮಾಧಿ	[ನಾರಾಯಣನ ಮೇಲೆ ಸಂಪೂರ್ಣವಾಗಿ ಮನಸ್ಸಿನ ಕೇಂದ್ರೀಕರಣವನ್ನು, ಸಾಮ್ಯಾವಸ್ಥೆಯನ್ನು ಹೊಂದುವುದು]

ಭಗವಂತನ ಮೇಲೆ ಭಕ್ತಿಯು ತೀವ್ರವಾಗಿ ಪರಿಪೂರ್ಣಾವಸ್ಥೆಯನ್ನು ಮುಟ್ಟಿದಾಗ ಅದು ಪ್ರಪತ್ತಿ [ಶರಣಾಗತಿ] ಎನಿಸುತ್ತದೆ. ಭಕ್ತಿಯ ಅತ್ಯುನ್ನತ ಸ್ಥಿತಿಯೇ ಪ್ರಪತ್ತಿ. ಭಕ್ತನು ನಿಷ್ಕಾಮಭಾವದಿಂದ ತನ್ನ ಸರ್ವವನ್ನೂ ಶ್ರೀಮನ್‌ನಾರಾಯಣನಿಗೆ ಸಮರ್ಪಿಸಿ, ಅವನೇ–'ಗತಿ', ಅವನೇ–'ಪರ', ಅವನ ಅಜ್ಞೆಯಂತೆಯೇ ಲೋಕದ ಸಮಸ್ತವೂ ನಡೆಯುವುದೆಂದು ಪರಿಭಾವಿಸಿ ಶ್ರೀಮನ್‌ನಾರಾಯಣನಲ್ಲಿ ಅನನ್ಯ ಭಕ್ತಿಯನ್ನು ಹೊಂದುವುದೇ 'ಪ್ರಪತ್ತಿ'. 'ಪ್ರಪತ್ತಿಯೇ' ಜೀವಾತ್ಮನ ಪ್ರಾರಬ್ಧ ಕರ್ಮವನ್ನು ತೊಳೆದು ಮುಕ್ತಿಯನ್ನು ದೊರಕಿಸಿಕೊಡುತ್ತದೆ. ವಿಶಿಷ್ಟಾದ್ವೈತ ವೇದಾಂತದ ಪ್ರಕಾರ ಅಂತಿಮವಾಗಿ ಶ್ರೀಮನ್‌ನಾರಾಯಣನ ಅನುಗ್ರಹವಿಲ್ಲದೆ 'ಮೋಕ್ಷ' ಪಡೆಯಲು ಸಾಧ್ಯವಿಲ್ಲ. ಸ್ವ-ಪ್ರಯತ್ನವು ಪಕ್ವಗೊಂಡು, ಪರಿಪೂರ್ಣವೆನಿಸಿದಾಗ, ಭಗವಂತನ ಅನುಗ್ರಹವೂ ಲಭ್ಯವಾಗುವುದು. ಆಗಲೇ ಜೀವಾತ್ಮನು ಮುಕ್ತಿಯನ್ನು ಹೊಂದುವನು.

ಮಣ್ಣೆಯ 'ಮಿಥುನ ಶಿಲ್ಪಗಳು'

ಆರ್. ಜಗದೀಶ್

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿಗೆ ಸೇರಿದ ಮಣ್ಣೆಯು (ಮಾನ್ಯಪುರ) ಹಿಂದೊಮ್ಮೆ ತಲಕಾಡಿನ ಗಂಗರ ರಾಜಧಾನಿಯಾಗಿತ್ತು. ಆ ಕಾಲಘಟ್ಟದಲ್ಲಿ (9–10 ನೆಯ ಶತಮಾನ) ನಿರ್ಮಿತವಾದ ಹಲವಾರು ಸುಂದರವಾದ ದೇವಾಲಯಗಳನ್ನು ಮಣ್ಣೆಯಲ್ಲಿ ಈಗಲೂ ಕಾಣಬಹುದು.

ಅವುಗಳಲ್ಲಿ ಕಪಿಲೇಶ್ವರ, ಅಕ್ಕತಂಗಿಯರ ಗುಡಿ, ಸೂಳೆ ಬಸದಿ, ಮಣ್ಣಮ್ಮನ ಗುಡಿ, ಶಿವಾಲಯ, ಇವು ಮುಖ್ಯವಾದ ದೇವಾಲಯಗಳಾಗಿವೆ. ಕಪಿಲೇಶ್ವರ ದೇವಾಲಯವು ಉಳಿದೆಲ್ಲವುಗಳಿಗಿಂತಲೂ ಭಿನ್ನವಾಗಿದ್ದು ಹಲವಾರು ದೃಷ್ಟಿಗಳಿಂದ ಪ್ರಾಮುಖ್ಯತೆ ಪೊಂದಿದೆ. ಈ ದೇವಾಲಯದ ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿರುವ ಜಾಲಂದ್ರದಲ್ಲಿನ ಶಿಲ್ಪಗಳ ಬಗ್ಗೆ ಪ್ರಸ್ತುತ ಗಮನ ಹರಿಸೋಣ.

ಎರಡು ಅಡಿ ಅಗಲ ಹಾಗೂ ಮೂರು ಅಡಿ ಎತ್ತರದ ಈ ಆಯತಾಕಾರದ ಜಾಲಂದ್ರವು ಕಪಿಲೇಶ್ವರ ದೇವಾಲಯದ ಸೌಂದರ್ಯವನ್ನು ಹೆಚ್ಚಿಸುವಲ್ಲಿ ತನ್ನ ಕೊಡುಗೆಯನ್ನೂ ಸೇರಿಸಿದೆ ಎಂದರೆ ತಪ್ಪಾಗಲಾರದು. ಕಣಶಿಲೆಯಲ್ಲಿ (ಗ್ರಾನೈಟ್) ದೇವಾಲಯಗಳನ್ನು ನಿರ್ಮಿಸುವಲ್ಲಿ ಸಿದ್ಧಹಸ್ತರಾದ ಗಂಗರು ತಮ್ಮೆಲ್ಲಾ ನಿಪುಣತೆಯನ್ನು ಆ ಕಗ್ಗಲ್ಲಿನಲ್ಲಿಯೇ ಕಲಾಕುಸುಮವನ್ನು ಅರಳಿಸುವಲ್ಲಿ ಯಶಸ್ವಿಯಾಗಿರುವುದನ್ನು ಈ ಜಾಲಂದ್ರವನ್ನು ಪರಿಶೀಲಿಸಿದರೆ ತಿಳಿಯಬಹುದು.

ಎರಡು ಬಳ್ಳಿಗಳು ಒಂದನ್ನೊಂದು ಹೆಣೆದುಕೊಂಡಿರುವಂತೆ (ಈ ರೀತಿಯ ರಚನೆಗೆ ವಲ್ಲೀಬಂಧವೆಂದು ಹೆಸರು) ಹಾಗೂ ಆ ಬಳ್ಳಿಗಳ ಮಧ್ಯೆ ಪ್ರತಿಸಾಲಿನಲ್ಲಿಯೂ ಮೂರು ವೃತ್ತಗಳಿರುವಂತೆ ಎರಡು ಸಾಲುಗಳಲ್ಲಿ ಒಟ್ಟು ಆರು ವೃತ್ತಗಳನ್ನು. ಅವುಗಳ ಮಧ್ಯದಲ್ಲಿ ಮಿಥುನ ಶಿಲ್ಪಗಳನ್ನು ಶಿಲ್ಪಿಯು ಕಲಾತ್ಮಕವಾಗಿ ಕಂಡರಿಸಿದ್ದಾನೆ. ಬೃಹದಾಕಾರದ ಗೊಮ್ಮಟನ ಮೂರ್ತಿಯನ್ನು ಕೆತ್ತುವಲ್ಲಿ ತೋರಿರುವ ಚಾಕಚಕ್ಯತೆಯನ್ನೇ ಈ ಸಣ್ಣ ಚಿಕಣಿ ಶಿಲ್ಪಗಳನ್ನು ಬಿಡಿಸುವಲ್ಲಿಯೂ ಶಿಲ್ಪಿಗಳು ತೋರಿದ್ದಾರೆಂದು ಹೇಳಬಹುದು.

ಮೇಲ್ಭಾಗದ ಎರಡು ವೃತ್ತಗಳಲ್ಲಿ ನಗ್ನ ಸ್ತ್ರೀಯರು ತಮ್ಮ ಸಹಚರರೊಡನೆ ನಿಂತಿರುವಂತೆ ಹಾಗೂ ಕೆಳಭಾಗದ ನಾಲ್ಕು ವೃತ್ತಗಳಲ್ಲಿ ಮೂರರಲ್ಲಿ ತಮ್ಮ ತೊಡೆಯ ಮೇಲೆ ಸ್ತ್ರೀಯನ್ನು ಕುಳ್ಳಿರಿಸಿಕೊಂಡ ಪುರುಷರ ಶಿಲ್ಪಗಳಿವೆ. ಮತ್ತೊಂದು ವೃತ್ತದಲ್ಲಿ ಅಪ್ಪುಗೆಯಲ್ಲಿರುವ ದಂಪತಿಗಳ ಶಿಲ್ಪಗಳಿವೆ. ಈ ರೀತಿ ಅಶ್ಲೀಲತೆಯ ಸೋಂಕಿಲ್ಲದಂತೆ ಸರಳ ಸುಂದರವಾಗಿ ಹಾಗೂ ಕಲಾತ್ಮಕವಾಗಿ ಶಿಲ್ಪಿಯು ಕೆತ್ತಿದ್ದಾನೆ.

ಪುರುಷಾರ್ಥಗಳಲ್ಲೊಂದಾದ, ಹಾಗೂ ಜೀವನದ ಅಗತ್ಯಗಳಲ್ಲಿ ಒಂದೆನಿಸಿದ ಕಾಮವನ್ನು ತಿರಸ್ಕರಿಸುವಂತಿಲ್ಲ ಎಂದು ಸಾರುವಂತೆ ದೇವಾಲಯಗಳಂತಹ ಪುಣ್ಯ ಸ್ಥಳಗಳಲ್ಲಿಯೂ ಶೃಂಗಾರ ಶಿಲ್ಪಗಳನ್ನು, ಮಿಥುನ ಶಿಲ್ಪಗಳನ್ನು ನಿರ್ಮಿಸುತ್ತಿದ್ದುದನ್ನು ನಾವು ಅನೇಕ ಪ್ರಾಚೀನ ದೇವಾಲಯಗಳಲ್ಲಿ ಕಾಣಬಹುದು. ಈ ರೀತಿಯ ಮಿಥುನ ಶಿಲ್ಪಗಳನ್ನು ನಾವು ಬಾಗಳಿಯ ಕಲ್ಲೇಶ್ವರ, ಬಳ್ಳಿಗಾವೆಯ ತ್ರಿಪುರಾಂತಕ ದೇವಾಲಯ, ಹಾನಗಲ್ಲಿನ ಈಶ್ವರ, ಹುಂಚದ ಕಮಠೇಶ್ವರ, ಕುಕನೂರಿನ ನವಲಿಂಗೇಶ್ವರ, ಬಾದಾಮಿ, ಐಹೊಳೆ, ಪಟ್ಟದ ಕಲ್ಲು ಮುಂತಾದ ಸ್ಥಳಗಳಲ್ಲಿನ ಪ್ರಾಚೀನ ದೇವಾಲಯಗಳಲ್ಲಿ ಕಾಣಬಹುದಾಗಿದೆ.



ಮಣ್ಣೆಯ ಮಿಥುನ ಶಿಲ್ಪಗಳು

ನುಡಿನಮನ

ಎಂ. ಬೈರೇಗೌಡ - ಕೆ. ಪಿ. ದೊಡ್ಡಿ

ರಸ ಋಷಿ, ಜಗದ ಕವಿ, ಈ ಯುಗದ ಕವಿ
ಎನ್ನಾರಾಧ್ಯ ದೈವ – ಇದೋ ನಿನ್ನಡಿದಾವರೆಗೆನ್ನ
ತೊದಲು ನುಡಿನಮನ ॥
ಕವಿಶೈಲ, ಕಾನುಬೈಲಿನ ಬೈರಾಗಿಯೇ
ನಿನ್ನ ದೇಹ ಅಂತ್ಯ ಕಂಡ ಆ ದುರ್ದಿನ
ಎನ್ನ ಮನದಂಗಳದ ಬೆಳಕ ಬತ್ತಿಸಿ,
ಮಂಕು ಕವಿದು. ಮಬ್ಬು ಆವರಿಸಿ
ಕೋಲಾಹಲವಗೈದಿತ್ತು ।

ಕನ್ನಡ ನುಡಿಜಾಣ, ನೀನೊಮ್ಮೆ
'ಕನಸಿನಲಿ ಸತ್ತು,' ಕನ್ನಡ ಫಲಕ
ನರಕವಾದರೂ, ಅಕ್ಕರ ಮಾಧುರ್ಯದ
ಸೆಳೆತದಿಂ, ಅಲ್ಲಿಗೇ ಪೋಗುವೆನೆಂಬ
ಆ ನಿನ್ನ ನುಡಿಯ ತುಡಿತದೊಡನೆ,
ನಿದ್ರೆಗೈವ ಸಮಯದಿ ಎನಗೂ
ಒಂದು ಸ್ವಪ್ನವಾಯ್ತು 'ನಾ ಸತ್ತೆ' ।

ಯಮಭಟರೆನ್ನ ಸೆಳೆದೊಯ್ದು,
ಮಹಿಷವಾಹನನ ಸಭಾಸ್ಥಾನದೊಳ್
ವಿಚಾರಣೆಗೈವಾಗ–
ಆವುದಕೂ ಸರಿಯುತ್ತರವೀಯದೆ
ಪುಂಖಾನುಪುಂಖ ಗಾಢಾಲೋಚನೆಯ
ಅಂಧಕಾರದಲಿ ಮುಳುಗಿರುವಾಗ, ಯಮನುಸುರಿದ-
ಏನಾಯ್ತು ?
ನಿನ್ನಂತರಂಗದ ಅಳಲ ತೋಡಿಕೋ
ಪರಿಹಾರ ಸೂಚಿಸುವೆ ।

ಏ ಕಾಲಪುರುಷ,
ಎನಗಿರುವುದೊಂದೆ ಚಿಂತೆ,
ಪುಣ್ಯಾತ್ಮನೊಬ್ಬ ಭೂಲೋಕವ ಬಿಟ್ಟು
ನಿನ್ನಾಸ್ಥಾನಕೆ ಬರುತಿಹನು,
ಸ್ವರ್ಗ ಸೇರಬೇಕಾದವನವನು,
ಅನ್ಯ ಭಾಷೆಯೊಳೊರೆದ ಫಲಕವ ಕಂಡು
ಆನೊಲ್ಲೆ, ಆನೊಲ್ಲೆ, ಎನ್ನ ಭಾಷೆಯೊಳಿರುವ
'ನರಕ'ವೇ ಎನಗೆ ಸಗ್ಗವೆಂದು
ನಿನ್ನ ಕಿಂಕರರ ದಿಕ್ಕರಿಸಿ ಪೋಗುವನು ॥

ಪುಣ್ಯಾತ್ಮರನೊಯ್ವ "ಸ್ವರ್ಗ" ಫಲಕವ
ಅವ ಬರುವ ಮುನ್ನ ಬದಲಿಸು,
ಇದೇ ಎನ್ನ ಆಲೋಚನಾಗುಚ್ಛ
ಎಂದರುಹಿದಾಗ—

ಅಂತೇಗೈವೆನೆಂದು, ಕಿಂಕರರಿಗಾಜ್ಞೆ ಇತ್ತ।
ಧನ್ಯತೆಯಲಿ ಬೀಗುವಾಗ
ಕಣ್ ಬಿಟ್ಟೆ ನಾನು ॥

ಗಾಂಧೀಜೀಯವರ ಧರ್ಮದರ್ಶಿತ್ವ ಸಿದ್ಧಾಂತ

ಡಾ|| ಎಂ ಪಿ. ಭುವನೇಶ್ವರ ಪ್ರಸಾದ್

ಗಾಂಧೀಜೀಯವರ ದೃಷ್ಟಿಕೋನ ಹಾಗೂ ಜೀವನ ಬಹುಮುಖವಾಗಿದ್ದು ಅವರು ಸರ್ವತೋಮುಖವಾದ, ಸಮನ್ವಯ:ದ, ಸಹಬಾಳ್ವೆಯ, ಸರ್ವಾಂಗೀಣ, ಸರ್ವಾಭ್ಯುದಯದ ಚೈತನ್ಯ ಚಿಂತನ ಚಿಲುಮೆಯ ಮೂರ್ತಿಯಾಗಿದ್ದು, ಕೆಲವರ ದೃಷ್ಟಿಯಲ್ಲಿ ರಾಜಕಾರಣಿಯಾಗಿ, ಅರ್ಥಶಾಸ್ತ್ರಜ್ಞನಾಗಿ, ತತ್ವವೇತ್ತನಾಗಿ, ಸಮಾಜ ಸುಧಾರಕನಾಗಿ, ಸಮಾಜವಾದಿಯಾಗಿ, ಸತ್ಯಶೋಧಕನಾಗಿ, ಶಿಕ್ಷಣತಜ್ಞನಾಗಿ, ಶರಣ ನಾಗಿ, ಸಂತನಾಗಿ, ಸ್ವರಾಜ್ಯಕಲ್ಪನೆಯ ಮೂಲಪುರುಷನಾಗಿ, ಧರ್ಮಧರ್ಶಿಯಾಗಿ, ಅಂಹಿಸಾ ಮೂರ್ತಿಯಾಗಿ, ಗ್ರಾಮಜೀವನದ ಪುನರುದ್ಧಾರಕನಾಗಿ, ಸ್ವತಂತ್ರ ಭಾರತದ ಶಿಲ್ಪಿಯಾಗಿ, ಹರಿಜನೋದ್ಧಾರಕನಾಗಿ, ಭಾರತದ ಪಿತಾಮಹ ಎನ್ನಿಸಿ ಕೊಂಡು, ತುಂಡುಬಟ್ಟೆಯ ಫಕೀರನಾಗಿ, ಮಹಾತ್ಮನೆನಿಸಿಕೊಂಡು, ಆದರ್ಶವಾದಿ ಯಾಗಿ, ಕರ್ಮಚಾರಿಯಾಗಿ, ಕರ್ತವ್ಯದ ಆರಾಧಕನಾಗಿ, ಜಗತ್ತಿನ ಇತಿಹಾಸದ ಪುಟಗಳಲ್ಲಿ ಅಳಿಯದೆ ಉಳಿದಿರುವ ಧೀಮಂತ ಶಕ್ತಿಯೆನಿಸಿದ್ದಾರೆಂದು ಹೇಳಿದರೆ ಅದು ತಪ್ಪಾಗಲಾರದು.

ಗಾಂಧೀಜೀಯವರು ಚಿಂತಿಸದ ವಿಷಯವಿಲ್ಲ ಅಂದರೆ ಮಾನವ ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಕೈಯಾಡಿಸಿರುವುದನ್ನು ಕಾಣಬಹುದಾಗಿದೆ. ಪ್ರಮುಖ ವಾದವುಗಳಲ್ಲಿ ಧರ್ಮದರ್ಶಿತ್ವವು ಒಂದಾಗಿದ್ದು ಅದಕ್ಕೆ ಹೆಚ್ಚಿನ ಮಾನ್ಯತೆ ನೀಡಿದ್ದಾರೆ. ಇವರು ಭಗವದ್ಗೀತೆ, ಉಪನಿಷತ್ತು, ವೇದಗಳು, ಪುರಾಣಗಳು, ಸೂಕ್ತಿಗಳು, ಭಾರತದ ಸಾಂಸ್ಕೃತಿಕ ಭವ್ಯಪರಂಪರೆಯ ಹಿನ್ನಲೆ, ಸ್ನೆಲ್ (Snell) ಅವರ ನ್ಯಾಯ ನೀತಿ ಪದ್ಧತಿ, [ಈ ಗ್ರಂಥದಲ್ಲಿ ಇವರು ಮಾನವನು ಬದುಕಿದರೆ ನ್ಯಾಯ ನೀತಿಯನ್ನೆ ಆಧಾರವಾಗಿಟ್ಟುಕೊಂಡು ಬದುಕಬೇಕೆಂದು, ಇದನ್ನು ಅನುಸರಿಸದಿದ್ದರೆ ಅವರು ಮಾನವ ಸಮಾಜಕ್ಕೆ ವಿರೋಧಿಗಳೆಂದು ಸೂಚಿಸಿದ್ದಾರೆ] ಟಾಲ್‌ಸ್ಟಾಯ್ ಮತ್ತು ಜಾನ್ ರಸ್ಕಿನ್ನರ ಪ್ರಭಾವಕ್ಕೆ ಒಳಗಾಗಿ ಹಾಗು ಇಡೀ ಸಮಾಜದ, ಜನತೆಯ ಸ್ಥಿತಿ-ಗತಿಗಳನ್ನು ಗಮನಿಸಿ ಈ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ.

ಗಾಂಧೀಜೀಯವರ ಸಮಾಜ ಸಿದ್ಧಾಂತದ ಪರಿಕಲ್ಪನೆಯ ಅಡಿಗಲ್ಲೇ 'ಧರ್ಮ ದರ್ಶಿತ್ವ'. ಅಂದರೆ ಇದು 'ಅಪರಿಗ್ರಹ' 'ಅನ್ನದಕಾಯಕ' ಹಾಗೂ 'ಆರ್ಥಿಕ ಸಮಾನತೆ'ಯ ತತ್ವಗಳನ್ನು ಒಳಗೊಂಡಿದೆ. ಯಾವುದೇ ಒಂದು ಸಮಾಜ ಸುವ್ಯವಸ್ಥಿತ

ವಾಗಿ, ಸುಂದರವಾಗಿ, ಸುಗಮವಾಗಿ ಮುಂದುವರಿಯುಬೇಕಾದರೆ, ಅದರ ಜೊತೆಗೆ ವ್ಯಕ್ತಿಯು ಅಭಿವೃದ್ಧಿಯನ್ನು ಹಾಗು ಸಾಮರಸ್ಯ, ಭಾವನೆಯನ್ನು ಮೂಡಿಸಿ, ಸಂಪೂರ್ಣ ಸದಾಚಾರ ಬೆಳವಣಿಗೆಗೆ, ಇರುವ ವ್ಯಕ್ತಿ ಇಲ್ಲದಿರುವವನಿಗೆ (ಹೊಂದಿರುವವರು ಹೊಂದಿಲ್ಲದಿರುವವರಿಗೆ) ನೀಡುವುದು, ನಾನೊಬ್ಬನೇ ಬದುಕಬೇಕೆಂಬ ಆಸೆಯನ್ನು ಬಿಟ್ಟು ನಾನು ಬದುಕಿ, ಮತ್ತಿತರರೂ ಬದುಕಲಿ ಎಂಬ ಜಪವೇ ಧರ್ಮಧರ್ಶಿತ್ವ'.

ಮಾನವನ ಅಂತ್ಯೋದಯ ಮತ್ತು ಸರ್ವೋದಯ ಅದರಲ್ಲಿಯೂ ಇಂದಿನ ಆರ್ಥಿಕ ವ್ಯವಸ್ಥೆಯಲ್ಲಿಯ ಅಭಿವೃದ್ಧಿ ಪೂರ್ಣಉದ್ಯೋಗಾವಕಾಶ, ಆರ್ಥಿಕ, ಸಾಮಾಜಿಕ ಸ್ಥಿರತೆ, ಸಮಾನತೆ ಸಾಮಾಜಿಕ ನ್ಯಾಯ ಹೀಗೆ ಸಮಾಜದ ಹಿತಕ್ಕೆ ಅನುಗುಣವಾಗಿ ಧ್ಯೇಯ ದೋರಣೆಗಳನ್ನು ಹೊಂದಿದ್ದರೆ ಆ ಸಮಾಜ ಮೇಲೆ ಭಾವಿಸಿರುವ ಕಲ್ಪನೆಗಳು ಸತ್ಯವಾಗಬಹುದೆಂದು ಹಂಬಲಿಸಬಹುದಾಗಿದೆ.

ಧರ್ಮಧರ್ಶಿತ್ವ ಅಥವಾ ವಿಶ್ವಸ್ಥ ಸಿದ್ಧಾಂತದ ಮೂರು ತತ್ವಗಳು ಅಥವಾ ಮುಖಗಳೆಂದರೆ.

1 ಅಪರಿಗ್ರಹ

2 ಅನ್ನದ ಕಾಯಕ

3 ಆರ್ಥಿಕ ಸಮಾನತೆ

ಅಪರಿಗ್ರಹ

ರಾಜ್ಯದ, ಸಮಾಜದ, ವ್ಯಕ್ತಿಯ ಸದುದ್ದೇಶವೆಂದರೆ ಸಂತೃಪ್ತ ಜೀವನ. ಇದು ಹೇಗೆ ಸಾಧ್ಯ ಎಂಬ ಪ್ರಶ್ನೆ ನಮ್ಮನ್ನು (ಮಾನವನನ್ನು) ಅನೇಕ ಶತಮಾನಗಳಿಂದ ಕಾಡುತ್ತಾ ಬಂದಿದೆ. ಮಾನವನು ಅತಿ ಆಸೆಯುಳ್ಳವನು, ಅಸಂತೃಪ್ತನು ಇದಕ್ಕೆ ಕಾರಣ ಇವನ ಬೇಡಿಕೆಗಳು ಮಿತಿ ಮೀರಿದಾಗ ಇವುಗಳ ಪೂರೈಕೆಯಾಗದೆ ಕಷ್ಟದಲ್ಲಿ ಸಿಲುಕಿಕೊಳ್ಳುತ್ತಾನೆ. ಆದ್ದರಿಂದ ಅದು ಕೂಡದು. ಅಂದರೆ ಮಾನವನು ತನಗೆಷ್ಟು ದಿನ ನಿತ್ಯಕ್ಕೆ ಅವಶ್ಯಕತೆ ಉಂಟೋ ಅಷ್ಟನ್ನು ಮಾತ್ರ ಸಂಪಾದಿಸಿಕೊಳ್ಳಬೇಕೆ ವಿನಃ ಅನಾವಶ್ಯಕವಾಗಿ ಹಣ, ಆಸ್ತಿ, ಧ್ಯಾನವನ್ನು ಸಂಗ್ರಹಿಸಕೂಡದು. ಒಂದು ವೇಳೆ ಈ ರೀತಿ ಮಾಡಿದರೆ ಇನ್ನೊಬ್ಬನ ಅನ್ನವನ್ನು ಕಿತ್ತುಕೊಂಡ ಹಾಗೆ ಆಗುತ್ತದೆಯಾದ್ದರಿಂದ ಈ ವಿಚಾರದಲ್ಲಿ ಅತಿ ಆಸೆ ಕೂಡದು. ಹೀಗೆ ಮಾನವನು ತನಗೆಷ್ಟು ಅವಶ್ಯಕವೋ ಅಷ್ಟನ್ನು ಮಾತ್ರ ಸಂಪಾದಿಸಬೇಕು. ಇದಕ್ಕಿಂತ ಹೆಚ್ಚಿಗೆಯಾದರೆ ಇದನ್ನು ಅಪರಿಗ್ರಹ ಎಂದು ಕರೆಯಲಾಗುತ್ತದೆ. ಇಂದಿನ ದಿನಗಳಲ್ಲಿ ವ್ಯಕ್ತಿಯೊಬ್ಬನು ಅತಿಯಾಗಿ ಸಂಗ್ರಹಿಸಿ, ಸಂಪಾದಿಸಿ ಅದರಿಂದ ಪೈಪೋಟಿಯಲ್ಲಿ

ತಲ್ಲೀನನಾಗಿ ಇದರಿಂದ ಯಾರಿಗೆ ಅಥವಾ ಸಮಾಜಕ್ಕೆ ತೊಂದರೆಯಾದರೂ ಇವನು ಲೆಕ್ಕಿಸುತ್ತಿಲ್ಲ. ಆದರೆ ವಿಚಾರ ಮಾತ್ರ ಸತ್ಯ. ಅದೆಂದರೆ ಮಾನವನ ಸಂತೃಪ್ತ, ಸುಖೀ ಭಾವ, ಶಾಂತಿಯುತ, ನೆಮ್ಮದಿಯುತ, ಜೀವನ ಪಥಾಯವಾಗುತ್ತಿದೆ. ಇದನ್ನು ಪ್ರತಿಯೊಬ್ಬರು ಆಚರಿಸಲು ಯತ್ನಿಸಿದರೆ 'ಆದರಿಂದ ಸರ್ವೇಜನ ಸುಖಿನೋಭವಂತು' ಎಂಬ ವಾಣಿಗೆ ಅರ್ಥಬರುತ್ತದೆ.

ಇದರ ಬಗೆಗೆ ಥೋರೋ ಎಂಬ ಮಹಾಶಯನು ಈ ರೀತಿ ಹೇಳಿದ್ದಾನೆ. "ಹೆಚ್ಚಿಗೆ ಸಂಪಾದಿಸಿ ನೀನೊಬ್ಬನೆ ಅದನ್ನು ಉಪಯೋಗಿಸಿದರೆ ಅದು ಕಳ್ಳತನ ಎಂದಿದ್ದಾನೆ"।

ಯಂಗ್ ಇಂಡಿಯಾದಲ್ಲಿ ತಿಳಿಸಿರುವಂತೆ.

ಅಪರಿಗ್ರಹದ ಆದರ್ಶದ ಪೂರ್ಣ ಸಾಧನೆಯಾದಾಗ ಮನುಷ್ಯನೂ ಹಕ್ಕಿಗಳಂತೆ ದಿಗಂಬರನಾಗಬೇಕಾಗುತ್ತದೆ. ನಿಲ್ಲಲು ನೆಲೆ, ಉಡಲು ಬಟ್ಟೆ, ಉಣಲು ನಾಳೆಗೆ ಹಿಟ್ಟು ಇಡಬಾರದು. ಅಂಥವನಿಗೆ ನಿತ್ಯಯಾತ್ರೆಗೆ ಬೇಕಾದ ಅನ್ನವನ್ನು ಭಗವಂತ ಒದಗಿಸುತ್ತಾನೆ. ಆ ಚಿಂತೆ, ಅವನದು. ಈ ಅವಧೂತ ಅವಸ್ಥೆಯನ್ನು ಮುಟ್ಟುವವರು ಲೋಕದಲ್ಲಿ ಬಹಳ ವಿರಳ. ಆದರೆ ಸಾಧಾರಣ ತರದ ಸಾಧಕರಾದ ನಾವು ಅಸಾಧ್ಯ ವೆಂದು ತೋರುವುದಕ್ಕೆ ಬೇದರಬೇಕಾಗಿಲ್ಲ. ಈ ಆದರ್ಶವನ್ನು ಸದಾ ಲಕ್ಷ್ಯದಲ್ಲಿಟ್ಟು ದಿನ ದಿನವೂ ನಮ್ಮ ಪರಿಗ್ರಹ ವೃತ್ತಿಯನ್ನು ಪರೀಕ್ಷಿಸುತ್ತ ಅವನ್ನು ತಗ್ಗಿಸಲು ಪ್ರಯತ್ನಿಸಬೇಕು, ಅಗತ್ಯಗಳನ್ನು ಹೆಚ್ಚಿಸಿಕೊಳ್ಳುವುದಿಲ್ಲ. ನಿಜವಾದ ಸಭ್ಯತೆಯ ಲಕ್ಷಣ ವಿಚಾರ ಪೂರ್ವಕ ಇಚ್ಛಾ ಪೂರ್ವಕ. ಅವನ್ನು ತಗ್ಗಿಸಿಕೊಳ್ಳುವುದು ಇದರಿಂದಲೇ ನಿಜವಾದ ಸುಖ, ತೃಪ್ತಿ ಹೆಚ್ಚುತ್ತದೆ. ನಮ್ಮ ಸೇವೆಯ ಸಾಮರ್ಥ್ಯ ಬೆಳೆಯುತ್ತದೆ".[2]

2. ಅನ್ನದ ಕಾಯಕ

ಎಂಬುದು ಇನ್ನೊಂದು ಬಾಪೂರವರ ಪರಮ ಮಂತ್ರ. ಟಾಲ್‌ಸ್ಟಾಯ್, ಅವರ 'ಅನ್ನದ ಕಾಯಕ' ಜಾನ್ ರಸ್ಕಿನ್‌ರ 'ಕಟ್ಟಕಡೆಯವನಿಗೂ' ಎಂಬ ಗ್ರಂಥಗಳಿಂದ ಇವರು ಹೆಚ್ಚು ಪ್ರಭಾವಿತರಾಗಿದ್ದಾರೆ. ಯಾವುದೇ ಒಬ್ಬ ವ್ಯಕ್ತಿ ತನ್ನ ಜೀವನವನ್ನು ಸುಗಮವಾಗಿ ಸಾಗಿಸಬೇಕಾದರೆ ಅವನೇ ಸ್ವಯಂ ದುಡಿದು ಅದರಿಂದ ಗಳಿಸಿದ್ದರಿಂದ ಜೀವಿಸಿದಾಗ ಮಾತ್ರ ಜೀವನ ಸಾರ್ಥಕ. ಇದನ್ನೇ ಅನ್ನದ ಕಾಯಕ ಎಂದು ಕರೆದಿದ್ದಾರೆ. ಇದನ್ನು ಭಗವದ್ಗೀತೆಯಲ್ಲಿ ಕರ್ಮಯೋಗದ ಮೂಲಕ ಶ್ರೀಕೃಷ್ಣ ಜಗತ್ತಿಗೆ ಸಾರಿದ್ದಾನೆ. "ನಿನ್ನ ಅನ್ನವನ್ನು ನೀನೇ ಹುಟ್ಟಿಸಿಕೋ ಇಲ್ಲ

1. ಥೋರೋ—No hermit, Max lerner-Page 122
2. ಯಂಗ್ ಇಂಡಿಯಾ 2-3-1922

ವಾದರೆ ನಿನ್ನ ಜೀವನ ವ್ಯರ್ಥ"[1]. ಕ್ರಾಂತಿಯೋಗಿ ಶಿವಶರಣ ಬಸವಣ್ಣನವರು ಸಹ ಇದನ್ನೆ ಒತ್ತಿ ಹೇಳಿದ್ದಾರೆ. "ನಿನ್ನ ಕೈಯಿಂದಲೇ ಸಂಪಾದನೆ ಮಾಡಿ ದಿನನಿತ್ಯದ ಅವಶ್ಯಕತೆಯನ್ನು ಪೂರೈಸಿಕೊ"[2]. ಇನ್ನೊಬ್ಬ ರಷ್ಯನ್ ಲೇಖಕ ಟಿ. ಎಂ. ಬೊಂಡರೆಪ್ ಹೀಗೆ ಹೇಳಿದ್ದಾನೆ. "ತನ್ನ ಅನ್ನವನ್ನು ತನ್ನ ಕೈಗಳಿಂದಲೇ ದುಡಿದು ಗಳಿಸಬೇಕು".[3] ಯಜ್ಞ ಮಾಡದೆ ತಿನ್ನುವವನು ಕಳ್ಳ-ಅನ್ನವನ್ನು ತಿನ್ನುತ್ತಾನೆ. ಯಜ್ಞ ಎಂಬುದಕ್ಕೆ ಇಲ್ಲಿ ಶರೀರ ಶ್ರಮ ಅಥವಾ ಅನ್ನದ ಕಾಯಕ ಅಥವಾ ಕಾರ್ಯ ಎಂದು ಅರ್ಥೈಸಬಹುದು. 'ನಿನ್ನ ಬೆವರು ಸುರಿಸಿ ಹಿಟ್ಟು ತಿನ್ನು' ಎನ್ನುವ ಮಾತು ಬೈಬಲ್‌ನಲ್ಲಿಯೂ ಸಹ ಇರುವುದನ್ನು ಕಾಣಬಹುದು.

ಮಾನವನ ಮೂಲಭೂತ ಅವಶ್ಯಕತೆಗಳ ಎಲ್ಲಾ ಕಾರ್ಯವು ಈ ಕಾಯಕದಲ್ಲಿದೆ. ಅದು ಯಾವುದಾದರು ಆಗಬಹುದು. ನೂಲುವುದು, ನೇಯುವುದು, ಭಂಗಿತನ, ಬಡಗಿತನ, ಒಕ್ಕಲುತನ, ಕಮ್ಮಾರಿಕೆ ಮುಂತಾದುವು, ಶ್ರಮಪಟ್ಟರೆ ಆರೋಗ್ಯಕ್ಕೆ ಒಳಿತು ಸಮಾಜಕ್ಕೆ ಮಾತ್ರವಲ್ಲದೆ ವೈಯಕ್ತಿಕ ಅಭಿವೃದ್ಧಿಯೂ ಸಹ ಸಾಧ್ಯ. ಇದರಿಂದ ನಿರುದ್ಯೋಗ, ಬಡತನ, ಹಾಗು ಆಹಾರ–ಬಿಡುವು ದೊರೆತು ಬಡವ-ಬಲ್ಲಿದ, ಮೇಲು-ಕೀಳು, ಎಂಬ ಭೇದ-ಭಾವನೆಗಳು ದೂರವಾಗಬಹುದು. ಸಮತಾವಾದ, ಸಮಾಜವಾದ ಮುಖ್ಯ ತತ್ವಗಳಲ್ಲಿ ಇದು ಒಂದು. ಸಂಪಾದನೆಯನ್ನು ಮಾಡಿ ಉಣಲಾರದ ವ್ಯಕ್ತಿಯು ಜೀವ ಈ ಜಗತ್ತಿನಲ್ಲಿ ಇರಬೇಕಾದ್ದಿಲ್ಲ ಎಂಬುದನ್ನು ಮಾರ್ಕ್ಸ್ ಒತ್ತಿ ಹೇಳಿದ್ದಾನೆ. ಈ ಮಾತನ್ನು ಗಾಂಧೀಜಿಯವರ ಮಾತಿನಲ್ಲೇ ನೋಡುವುದಾದರೆ ಅನ್ನದ ಕಾಯಕದ (ಶರೀರ ಶ್ರಮದ) ನಿರಪವಾದ ನಿಯಮವನ್ನು ಎಲ್ಲರು ಒಪ್ಪಿದರೆ ಉಚ್ಚ-ನೀಚದ, ದುಷ್ಟ ಭೇದ ಮಾಯವಾದೀತು. ಎಲ್ಲಾ ವರ್ಣಗಳವರಿಗೂ ಕಾಯಕ ಸಾಮಾನ್ಯ ನಿಯಮ. ಈ ದಿನಗಳಲ್ಲಂತೂ ದಣಿ-ದುಡಿಮೆಗಾರರ ನಡುವೆ ವಿಶ್ವಾದ್ಯಂತ ಸಂಘರ್ಷ ಇದೆ. ಬಡವರಿಗೆ ಭಾಗ್ಯವಂತರನ್ನು ಕಂಡರೆ ಹೊಟ್ಟೆಯುರಿ. ಎಲ್ಲರೂ ಅನ್ನಕ್ಕಾಗಿ ಕಾಯಕ ಮಾಡಿದರೆ ಮೇಲು-ಕೀಳೆಂಬ ಭೇದ ಕೀಳರಿಮೆ ಅಳಿದೀತು; ಆಗಲೂ ಶ್ರೀಮಂತರಿದ್ದರು, ಆದರೆ ತಮ್ಮ ಸ್ವತ್ತಿಗೆ ವಿಶ್ವಸ್ಥರಂತೆ, ಇದ್ದಾರು, ಮತ್ತು ಅದನ್ನು ಲೋಕ ಹಿತಕ್ಕಾಗಿ ಬಳಸಿಯಾರು.[4]

ಅನ್ನದ ಕಾಯಕದ ತತ್ವಕ್ಕೆ ಬಲತ್ಕಾರದ ನಿಷ್ಠೆಯಿಂದ ಬಡತನ ಬೇನೆ, ಬಳಲಿಕೆ, ಅತೃಪ್ತಿ ಹುಟ್ಟುತ್ತದೆ. ಅದೊಂದು ಗುಲಾಮಗಿರಿ. ಇದಕ್ಕೆ ಇಚ್ಛಾಪೂರ್ವಕ ನಿಷ್ಠೆ

1. ಗೀತಾ ರಹಸ್ಯ–ತಿಲಕರು–ಟಿಲಕ ಬಂಧು, 6ನೇ ಆವೃತ್ತಿ–ಪುಟ 62–93.
2. ಬಸವಣ್ಣನವರ ಷಟ್‌ಸ್ಥಳದ ವಚನಗಳು–ಬಸವನಾಳ–ಪುಟ 93.
3. ಅರ್ಥ ವಿಚಾರ–ಗಾಂಧೀಜೀ–ಗಾಂಧಿ ಸ್ಮಾರಕ ನಿಧಿ–ಪುಟ 57-60.
4. ಅರ್ಥ ವಿಚಾರ–ಗಾಂಧೀಜೀ–ಗಾಂಧೀ ಸ್ಮಾರಕ ನಿಧಿ–ಪುಟ 57-60.

ಯಿಂದ ತೃಪ್ತಿ ಆರೋಗ್ಯ ಲಭಿಸುತ್ತವೆ. ಆರೋಗ್ಯವೇ ನಿಜವಾದ ಭಾಗ್ಯ, ಬೆಳ್ಳಿ ಬಂಗಾರದ ತುಣುಕುಗಳಲ್ಲ".

3. ಆರ್ಥಿಕ ಸಮಾನತೆ

ಎಂದರೆ ಗಾಂಧೀಜೀಯವರ ಮಾತಿನಲ್ಲೆ ನೋಡುವುದಾದರೆ ಆರ್ಥಿಕ ಸಮಾನತೆ ಎಂದರೆ ಅಹಿಂಸಾತ್ಮಕ ಸ್ವಾತಂತ್ರ್ಯದ ಕೀಲಿ ಕೈ ಇದ್ದಂತೆ, ಬಂಡವಾಳ ಮತ್ತು ಶಕ್ತಿ ಶ್ರಮಗಳ ನಡುವಿನ ನಿರಂತರ ಘರ್ಷಣೆಯನ್ನು ಹೋಗಲಾಡಿಸುವುದೇ ಈ ಸಮಾನತೆ ಗಾಗಿ ನಡೆಯುವ ಪ್ರಯತ್ನ. ರಾಷ್ಟ್ರದ ಸಂಪತ್ತನ್ನು ತಮ್ಮಲ್ಲಿ ಶೇಖರಿಸುವ ಕೆಲವೇ ಸಿರಿವಂತರನ್ನು ಕೆಳಗಿಳಿಸಿ ಅರೆ-ಹೊಟ್ಟೆಯ ದಿಗಂಬರರಾದ ಕೋಟ್ಯಾಂತರ ಜನತೆಯನ್ನು ಮೇಲಕ್ಕೆತ್ತುವ ಕಾರ್ಯಕ್ರಮವಿದು.[1]

ಒಂದು ದಿನದ ಪ್ರಾಮಾಣಿಕ ಪರಿಶ್ರಮಕ್ಕೆ ಒಂದೇ ಬಗೆಯ ಪ್ರತಿಫಲ, ಸಂಭಾವನೆ ಭಂಗಿಗಳು, ವೈದ್ಯರು, ಶಿಕ್ಷಕರು ಹಾಗೂ ಮತ್ತಿತರರಿಗೂ ದೊರೆಯಬೇಕು. ಸಮಾನ ವಿತರಣೆ, ಅಹಿಂಸಾತ್ಮಕ ಆರ್ಥಿಕ ವ್ಯವಸ್ಥೆ ಮನುಷ್ಯನಲ್ಲಿರುವ ಅಸಮಾನತೆ ಯನ್ನು ಹೋಗಲಾಡಿಸಿ ಸುಖ, ಶಾಂತಿ, ನೆಮ್ಮದಿ, ಸಂತೃಪ್ತಿ, ಸಮಾಧಾನವನ್ನು ನೀಡುವ ಜೀವನದ ಮೌಲ್ಯಗಳು ಆರ್ಥಿಕ ಸಮಾನತೆಗೆ ಅವಕಾಶ ಮಾಡಿಕೊಡುತ್ತವೆ. ಸಮಾನ ವಿತರಣೆ ನನ್ನ ಆದರ್ಶ. ಆದರೆ ನಾನು ತಿಳಿದ ಮಟ್ಟಿಗೆ ಅದು ಕಷ್ಟ ಸಾಧ್ಯ. ಆದರಿಂದ ಸಮಧರ್ಶಿಯಾದ, ನ್ಯಾಯಸಮ್ಮತವಾದ ವಿತರಣೆಗೆ ನಾನು ಶ್ರಮಿಸುತ್ತೇನೆ.[2]

ಆರ್ಥಿಕ ಸಮಾನತೆಯೆಂದರೆ ಪ್ರತಿಯೊಬ್ಬರ ಹತ್ತಿರವೂ ಇಷ್ಟೇ ಹಣವಿರಬೇ ಕೆಂದಿಲ್ಲ. ಅವರವರ ಅವಶ್ಯಕತೆಯ ಪೂರೈಕೆಗಾಗಿ ಹಾಗೂ ಊಟ, ಬಟ್ಟೆ, ವಸತಿ ಶಿಕ್ಷಣಕ್ಕೆ ಸೌಲಭ್ಯ, ಆರೋಗ್ಯ ರಕ್ಷಣೆ ಅಥವಾ ಕನಿಷ್ಠ ಅನುಕೂಲಗಳೇ ಎಂದು ಭಾವಿಸಬಹುದು.

ಧರ್ಮದರ್ಶಿತ್ವ ಎಂದರೆ ಸಿರಿವಂತನ ಬಳಿ ಎಷ್ಟೇ ಆಸ್ತಿ, ಹಣವಿದ್ದರು ಅದರಲ್ಲಿ ಅವನ ಅವಶ್ಯಕತೆಗಳಿಗೆ ಬೇಕಾದಷ್ಟನ್ನು ಉಪಯೋಗಿಸಿಕೊಂಡು ಉಳಿದಿದ್ದನ್ನು ಸಮಾಜದ ಹಿತಕ್ಕಾಗಿ ಉಪಯೋಗಿಸಬೇಕು. ಯಾವುದೇ ಒಬ್ಬ ವ್ಯಕ್ತಿ ಅವನ ಅಗತ್ಯ ಕ್ಕಿಂತ ಹೆಚ್ಚಿನ ಆಸ್ತಿಯನ್ನು ಹೊಂದಿರಕೂಡದು. ಅಂದರೆ ಜನತೆ ಒಂದು ಹೊತ್ತು ಕೂಳಿಗಾಗಿ, ಗೇಣು ಬಟ್ಟೆಗಾಗಿ, ಚೂರು ನೆಲಕ್ಕಾಗಿ ಹೋರಾಟ ನಡೆಸುತ್ತಿರುವಾಗ ಹಲವು ಮಂದಿ ಇದನ್ನು ಭೋಗ ಸಾಮಗ್ರಿಗಳನ್ನಾಗಿಸಿಕೊಂಡು ಮೆರೆಯಕೂಡದು.

1. ಯಂಗ್ ಇಂಡಿಯಾ 23-6-1923.
2. Economic Philosophy of Mathma Gandhi–S. S. Gupta Page–132.

ಇದರ ಬದಲಾಗಿ ಎಲ್ಲರಿಗೂ ಕೊನೆಯಪಕ್ಷ ಜೀವನ ನಡೆಸಲು ಅನುವು ಮಾಡಿಕೊಡಬೇಕು. ಅಂದರೆ ಯಾವುದೇ ಒಬ್ಬ ಪ್ರಜೆ ತನ್ನ ಆಸ್ತಿಯನ್ನಾಗಲಿ, ಹಣವನ್ನಾಗಲಿ ಬೇರೆಯವರಿಗೆ ಕೊಡುವುದಕ್ಕಾಗಲಿ ಅಥವಾ ತ್ಯಾಗ ಮಾಡುವುದಕ್ಕೆ ಸಿದ್ಧನಿರುವುದಿಲ್ಲ. ಹಾಗೂ ಶಕ್ತಿಯ ಮೂಲಕ ಆಸ್ತಿಯನ್ನು ಕಿತ್ತುಕೊಳ್ಳುವುದು ಗಾಂಧೀಜೀಗೆ ಇಷ್ಟವಿರಲಿಲ್ಲ. ಮಾನವ ಜನ್ಮತಃ ಸ್ವಾರ್ಥಪರ ಆದಕಾರಣದಿಂದಲೇ ಗಾಂಧೀಜೀಯವರು ಈ ವಿಶ್ವಸ್ಥ (ಧರ್ಮದರ್ಶಿತ್ವ) ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ.

ಪ್ರತಿಯೊಬ್ಬರಿಗೂ ಯೋಗ್ಯ, ಆಹಾರ, ವಸತಿ, ವಸ್ತ್ರ, ಶಿಕ್ಷಣ ಮತ್ತು ಆರೋಗ್ಯವಾದರು ಸಿಗುವಂತಹ ಹಕ್ಕುಗಳು ಮತ್ತು ಅವಕಾಶಗಳಿರಬೇಕು. ಗಾಂಧೀಜೀಯವರ ಈ ಸಿದ್ಧಾಂತದ ಸತ್ವ ಅಥವಾ ತಿರುಳೆಂದರೆ ಶ್ರೀಮಂತರನ್ನು ಪರಿವರ್ತನೆ ಮಾಡುವುದು. ಶ್ರೀಮಂತರು ಬಡವರ ವಿಶ್ವಸ್ಥರಂತೆ ಅಂದರೆ ತನ್ನಲ್ಲಿ ಹೆಚ್ಚಿಗೆ ಇರುವ ಸಂಪತ್ತನ್ನು ಸಮಾಜಕ್ಕಾಗಿ ತ್ಯಾಗ ಮಾಡಲು ಸಿದ್ಧವಿರಬೇಕು. ಇಲ್ಲವಾದರೆ ಕೆಲವು ವೇಳೆ ಮನುಷ್ಯನು ಅಷ್ಟು ಸುಲಭವಾಗಿ ಇದನ್ನು ಒಪ್ಪುವುದಿಲ್ಲ. ಅದಕ್ಕಾಗಿ ಸಮಾಜ ಧರ್ಮದರ್ಶಿಗಳಾಗಲಿ ಅಂದರೆ ; ಸಿರಿವಂತನ ಕೈಯಲ್ಲಿ ಅವನ ಸಂಪತ್ತಿರುತ್ತದೆ. ವೈಯಕ್ತಿಕ ಅವಶ್ಯಕತೆಗಳಿಗೆ ಬೇಕಾದಷ್ಟನ್ನು ಉಪಯೋಗಿಸಿಕೊಂಡು ಉಳಿದಿದ್ದನ್ನು ಇತರರಿಗಾಗಿ ಉಪಯೋಗಿಸುವ ಕಾರ್ಯಕ್ಕೆ ಅವನು ತೊಡಗಬೇಕು, ನಾನು ಸಮಾಜದ ಸೇವಕ ಅದಕ್ಕಾಗಿ ಗಳಿಸುತ್ತೇನೆ, ಖರ್ಚುಮಾಡುತ್ತೇನೆ ಎನ್ನುವ ಭಾವನೆ ಬಂದಾಗ ಅವನ ಗಳಿಕೆಯಲ್ಲಿ ಶುದ್ಧ ಚಿತ್ರ ಕಂಡುಬರುವುದು. ಪ್ರಯತ್ನದಲ್ಲಿ ಅಹಿಂಸೆಯಿರುವುದು, ಇದರಿಂದಾಗಿ ಸಮಾಜದಲ್ಲಿ ಶಾಂತಿಯುತ ಕ್ರಾಂತಿ ಸಾಧ್ಯವೆನಿಸುತ್ತದೆ. ಈ ತತ್ವಕ್ಕೆ ಧರ್ಮದ ಆಧಾರವಿದ್ದು ದರ್ಶನದ ಬೆಂಬಲವು ಕೂಡ ಇದೆ. ಇದೇ ಮಾತನ್ನು ಈ ಶಾಸೋಶೋಪನಿಷತ್‌ನಲ್ಲಿಯೂ ಕೂಡ ನೋಡಬಹುದಾಗಿದೆ.

"ಈ ಖಾವಾಸ್ಯಮಿದಂ ಸರ್ವಂ ಯತ್ಕಿಚ ಜಗತ್ಯಾಂಜಗತ್
ತೇನತ್ಯಕ್ತೇನ್ ಭುಂಜಿಥಾ ಮಾಗೃಧ ಕಸ್ಯಸ್ವಿದ್ಧನಂ"

ನಾವು ಈ ವಿಶ್ವದಲ್ಲಿ ನೋಡುವುದೆಲ್ಲವೂ ಈಶ್ವರನಿಂದ ಆವರಿಸ್ಪಟ್ಟಿದೆ. ಅದ್ದರಿಂದ ಎಲ್ಲವನ್ನು ಪರಿತ್ಯಜಿಸು, ಅವನಿಗೆ ಒಪ್ಪಿಸು ನಿನ್ನ ಪಾಲಿಗೆ ಬಂದದ್ದನ್ನು ಬಳಿಕ ಬೋಗಿಸು, ಯಾರೊಬ್ಬರ ಸೊತ್ತಿಗಾಗಲಿ, ಸಂಪತ್ತಿಗಾಗಲಿ ಆಸೆ ಪಡಬೇಡ. ಈ ನಿಯಮಗಳನ್ನು ಪಾಲಿಸಿದರೆ ಸಮಸ್ತ ಜೀವರಾಶಿಯೊಡನೆಯೂ ಶಾಂತಿಯುತವಾಗಿ ಬಾಳುವ ವಿವೇಕಶಾಲಿ ಸದ್ಗೃಹಸ್ಥರಾಗಬಹುದು. ಈ ಲೋಕ ಮತ್ತು ಪರಲೋಕಗಳೆರಡರಲ್ಲಿಯೂ ಪರಮ ಪುರುಷಾರ್ಥವನ್ನು ಅದು ಈಡೇರಿಸಿಕೊಡುತ್ತದೆ. ಎಲ್ಲವೂ ದೇವರಿಗೂ ಸೇರಿದ್ದು, ದೇವರು ಕೊಟ್ಟಿದ್ದರಿಂದ ಎಲ್ಲವನ್ನು ಜನತೆಯ, ಸಮಾಜದ ಕಲ್ಯಾಣಕ್ಕಾಗಿ ಬಳಸಬೇಕೆ ವಿನಃ ಯಾವುದೊ ಒಬ್ಬನ ಸುಖ ಸಂತೋಷಕ್ಕಾಗಿಯಲ್ಲ. ಒಂದು ವೇಳೆ ಶ್ರೀಮಂತರು ಬಡವರ ವಿಶ್ವಸ್ಥರಂತೆ ಕಾರ್ಯನಿರ್ವಹಿಸದೆ ಹೋದರೆ,

ತನ್ನ ವೈಭವ ಜೀವನಕ್ಕೆ ಎಲ್ಲವನ್ನು ಈತನೊಬ್ಬನೇ ಉಪಯೋಗಿಸಿಕೊಂಡರೆ ಅವನೂ ನಾಶವಾಗಿ, ಬಡವರನ್ನು ನಾಶವಮಾಡಿ ರಾಷ್ಟ್ರದ ಅಭ್ಯುದಯಕ್ಕೆ ಹಾನಿಯುಂಟಾಗುತ್ತದೆ. ಅಷ್ಟೇಯಲ್ಲವೆ ಶ್ರೀಮಂತ ಬಡವರ ನಡುವೆ ಕಂದಕ ಉಂಟಾಗಿ ಅದರಿಂದ ಇಡೀ ಸಮಾಜ ಮಾತ್ರವಲ್ಲವೆ ರಾಷ್ಟ್ರ ಯಾವುದೇ ಕ್ಷೇತ್ರದಲ್ಲಿ ಮುಂದುವರಿಯಲು ಸಾಧ್ಯವಿಲ್ಲದೆ ಹೋಗಿ ಬಡವರು ಬಡವರಾಗಿಯೇ ಉಳಿದು, ಶ್ರೀಮಂತರು ಶ್ರೀಮಂತರಾಗುತ್ತಾ ಹೋಗುತ್ತಾರೆ. ಅದರ ಜೊತೆಗೆ ಇವರಿಬ್ಬರ ನಡುವೆ ರಾಗದ್ವೇಷಾದಿಗಳು ಉಂಟಾಗಿ ಹೊಟ್ಟೆಕಿಚ್ಚು, ಹಿಂಸೆ, ಅಶಾಂತಿ, ಕ್ರಾಂತಿ, ಭಯ, ಭೀತಿಗಳಂತವು ತಲೆದೋರುವವು.

ಬಂಡವಾಳಗಾರರು, ಜಮೀನ್ದಾರರು, ಕಾರ್ಮಿಕರು ಮತ್ತು ರೈತರು ವಿಶ್ವಸ್ಥರಂತೆ ಕೆಲಸ ಮಾಡಿದರೆ ರಾಷ್ಟ್ರೀಕರಣದ ಅಗತ್ಯವಿರುವುದಿಲ್ಲ. ವರ್ಗ ಕಲಹವಾಗಲಿ, ವರ್ಗ ದ್ವೇಷವಾಗಲಿ ಶೋಷಣೆಯಾಗಲಿ ಇರುವುದಿಲ್ಲ. ಸಿರಿವಂತರು ತಮ್ಮ ಹೆಚ್ಚಿನ ಆಸ್ತಿಯನ್ನು ವಿಶ್ವಸ್ಥರಂತೆ ಬಳಸಿಕೊಳ್ಳದೆ ಹೋದರೆ ಸರ್ಕಾರ ಕಾನೂನಿನ ಮೂಲಕ ಇದನ್ನು ನಿಯಂತ್ರಿಸಬಹುದು. ಇಲ್ಲವಾದರೆ ರಾಜ್ಯವೇ ಟ್ರಸ್ಟಿಯಾಗಿ ಯಾವ ವ್ಯಕ್ತಿಯೂ ಹೆಚ್ಚಿನ ಆಸ್ತಿಯನ್ನು ತನ್ನ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳದಂತೆ ನೋಡಿಕೊಳ್ಳಬೇಕು" "ವ್ಯಕ್ತಿಯ ಹಿತಕ್ಕಿಂತ ಸಾಮಾಜಿಕ ಹಿತವೇ ಮುಖ್ಯ".[1] ಎಂಬುದು ಗಾಂಧೀಜಿಯವರ ಅಭಿಮತವಾಗಿತ್ತು.

ಗಾಂಧೀಜೀಯವರ ವಿಶ್ವಸ್ಥ ಸಿದ್ಧಾಂತ ವ್ಯವಹಾರಿಕವಾಗಿ ಸರಳವಾಗಿ ಅನೇಕ ಸೂತ್ರಗಳನ್ನು ಒಳಗೊಂಡಿದೆ, ಅವುಗಳೆಂದರೆ

1 ಧರ್ಮಧರ್ಶಿತ್ವ ಇಂದಿನ ಬಂಡವಾಳಶಾಹಿ. ಸಮಾಜ ವ್ಯವಸ್ಥೆಯನ್ನು ಸಾಮ್ಯನಿಷ್ಠ ಸಮಾಜವಾಗಿ ಪರಿವರ್ತಿಸುವ ದಾರಿ ತೋರುತ್ತಿದೆ. ಬಂಡವಾಳಶಾಹಿಗೆ ಎಡೆಕೊಡದು ಅಂದರೆ ಬಂಡವಾಳ ವರ್ಗ ಆತ್ಮಸುಧಾರಣೆ ಮಾಡಿಕೊಳ್ಳಲು ಒಂದು ಅವಕಾಶ ಕೊಡುತ್ತದೆ. ಮಾನವನ ಸ್ವಭಾವ ಎಂದಿಗೂ ಪರಿವರ್ತನೆಗೆ ಮೀರಿದಲ್ಲ ಎಂಬ ಶ್ರದ್ಧೆಯ ಮೇಲೆ ಅದು ನಿಂತಿದೆ.

2 ಸಮಾಜದ ಹಿತಕ್ಕೆ ಅನುಕೂಲವಾಗುವ ಮಟ್ಟಿಗೆ ಮಾತ್ರ ಇರುವ ಖಾಸಗಿ ಆಸ್ತಿಯನ್ನು ಈ ತತ್ವ ಮನ್ನಿಸುತ್ತದೆ.

3 ಆಸ್ತಿಯ ಸ್ವಾಮ್ಯತ್ವವು ಶಾಸನಾಂಗಗಳು ರಚಿಸುವ ಕಾಯಿದೆಗಳ ನಿರ್ಬಂಧಗಳಿಗೆ ಒಳಪಡಬೇಕು.

---

1 ಯಂಗ್ ಇಂಡಿಯಾ 3-9-1923

4 ಧರ್ಮದರ್ಶಿತ್ವವು ರಾಜ್ಯದಿಂದ ನಿಯಂತ್ರಿತವಾಗಿರಬೇಕು. ಸಾಮಾಜಿಕ ಹಿತವನ್ನು ನಿರ್ಲಕ್ಷಿಸಿ ಸ್ವಾರ್ಥಕ್ಕಾಗಿ ಮಾತ್ರ ಯಾರೂ ಆಸ್ತಿಯ ಸಾಮ್ಯತ್ವವನ್ನು ಹೊಂದಕೂಡದು.

5 ನ್ಯಾಯಸಮ್ಮತವಾದ ಕನಿಷ್ಠ ಜೀವನ ವೇತನ ಗೊತ್ತುಪಡಿಸಬೇಕೆಂಬ ಸೂಚನೆಯಂತೆ ಸಮಾಜದಲ್ಲಿ ಯಾವನೇ ವ್ಯಕ್ತಿಯು ಗಳಿಸಬಹುದಾದ ಗರಿಷ್ಠ ಉತ್ಪನ್ನಕ್ಕಾಗಿ ಒಂದು ಮಿತಿಯನ್ನೂ ನಿರ್ಧರಿಸಬೇಕು. ಅಂತಹ ಕನಿಷ್ಠ-ಗರಿಷ್ಠ ಉತ್ಪನ್ನಗಳ ಅಂತರವು ನ್ಯಾಯ ಸಮ್ಮತವಾಗಿರಬೇಕು. ಕಾಲ ಕಾಲಕ್ಕೆ ಉತ್ಪನ್ನದಲ್ಲಿ ಏರಿಳಿತಗಳಾಗದಂತೆ ಬದಲಾಗುತ್ತಿರಬೇಕು, ಹೀಗಾಗಿ ಆ ಅಂತರ ಕೊನೆಗೆ ಮಾಯವಾಗುವ ಪ್ರವೃತ್ತಿ ಕಂಡುಬರಬೇಕು.

6 ದೇಶದಲ್ಲಿಯ ಉತ್ಪಾದನಾ ಚಟುವಟಿಕೆಯು ಸಾಮಾಜಿಕ ಹಿತದ ದೃಷ್ಟಿಯಿಂದ ಖಾಸಗಿ ಲಾಭದ ದೃಷ್ಟಿಯನ್ನಿಟ್ಟುಕೊಳ್ಳಬಾರದು.

ಬಂಡವಾಳಗಾರರು ಮತ್ತು ಕಾರ್ಮಿಕರು ಜನತೆಯ ವಿಶ್ವಸ್ಥರಂತೆ ನಡೆದುಕೊಳ್ಳದೆ ಹೋದರೆ ಆಗ ಸರ್ಕಾರವೇ ಕೈಗಾರಿಕೆಗಳನ್ನು ರಾಷ್ಟ್ರೀಕರಣಗೊಳಿಸಬೇಕು, ಅಥವಾ ತನ್ನ ವಶಕ್ಕೆ ತೆಗೆದುಕೊಳ್ಳಬೇಕು. ಹಾಗೂ ಈ ಕೈಗಾರಿಕೆಗಳನ್ನು ಸರ್ಕಾರ ಜನತೆಯ, ಸಮಾಜದ, ರಾಷ್ಟ್ರದ ಹಿತಕ್ಕಾಗಿ ನಡೆಸಬೇಕೆ ವಿನಃ ಅದು ಲಾಭಕ್ಕಾಗಿ ನಡೆಸಕೂಡದು. ಅಷ್ಟೇ ಅಲ್ಲದೆ ಕೈಗಾರಿಕೆಗಳನ್ನು ಒಂದೇ ಕಡೆ ಕೇಂದ್ರಿಕರಿಸಕೂಡದು. ಕೇಂದ್ರಿಕರಿಸಲು ಯತ್ನಿಸಿದರೆ ಅದು ಪ್ರಜಾಸತ್ತೆಯ ತತ್ವಕ್ಕೆ ವಿರುದ್ಧವಾಗುತ್ತದೆ. ಅದರಲ್ಲಿಯೂ ಹೆಚ್ಚಾಗಿ ಸಣ್ಣ ಕೈಗಾರಿಕೆಗಳ ಕಡೆಗೆ ಹೆಚ್ಚು ಗಮನನೀಡಬೇಕು. ಅದೇ ರೀತಿ ಹಣ, ಸಂಪತ್ತು ಅಧಿಕಾರ ಯಾವ ವ್ಯಕ್ತಿಯಲ್ಲಿಯೂ ಕೇಂದ್ರೀಕೃತವಾಗದಂತೆ ಜಾಗರೂಕತೆಯಿಂದಿರಬೇಕು.

ಈ ತತ್ವದ ಮೂಲಕ ಮಾನವನ ಸುಖ, ಶಾಂತಿ, ಸಮೃದ್ಧಿ ಸಹಬಾಳ್ವೆ, ಸಂಯಮ, ದ್ವೇಷ, ಅಸೂಯೆ, ಕಲಹ, ಸ್ವಾರ್ಥರಹಿತ ಸಮಾಜ ಸ್ಥಾಪನೆ ಸಾಧ್ಯ. ಇದರ ಜೊತೆಗೆ ಬಡಜನರ ಕಲ್ಯಾಣ, ಸಮಾಜದ ಏಳಿಗೆ, ಆರ್ಥಿಕ ಅಭಿವೃದ್ಧಿ, ನಾಗರೀಕ ಸಂಸ್ಕೃತಿ, ಶಿಕ್ಷಣ ಮಟ್ಟ, ಜೀವನ ಮಟ್ಟ, ಸಮಾನ ವಿತರಣೆ, ಅಧಿಕ ಉತ್ಪನ್ನ, ಕೈಗಾರಿಕಾ ಕೃಷಿ ಅಭಿವೃದ್ಧಿ, ವ್ಯಕ್ತಿಯ, ರಾಷ್ಟ್ರದ ಉದ್ದೀಪನ ಖಂಡಿತ ಸಾಧ್ಯ.

ಧರ್ಮದರ್ಶಿತ್ವ ಸಿದ್ಧಾಂತ ವ್ಯಕ್ತಿಗೂ ಸಮಾಜಕ್ಕೂ ಅಂದರೆ ವ್ಯಕ್ತಿ-ಸಮಾಜಗಳ ನಡುವೆ ಸಾಮರಸ್ಯಪೂರ್ಣ ಬೆಳವಣಿಗೆಗೆ ಅನುಕೂಲ ಸಿಂಧುವಾಗಿದೆ. ಅವರು, ಇವರು ಹೇಳಿರುವ ಅಪರಿಗ್ರಹ ಈ ದಿನದ ಸಮಾಜದಲ್ಲಿ ಸಾಧ್ಯವೇ ? ಇವರು ಸಹ ತತ್ವಜ್ಞಾನಿ

ಯಾದ ಪ್ಲೇಟೋವಿನಂತೆ ಕೇವಲ ಭ್ರಮೆಗೆ ಸಿಲುಕುವಂತದೇ ವಿನಃ ಅನುಷ್ಠಾನಕ್ಕೆ ತರುವುದು ಅಥವಾ ಬರುವುದು ಕಷ್ಟಸಾಧ್ಯವೆನಿಸುತ್ತದೆ ಕಾಯಕದ ತತ್ವವೂ ಸಹ ಎಲ್ಲರಿಂದಲೂ ಪರಿಪಾಲಸ್ಪಡುವುದಿಲ್ಲ. ಕಾರಣ ಮಾನವ ದಿನೇ ದಿನೇ ಸುಲಭವಾಗಿ ಶ್ರಮವಿಲ್ಲದೆ ಸಂಪಾದನೆ ಮಾಡುವ ಮಾರ್ಗವನ್ನು ಅನುಸರಿಸಲು ಯತ್ನಿಸುತ್ತಿದ್ದಾನೆ. ಹಾಗು ಇವರ ಆರ್ಥಿಕ ಸಮಾನತೆಯ ತತ್ವವು ಕೂಡ ಅಪ್ರಸ್ತುತ ಎನಿಸುತ್ತದೆ. ಇವರ ಈ ಸಿದ್ಧಾಂತ ಕಿವಿಯಿಂದ ಕೇಳಲು ಇಂಪಾಗಿದೆ ಅದರೆ ಅದು ಎಷ್ಟರ ಮಟ್ಟಿಗೆ ಅನುಷ್ಠಾನಕ್ಕೆ ತರಬಹುದೆಂದರೆ ಯಾರು ಇದನ್ನು ಒಪ್ಪುವುದಿಲ್ಲ. ಈ ತತ್ವ ಮಾನವನ ವ್ಯವಹಾರಕ್ಕೆ ಅಭಿವೃದ್ಧಿಗೆ ದಕ್ಕೆಯುಂಟುಮಾಡುತ್ತದೆ. ಅಂದರೆ ಆಸ್ತಿ, ಹಣ ಅಧಿಕಾರ ಇವುಗಳ ಸಂಗ್ರಹಣೆಗಾಗಿ ಈ ಜಗತ್ತಿನಲ್ಲಿ ಇರುವವರೆಲ್ಲರೂ ಹೋರಾಟ ಮಾಡುತ್ತಿದ್ದಾರೆ. ಇದು ಮಿತವಾಗಿರಬೇಕು ಇದನ್ನು ಯಾರು ಗಳಿಸಬಾರದೆಂದರೆ ಯಾರು ಸಹ ಶ್ರಮವಹಿಸಿ ಶ್ರದ್ಧೆಯಿಂವ ಕೆಲಸ ಮಾಡಲಿಚ್ಚಿಸರು. ಇದು ಕೇವಲ ಕೇಳುವುದಕ್ಕೆ ಹಿತವಾಗಿದೆಯೇ ವಿನಃ ಆಚರಣೆಗಲ್ಲ. ಈತತ್ವವನ್ನೇ ಆಧಾರವಾಗಿಟ್ಟುಕೊಂಡು ವಿನೋಬಾಜಿಯವರು ಭೂದಾನ ಚಳುವಳಿಯನ್ನು ಆರಂಭಿಸಿದರು. ಆದರೆ ಅದರ ಫಲಿತಾಂಶ ಎಂದರೆ ಕೇವಲ ಒಣ ಭೂಮಿ, ಕಲ್ಲು ಭೂಮಿಯನ್ನು ತ್ಯಾಗ ಮಾಡಿದರೆ ಹೊರತು ಒಳ್ಳೆಯ ಫಲವತ್ತಾದ ಭೂಮಿಯನ್ನು ಯಾರು ದಾನ ಮಾಡಲಿಲ್ಲ ಎಂಬುದು ಕಟು ಸತ್ಯ ಸಂಗತಿಯಾಗಿದೆ.

ಒಟ್ಟಾರೆ ಇವರ ಈ ಚಿಂತನೆ ಕೇವಲ ಕಲ್ಪನೆಗೆ ಹತ್ತಿರವೇ ಹೊರತು ನಿಜವಾಗಿಯೂ ಕಾರ್ಯಾಚರಣೆಗೆ ತರಲು ಸಾಧ್ಯವಿಲ್ಲ. ಇವರ ಪ್ರಕಾರ ಮಾನವ ಜಗತ್ತಿನ ಜಂಜಾಟಕ್ಕೆ ಅಂಟಿಕೊಳ್ಳದ ರೀತಿ ಇರಬೇಕು. ಆದರೆ ಇದು ಲೌಕಿಕ ವ್ಯಾಪಾರಕ್ಕೆ ನೇತು ಹಾಕಿಕೊಂಡಿರುವ ಮಾನವನಿಂದ ಸಾಧ್ಯವೇ? ಒಂದು ವೇಳೆ ಇರುವವರೆಲ್ಲರಲ್ಲಿ ಈ ರೀತಿ ಭಾವನೆ ಮೂಡಿದರೆ ಜಗತ್ತು ಮಾನವೀಯ ಸಮಾಜದ ಬದಲು ದೈವೀ ಸಮಾಜವಾಗುತ್ತದೆ ಎಂಬುವುದರಲ್ಲಿ ಯಾವ ಸಂಶಯವು ಇಲ್ಲ.

ಗ್ರಂಥ ಋಣ

Bihari, Bipin : Gandhian Economic Philosophy, Bombay. 1963.

Dhawan G. N. : The Political Philosophy & Mahathma Gandhi-1946.

Dandana Sarkar (ed) Towords Trusteeship-1974

Gadre Kamala : The coming struggle for Trusteeship-1971

Kumarappa J. C.	Gandhian Economic thoughts 1962
Menon V. L.	Rnskin and Gandhi 1965
Nag kalidas	Tolstoy and Gandhi 1950.
Munshi K. M.	Reconstruction of Society through Transfeeship -1968.
Sitaramaiah B. P.	Gandhi and Gandhism 1938.

ನಮ್ಮ ಶಾಸ್ತ್ರಕಲೆಗಳು ಮತ್ತು ಶಿಕ್ಷಣ

ಎ. ಓ. ಆವಲಮೂರ್ತಿ

ಭರತನಾಟ್ಯಕ್ಕೆ ಒಂದು ಭಾಷೆ ಇದೆ. ಮುಖ್ಯವಾಗಿ ಆಂಗಿಕ ಭಾಷೆ. ಇದನ್ನು ಅರ್ಥಮಾಡಿಕೊಳ್ಳದೆ ಭರತನಾಟ್ಯವನ್ನು ಅರ್ಥಮಾಡಿಕೊಳ್ಳುವುದು ಮತ್ತು ಆಸ್ವಾದಿಸುವುದು ಸಾಧ್ಯವಿಲ್ಲ. ಬಹಳಷ್ಟು ಜನಕ್ಕೆ ಅದರಲ್ಲೂ ಈಚಿನ ಪೀಳಿಗೆಯವರಿಗೆ, ಶಾಸ್ತ್ರೀಯವಾದದ್ದೆಲ್ಲವೂ ಗ್ರಹಿಕೆಗೆ ಮೀರಿದ್ದಾಗಿದೆ. ಬಹುಶಃ ಈ ಕಾರಣದಿಂದಾಗಿಯೆ ಶಾಸ್ತ್ರೀಯ ಸಂಗೀತ, ನೃತ್ಯ, ಶಿಲ್ಪ, ಚಿತ್ರಕಲೆ ಇತ್ಯಾದಿ 'ಭಾರತೀಯ'ವಾದದ್ದೆಲ್ಲವನ್ನು ಅವರು ಅಷ್ಟಾಗಿ ಇಷ್ಟಪಡುತ್ತಿಲ್ಲ ಎನ್ನಬಹುದು. ಅರ್ಥವಾಗದ್ದು ಯಾವತ್ತೂ ದೂರವಾಗಿ, ನಿಗೂಢವಾಗಿ ಮತ್ತು ಅಪರಿಚಿತವಾಗೇ ಉಳಿದುಬಿಡುತ್ತದೆ.

ನಮ್ಮ ಕಲೆ, ಸಂಸ್ಕೃತಿ, ಪರಂಪರೆಗಳು ಅನಾದರಣೆಗೆ ಒಳಗಾಗುತ್ತಿವೆ. ಅದರಲ್ಲೂ ಯುವಜನರಿಗೆ ಇವು ಬೇಕಿಲ್ಲ. ಅವರಿಗೇನಿದ್ದರೂ ಪಾಶ್ಚಾತ್ಯ ಪ್ರಭಾವದ ಉನ್ಮತ್ತಿಸುವ ಚಿತ್ರಗೀತೆಗಳು, ಮೈಮುರಿಯುವ ಡ್ಯಾನ್ಸ್‌ಗಳು ಮತ್ತು ಅಬ್ಬರದ ಸಂಗೀತಗಳಷ್ಟೆ ಬೇಕು ಎಂಬಂತ ಮಾತುಗಳು ಎಲ್ಲೆಡೆಯಿಂದಲೂ ಕೇಳಿಬರುತ್ತಿವೆ. ಮುಖ್ಯವಾಗಿ ಇದು ಹಿರಿಯರ ಪ್ರಲಾಪ ಎನಿಸಿಕೊಂಡಿದೆ. ಇದರಲ್ಲಿ ಅಸತ್ಯವೇನೂ ಇಲ್ಲ. ಈ ಪರಿಸ್ಥಿತಿ ಹೇಗೆ ಮತ್ತು ಯಾಕೆ ಉಂಟಾಯಿತು ?

ಇದಕ್ಕೆ ಉತ್ತರವನ್ನು ನಾವು ತುಂಬಾ ಹಿಂದಿನಿಂದ ಹುಡುಕಿಕೊಂಡು ಬರಬೇಕಾಗುತ್ತದೆ. ನಮ್ಮ ಈ ಎಲ್ಲ ಶಾಸ್ತ್ರಕಲೆಗಳೂ ಜನರಿಂದ ದೂರವಾಗಿಯೇ ಉಳಿದುಬಂದಿದ್ದವು. ಇದಕ್ಕೆ ಹಲವು ಕಾರಣಗಳುಂಟು. ಅವುಗಳಲ್ಲಿ ನಮ್ಮ ಹಿಂದಿನವರ 'ಶಾಸ್ತ್ರಬುದ್ಧಿ'ಯು ಒಂದು. 'ಇಂಥಿಂಥವರು ಇಂಥಿಂಥ ಕಲೆಗಳನ್ನು ಕಲಿಯಬೇಕು. ಉಳಿದವರಿಗೆ ಅವು ನಿಷಿದ್ಧ' ಎನ್ನುವಂತ ಜಿಗುಟುತನ ನಮ್ಮ ಅನೇಕ ಶಾಸ್ತ್ರಕಲೆಗಳನ್ನು ಜನಸಾಮಾನ್ಯರಿಂದ ದೂರವಿರಿಸಿತ್ತು.

ಈಚೆಗೆ ಈ ನಿಲುವಿನಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಎಲ್ಲ ಜ್ಞಾನ ಶಾಖೆಗಳ ಅಧ್ಯಯನಕ್ಕೆ ಆಸಕ್ತಿ ಇರುವ ಎಲ್ಲ ಜನರೂ ಅರ್ಹರು, ಅದರಲ್ಲಿ ಮಡಿವಂತಿಕೆ ಬೇಡ ಎನ್ನುವ ಆರೋಗ್ಯಕರ ನಿಲುವು ಬೆಳೆಯುತ್ತಿದೆ. ಇದು ಪ್ರಾರಂಭವಾದದ್ದು ಒಂದು ರೀತಿಯಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಧಾಳಿಯಿಂದ. ಆದರೆ ಪಾಶ್ಚಾತ್ಯ ಸಂಸ್ಕೃತಿ ನಮ್ಮ 'ಶಾಸ್ತ್ರಬುದ್ಧಿ'ಯನ್ನು ಛಿದ್ರಗೊಳಿಸಿ ನಮ್ಮ ಶಾಸ್ತ್ರಕಲೆ

ಗಳನ್ನು–ಶಿಕ್ಷಣವೂ ಸೇರಿದಂತೆ–ಕೆಲವರ ಹಿಡಿತದಿಂದ ಮುಕ್ತಿಗೊಳಿಸಿ ಉಪಕರಿಸಿದ್ದೇನೋ ನಿಜ. ಆದರೆ ಅದೇ ಕಾಲಕ್ಕೆ ಅದು ನಮ್ಮ ಶಾಸ್ತ್ರಕಲೆಗಳು ಬೇರೂರಿ ಜನಮನವನ್ನು ವ್ಯಾಪಿಸಲು ಅವಕಾಶ ಮಾಡಿಕೊಡಲಿಲ್ಲ. ಬದಲಿಗೆ, ನಮ್ಮ ನೆಲದ ಭಾಷೆಗಳೂ ಸೇರಿದಂತೆ ನಮ್ಮೆಲ್ಲ ಶಾಸ್ತ್ರಕಲೆಗಳನ್ನು ಮೂಲೋತ್ಪಾಟನೆ ಮಾಡಿ ತಾನೇ ವಿಜೃಂಭಿಸಲು ಪ್ರಾರಂಭಿಸಿತು. ಆದಕ್ಕೆ ಅವಕಾಶ ಮಾಡಿಕೊಟ್ಟ ನಮ್ಮ ಸಂಸ್ಕೃತಿಯಾದರೂ ಎಂಥದ್ದು !

'ಸಮನ್ವಯ ದೃಷ್ಟಿ'ಯು ನಮ್ಮ ಸಂಸ್ಕೃತಿ ಎಲ್ಲದರ ನಡುವೆ ಸಮನ್ವಯವನ್ನು ಸಾಧಿಸುತ್ತ "ಕೊನೆಗೆ ಒಳಿತು ಕೆಡಕುಗಳಲ್ಲಿಯೂ ಸಮನ್ವಯವನ್ನು ಕಾಣುವ ದೌರ್ಬಲ್ಯದ ಮಟ್ಟಕ್ಕೆ ಇಳಿಯಿತು" ಎಂದು ಡಾ॥ ಹೊನ್ನಾಳಿ ತಿಪ್ಪೇರುದ್ರಸ್ವಾಮಿ 'ಕರ್ನಾಟಕದ ಸಂಸ್ಕೃತಿ ಸಮೀಕ್ಷೆ'ಯಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಅಂಥ ದೌರ್ಬಲ್ಯದ ಕ್ಷಣದಲ್ಲಿ ತನ್ನದನ್ನು ಪಕ್ಕಕ್ಕೆ ಸರಿಸಿ ಅನ್ಯದಕ್ಕೆ ಮಣೆ ಹಾಕುವ ಅತಿ ಔದಾರ್ಯವನ್ನು ನಮ್ಮ ಸಂಸ್ಕೃತಿ ಪ್ರದರ್ಶಿಸಿದೆ.

ಯಾವತ್ತೂ ನಮ್ಮ ಸಂಸ್ಕೃತಿ ನಮ್ಮದಾಗಿರಬೇಕು–ನಮ್ಮವರಂತಿರಬೇಕು, ಸದಾ ನಮ್ಮೊಡನಿರಬೇಕು. ಅನ್ಯ ಸಂಸ್ಕೃತಿಯ ಪರಿಚಯವೂ ಬೇಕು. ಆದರದು ಅತಿಥಿಗಳಂತೆ, ಕೇವಲ ಪರಿಚಯಸ್ಥರಂತೆ, ಆಗಾಗ ಬಂದು ಹೋಗುವಂತಿರಬೇಕು. ಸದಾ ನಮ್ಮ ಮಧ್ಯೆಯೇ ಇದ್ದು, ನಮ್ಮನ್ನೇ ಗುಲಾಮರನ್ನಾಗಿಸಿಕೊಂಡು, ನಮ್ಮ ಮೇಲೆಯೇ ದರ್ಬಾರು ಮಾಡುವಂತಿರಬಾರದು. ಆದರೆ ಈಗ ಆಗಿರುವುದೇ ಹೀಗೆ.

1947ರಲ್ಲಿ ಭಾರತ ಸ್ವಾತಂತ್ರ್ಯವಾದಾಗ ಒಬ್ಬ ಬ್ರಿಟಿಷ್ ಪ್ರಜೆ ಹೇಳಿದ್ದ. "ನಿಮಗೆ ರಾಜಕೀಯ ಸ್ವಾತಂತ್ರ್ಯವೇನೋ ಸಿಕ್ಕಿತು. ನಾವು ದೇಶ ಬಿಟ್ಟು ಹೋಗುತ್ತಿದ್ದೇವೆ. ಆದರೆ ನಮ್ಮ ಹಿಂದೆ ನಾವು ನಮ್ಮ ಸಂಸ್ಕೃತಿಯನ್ನು ಬಿಟ್ಟು ಹೋಗುತ್ತಿದ್ದೇವೆ. ಇನ್ನು ಮುಂದೆ ನೀವು ಅದಕ್ಕೆ ಗುಲಾಮರಾಗಿರುತ್ತೀರಿ." ಮೊನ್ನೆ ತಾನೆ 49ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದ್ದೇವೆ. ಆದರೆ ಇಂದಿಗೂ ಈ ಮಾತು ಪ್ರಸ್ತುತವಾಗೇ ಇದೆ.

ದುರಂತವೆಂದರೆ, ಪಾಶ್ಚಾತ್ಯ ಸಂಸ್ಕೃತಿಯೂ ನಮ್ಮದರೊಂದಿಗೆ ಪೂರ ಆವಾಹನೆಗೊಳ್ಳುವುದು ಸಾಧ್ಯವಾಗೇ ಇಲ್ಲ. ಅದು ಒಂದು ರೀತಿಯಲ್ಲಿ 'ಹತ್ತಿರವಿದ್ದೂ ದೂರ'ವಾಗೇ ಉಳಿದುಬಿಟ್ಟಿದೆ. 'ತಿರುಳು ದಕ್ಕಲಿಲ್ಲ; ಪೊರೆ ಬಿಡಲಿಲ್ಲ' ಎಂಬಂತಾಗಿದೆ. ಹೀಗೆ ಅಂಟಿಕೊಂಡ ಪೊರೆಯ ವಿಕೃತ ಪ್ರದರ್ಶನವೇ ಎಲ್ಲೆಡೆಯೂ ನಡೆಯುತ್ತಿದೆ. ನಮ್ಮ ನೆಲದಲ್ಲಿ ಚಿಗುರೊಡೆದು, ಇಲ್ಲಿನ ನೀರು ಸಾರವನ್ನು ಹೀರಿಕೊಂಡು ಬೆಳೆಯದ, ನಮ್ಮ ವಾತಾವರಣಕ್ಕೆ ಒಗ್ಗದ ಅನ್ಯ ಸಂಸ್ಕೃತಿಯೊಂದರ ಮೇಲನುಕರಣೆಯಿಂದ ನಾವು ನೈಜ ಸಂಸ್ಕೃತಿಯ ಶಿಸ್ತು ಸೆಡಹುಗಳನ್ನು ಕಳಚಿಕೊಂಡು ಎಡಬಿಡಂಗಿಗಳಾಗಿದ್ದೇವೆ.

ಪಾಶ್ಚಾತ್ಯ ಸಂಸ್ಕೃತಿಯಲ್ಲಿ ನಾವು ಕಲಿಯಬೇಕಾದ್ದು, ಹೀರಿಕೊಳ್ಳಬೇಕಾದ್ದು ಇತ್ತು. ಆದರೆ ಅದನ್ನು ನಾವು ಒತ್ತಟ್ಟಿಗೆ ಸರಿಸಿ ಕೇವಲ 'ಕಚಡಾ'ವನ್ನಷ್ಟೆ ಅನುಕರಿಸುತ್ತಿದ್ದೇವೆ. (ಕಚಡಾ–ನಮ್ಮ ವಾತಾವರಣಕ್ಕೆ. ಅದು ಶ್ರೇಷ್ಠವೇ ಇರಬಹುದು–ಅವರ ವಾತಾವರಣಕ್ಕೆ).

ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಬೆರೆತು ಹೋಗಿರುವ ವೈಜ್ಞಾನಿಕ ಚಿಂತನೆಯನ್ನು ನಾವು ದಕ್ಕಿಸಿಕೊಳ್ಳಲಿಲ್ಲ; ಅದನ್ನು 'ಬದುಕಿನ ರೀತಿ' ಯಾಗಿ ರೂಢಿಸಿಕೊಳ್ಳಲಿಲ್ಲ. ಕೇವಲ ಅವರಂತೆ ಬರ್ತ್‌ಡೇ ಆಚರಿಸುವ, ಕೇಕ್ ಕತ್ತರಿಸುವ, ಹಾಯ್ ಹಾಯ್, ಬೈ ಬೈ ಎನ್ನುವ 'ಚೇಷ್ಟೆ' ಗಳನ್ನಷ್ಟೆ ಅಳವಡಿಸಿಕೊಂಡೆವು. ವಿಜ್ಞಾನ ಮತ್ತು ತಂತ್ರ ಜ್ಞಾನಕ್ಕಿಂತ ಮುಖ್ಯವಾದ ವೈಜ್ಞಾನಿಕ ಮನೋಭಾವ ವಿಜ್ಞಾನದ ಆತ್ಮವಿದ್ದಂತೆ. ನಾವು ವಿಜ್ಞಾನದ ಆತ್ಮವನ್ನು ಹಿಡಿಯಲಿಲ್ಲ; ತಂತ್ರಜ್ಞಾನದ ತಳುಕಿನ ಹೊರ ದಿರಿಸನ್ನಷ್ಟೆ ತೊಟ್ಟೆವು. ತಾರತಮ್ಯ, ಒಳ್ಳೆಯದು ಕೆಟ್ಟದ್ದು, ಸರಿ ತಪ್ಪು, ಸಂಗತ–ಅಸಂಗತ ಇತ್ಯಾದಿಗಳ ನಡುವಿನ ವ್ಯತ್ಯಾಸವನ್ನು ಗುರುತಿಸಲು ನೆರವಾಗುವ ವಿಶ್ಲೇಷಣಾ ಶಕ್ತಿಯನ್ನು ಬೆಳೆಸುವ ವೈಜ್ಞಾನಿಕ ಚಿಂತನೆಯ ಸಾರವನ್ನು ಹೀರಿಕೊಳ್ಳದ ನಮ್ಮ 'ಸಮನ್ವಯ ದೃಷ್ಟಿ' ಯ ಸಂಸ್ಕೃತಿ ತನಗೆ ಯುಕ್ತವಾದದ್ದೇನು ಎಂಬುದನ್ನು ಗುರುತಿಸಿಕೊಳ್ಳಲಾಗದೆ ತನ್ನೆಡೆಗೆ ಬಂದ–ಕೆಟ್ಟದ್ದೂ ಸೇರಿದಂತೆ–ಎಲ್ಲವನ್ನೂ ಬೆಪ್ಪು ಬೆರಗಿನಲ್ಲಿ ಸ್ವೀಕರಿಸಿ ಹೆಚ್ಚು ಹೆಚ್ಚು ಮಲಿನವಾಗುತ್ತಾ ನಡೆದಿದೆ.

ವಿಜ್ಞಾನ–ತಂತ್ರಜ್ಞಾನದ ಅರಿವು ಮತ್ತು ವೈಜ್ಞಾನಿಕ ಚಿಂತನೆಯನ್ನು ವೈಜ್ಞಾನಿಕ ಸಾಕ್ಷರತೆ ಎಂದು ಕರೆಯಬಹುದು. ಹಾಗೆಯೆ, ನಮ್ಮ ನಾಡು–ನುಡಿ, ಭಾರತೀಯ ಬದುಕು, ನಮ್ಮ ಶಾಸ್ತ್ರಕಲೆಗಳು ಇತ್ಯಾದಿ ಭಾರತೀಯವಾದದ್ದರ ಬಗೆಗಿನ ಅಜ್ಞಾನವನ್ನು ಸಾಂಸ್ಕೃತಿಕ ಅನಕ್ಷರತೆ ಎನ್ನಬಹುದು. ವೈಜ್ಞಾನಿಕ ಸಾಕ್ಷರತೆಯ ಗೈರುಹಾಜರಿಯಿಂದಾಗಿ ಸಾಂಸ್ಕೃತಿಕ ಅನಕ್ಷರತೆ ಹೆಚ್ಚುತ್ತಿದೆ.

ಈವತ್ತು ನಮ್ಮ ಜನರ, ಆದರಲ್ಲೂ ಯುವ ಜನರ ದೃಷ್ಟಿ 'ನಮ್ಮಲ್ಲೇನಿದೆ ಟೊಳ್ಳು; ಅಲ್ಲಿ ನೋಡಿ ಎಲ್ಲ ಗಟ್ಟಿ' ಎನ್ನುವಂತಿದೆ ಇದಕ್ಕೆ ಕಾರಣೇನು? ನಮ್ಮ ಸಂಸ್ಕೃತಿಯ ಶ್ರೇಷ್ಠತೆ ಮತ್ತು ಅನನ್ಯತೆಯನ್ನು ನಾವು ಅವರಿಗೆ ಸರಿಯಾದ ರೀತಿಯಲ್ಲಿ ತಿಳಿಸಿಲ್ಲ. ಅಥವ ತಿಳಿಸಿರುವಷ್ಟನ್ನೆ ಅವರು ಟೊಳ್ಳು ಎಂದುಕೊಳ್ಳುವಷ್ಟು ಜಾಳಾಗಿ ತಿಳಿಸಿದ್ದೇವೆ.

ನಮ್ಮಲ್ಲೇನಿದೆ ಎನ್ನುವುದರ ಅರಿವೇ ಇಲ್ಲದಾಗ, ನಮ್ಮಲ್ಲಿ ಏನೂ ಇಲ್ಲ ಅಂದುಕೊಳ್ಳುವುದು ಸಹಜ. ಮತ್ತು ಅಂಥ ವಾತಾವರಣದಲ್ಲಿ ಬೇರೆಯದು ಎಷ್ಟೇ ಕಳಪೆಯಾಗಿದ್ದರೂ ಅದೇ ಶ್ರೇಷ್ಠ, ಅದು ಬಿಟ್ಟರೆ ಬೇರಿಲ್ಲ ಎನ್ನುವಂತಾಗುವುದೂ

ಅಷ್ಟೆ ಸಹಜ. ನಮ್ಮ ದೇಶದ ಒಳ್ಳೆಯುದು ಲಭ್ಯವಿಲ್ಲದಂತಹ ವಾತಾವರಣದಲ್ಲಿ ಜನ ಅನ್ಯದೇಶಗಳಿಂದ ಏನೇ ಬಂದರೂ ಅದರ ನಾವಿನ್ಯಕ್ಕೆ ಮನ ಸೋತು ಅದನ್ನು ಅನುಕರಿಸುತ್ತಾರೆ. ನಮಲ್ಲಾಗುತ್ತಿರುವುದು ಇದೇ.

ಒಂದು ಜನವರ್ಗ ಇನ್ನೊಂದು ಜನವರ್ಗದಿಂದ ಬೇರೆಯಾಗಿದೆ ಎಂಬುದನ್ನು ತೋರಿಸಬಲ್ಲ ಶಕ್ತಿ ಸ್ವರೂಪವೇ ಸಂಸ್ಕೃತಿ–ಎಂಬ ಮಾತಿದೆ. ಸಂಸ್ಕೃತಿ ಒಂದು ಜನಾಂಗದ ಆತ್ಮವಿದ್ದಂತೆ. ಇದನ್ನು ಅರ್ಥಮಾಡಿಸುವ ಪ್ರಯತ್ನ ನಡೆದಿದೆಯೆ?

ಈಚೆಗೆ ಹೊರಗಿನ ಸಂಸ್ಕೃತಿ ನಮ್ಮದರೊಂದಿಗೆ ವಿಚಿತ್ರವಾಗಿ ಬೆರೆತುಕೊಂಡು ನಮ್ಮದರ ಆತ್ಮವನ್ನು ನಾವು ಹುಡುಕಬೇಕಾದಂತ ಹೀನ ಪರಿಸ್ಥಿತಿ ಉಂಟಾಗಿದೆ. ಬಹುಶಃ 'ಆತ್ಮ ಕುಸಿತ' ಎಂದು ಕರೆಯಬಹುದೇನೋ. ಇನ್ನೂ ತೀಕ್ಷ್ಣವಾಗಿ ಹೇಳುವುದಾದರೆ, ನಾವು ನಮ್ಮಗಳ ಆತ್ಮವನ್ನು ಹಾದಿಬೀದಿಯಲ್ಲಿ ಚೆಲ್ಲಿಬಿಟ್ಟಿದ್ದೇವೆ. ಯಾರಾದರೂ ಅದನ್ನು ತುಳಿದು ಮುಂದೆ ಹೋಗಬಹುದು; ಜಜ್ಜಿ ಮುಕ್ಕಾಗಿಸ ಬಹುದು. ನಮ್ಮದನ್ನು ತುಳಿದು ಅನ್ಯರದ್ದನ್ನು ಅಟ್ಟಕ್ಕೇರಿಸುವ ಪ್ರವೃತ್ತಿ ಎಲ್ಲೆಲ್ಲೂ ನಡೆದಿದೆ–ಶಿಕ್ಷಣ ಸಂಸ್ಥೆಗಳಲ್ಲಿ, ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ, ಎಲ್ಲೆಲ್ಲೂ.

ನಮ್ಮ ಕಲೆಗಳು, ಸಾಂಸ್ಕೃತಿಕ ಪರಂಪರೆಗಳು ಭವ್ಯ ದಿವ್ಯ ಎಂದು ಭಾಷಣ ಮಾಡುವುದರಿಂದ, ಅವುಗಳ ಬೆಲೆ ನಮ್ಮ ಜನಕ್ಕೆ ಗೊತ್ತಿಲ್ಲ ಎಂದು ರೋಧಿಸುವುದ ರಿಂದ ನಮ್ಮ ಸಂಸ್ಕೃತಿಯ ಬಗೆಗಿನ ಹೆಮ್ಮೆ ಬೆಳೆಯುವುದಿಲ್ಲ. ವೈಜ್ಞಾನಿಕ ವಿಧಾನಗಳ ಮೂಲಕ ನಮ್ಮ ಸಂಸ್ಕೃತಿಯ ಚೆಲುವನ್ನು ನಮ್ಮ ಜನ ಒಪ್ಪಿಕೊಳ್ಳುವಂತೆ ಮಾಡ ಬೇಕು. ಇದು ಮುಖ್ಯ ನಮ್ಮ ಶಾಲೆಗಳಲ್ಲಿ ಆಗಬೇಕು. ಚಿಕ್ಕಂದಿನಲ್ಲಿ ಕಲಿಸಿದ್ದೆ ಬೆಳೆದು ಬೇರೂರಲು ಸಾಧ್ಯ.

ಸಂಸ್ಕೃತಿಯೂ ಕಲಿಯುವಂತದ್ದು ಮತ್ತು ಕಲಿಸುವಂತದ್ದು. ಅದು ತಾನಾಗೆ ಬರುವುದಿಲ್ಲ. ನಾವು ಕಲಿಸಿದ ಸಂಸ್ಕೃತಿಯನ್ನು ನಮ್ಮ ಮಕ್ಕಳು ಕಲಿಯುತ್ತವೆ; ನಾವು ಅನುಸರಿಸುವ ಸಂಸ್ಕೃತಿಯನ್ನು ನಮ್ಮ ಮಕ್ಕಳು ಅನುಸರಿಸುತ್ತವೆ; ನಾವು ಗೌರವಿಸುವ ಸಂಸ್ಕೃತಿಯನ್ನು ನಮ್ಮ ಮಕ್ಕಳು ಗೌರವಿಸುತ್ತವೆ. ಕಲಿಸಬೇಕಾದ್ದನ್ನು ಶಾಲೆಯಲ್ಲಿ ಕಲಿಸದೆ ಮತ್ತೆಲ್ಲಿ ಕಲಿಸಬೇಕು? ಶಾಲೆಗಳು ಇರುವುದಾದರೂ ಯಾತಕ್ಕೆ? ಕಲಿಸಬೇಕಾದ್ದನ್ನು ಕಲಿಸಲಿಕ್ಕೆ ಅಲ್ಲವೆ?

ಮಕ್ಕಳು ಶಾಲೆಗಳಲ್ಲಿರುವಾಗಲೇ ಅವರಿಗೆ ನಮ್ಮ ಸಂಸ್ಕೃತಿಯ ಹಿರಿಮೆಗರಿಮೆ ಗಳನ್ನು ಅರ್ಥಮಾಡಿಸದಿದ್ದರೆ ಬೇರಾವುದೇ ಮಾಧ್ಯಮದ ಮೂಲಕ, ಎಷ್ಟೇ ಪ್ರಚಾರ ಮಾಡಿದರೂ, ಅವರು ಅವುಗಳನ್ನು ಮೆಚ್ಚುವುದು ಕಷ್ಟವಾಗುತ್ತದೆ. ನಮ್ಮ ಸಮೂಹ ಮಾಧ್ಯಮಗಳಿಗೆ ಒಂದು ಮಿತಿ ಇದೆ. ಅದು ರೇಡಿಯೋ, ದೂರದರ್ಶನ,

ಪತ್ರಿಕೆ–ಯಾವುದಾದರೂ ಆಗಬಹುದು. ಇವೆಲ್ಲ ಐಚ್ಛಿಕ ಮಾಧ್ಯಮಗಳು ಬೇಕೆಂದಾಗ ಅವುಗಳಿಗೆ ಬೆನ್ನು ತಿರುಗಿಸಬಹುದು. ಅತ್ಯಂತ ಪ್ರಭಾವ ಶಾಲಿ ಮಾಧ್ಯಮವೆಂದು ಪರಿಗಣಿಸಲಾಗಿರುವ ದೂರದರ್ಶನದಲ್ಲಿ ಬರುವ ಸಂಗೀತ ನೃತ್ಯ ಕಾರ್ಯಕ್ರಮವನ್ನು ಅವರು ನೋಡದೆ ಟಿ.ವಿ.ಯನ್ನು ಆರಿಸಿಬಿಡಬಹುದು ಅಥವಾ ಎದ್ದು ಹೋಗಬಹುದು ಹೀಗಾಗುವುದೇ ಹೆಚ್ಚು.

ನನ್ನ ಮಗನೊಬ್ಬನಿದ್ದಾನೆ. ಅವನಿಗೆ ಇಂದಿನ ಪೀಳಿಗೆಯ ಹೊಸ ಹಾಡು ಗಳೆಂದರೆ ಕ್ರೇಜ್. ಟಿ.ವಿ.ಯಲ್ಲಿ ಅಂಥ ಹಾಡು ಬರುತ್ತಿದ್ದಂತೆ ಮಹಡಿ ಮೇಲೆ ಓದುತ್ತಿದ್ದವನು ಮೂರೇ ನೆಗೆತಕ್ಕೆ ಕೆಳಗಿಳಿದು ಬಂದು ಟಿ.ವಿ. ಮುಂದೆ ಕೂರುತ್ತಾನೆ- ಈ ಲೋಕ ಮರೆತು ! ಅದೇ ಶಾಸ್ತ್ರೀಯ ಸಂಗೀತ ನೃತ್ಯ ಬರುತ್ತಿದ್ದಂತೆ ಅಷ್ಟೇ ನೆಗೆತಕ್ಕೆ ಹಾರಿ ಹೋಗುತ್ತಾನೆ. ಇಂಥ ಹುಡುಗರೇ ಹೆಚ್ಚು. ಅರ್ಥವಾಗದ್ದನ್ನು ಅವರು ಅರಗಿಸಿಕೊಳ್ಳುವುದಾದರೂ ಹೇಗೆ? ನಮಗೋ ಅವರಿಗೆ ಅರ್ಥ ಮಾಡಿಸುವ ಚೈತನ್ಯವಿಲ್ಲ. ಏಕೆಂದರೆ ನಾವು ಬೆಳೆದದ್ದೂ ಅವರಂತೆಯೆ !

ನಮ್ಮ ಮಕ್ಕಳು ನಮ್ಮ ಶಾಸ್ತ್ರ ಕಲೆಗಳನ್ನು ಮೆಚ್ಚಲು ಅದಕ್ಕೆ ಅಗತ್ಯವಾದ ಶಿಕ್ಷಣವನ್ನು ಶಿಷ್ಟರೀತಿಯಲ್ಲಿ ನೀಡಿ ಮೊದಲು ಅವರನ್ನು ಸಿದ್ಧಗೊಳಿಸಬೇಕು. ಆನಂತರ ಅವರನ್ನು ಕಾರ್ಯಕ್ರಮಗಳ ಮುಂದೆ ಕೂರಿಸಿದರೆ ಹೇಗೂ ಅವುಗಳನ್ನು ನೋಡಿ ಆನಂದಿಸಬಲ್ಲರು. ನಾವು ಸಂಸ್ಕೃತಿಯ ಅರಿವನ್ನು ಬೇರಿನಿಂದ ಪೋಷಿಸುವ ಕೆಲಸ ಮಾಡುತ್ತಿಲ್ಲ. ನೆತ್ತಿಯಿಂದ ಮಾಡಲು ಪ್ರಯತ್ನಿಸುತ್ತಿದ್ದೇವೆ, ಇದೊಂದು ವ್ಯರ್ಥ ಸಾಹಸವಷ್ಟೆ.

ನಮ್ಮ ಶಾಲೆಗಳು ನಮ್ಮ ಶಾಸ್ತ್ರ ಕಲೆಗಳನ್ನ ಬೇರೆಲ್ಲ ಶಾಸ್ತ್ರಗಳನ್ನು ಕಲಿಸು ವಂತೆಯೆ ಕಲಿಸಬೇಕು. ನಾವು ಯೂರೋಪಿಯನ್ ಹಿಸ್ಟರಿಯನ್ನು ಶಾಲೆಯಲ್ಲಿ ಕಲಿಯಬೇಕು ಎನ್ನುತ್ತೇವೆ. ಉರು ಹೊಡೆದಾದರೂ ಪರೀಕ್ಷೆಯಲ್ಲಿ ಬರೆಯಬೇಕು ಅನ್ನುತ್ತೇವೆ. ಆದರೆ ನಮ್ಮ ಸಂಗೀತವನ್ನ, ನಮ್ಮ ನೃತ್ಯವನ್ನ ನಮ್ಮ ಚಿತ್ರಕಲೆ ಯನ್ನ ಶಾಲೆಯ ಹೊರಗೆ, ಸ್ವಂತ ಆಸಕ್ತಿಯ ಮೇಲೆ ಹಣ ಖರ್ಚು ಮಾಡಿಕೊಂಡು ಬೇಕಾದರೆ ಕಲಿಯಬಹುದು ಎನ್ನುತ್ತೇವೆ. ನಮ್ಮ ಸಂಸ್ಕೃತಿಗೆ ಯೂರೋಪಿಯನ್ ಹಿಸ್ಟರಿಗೆ ಇರುವಷ್ಟು ಯೋಗ್ಯತೆಯೂ ಇಲ್ಲವೆ ?

ಭಾಷೆಗೆ ವ್ಯಾಕರಣ ಹೇಗೋ ಹಾಗೆ ಸಂಸ್ಕೃತಿಗೆ ನೃತ್ಯ, ಸಂಗೀತ, ಚಿತ್ರಕಲೆ ಇತ್ಯಾದಿ ಅವುಗಳನ್ನು ಸೂಕ್ತ ಜಾಗದಲ್ಲಿ ಸೂಕ್ತ ರೀತಿಯಲ್ಲಿ ಸೇರಿಸಬೇಕು–ಭಾಷಾ ಅಧ್ಯಯನದಲ್ಲಾಗಬಹುದು. ಮತ್ತಿದು ಪರೀಕ್ಷಾ ವಿಷಯವೂ ಆಗಿರಬೇಕು.

ನಮ್ಮ ಶಾಸ್ತ್ರ ಕಲೆಗಳ ಎಲ್ಲ ಸೂಕ್ಷ್ಮಗಳನ್ನು ವೈಜ್ಞಾನಿಕವಾಗಿ, ಕ್ರಮಬದ್ಧವಾಗಿ ಮತ್ತು ಹಂತ ಹಂತವಾಗಿ ಹೇಳಿಕೊಡಬೇಕು. ಸಂಗೀತವೊಂದನ್ನು ಕೇಳಿದಾಗ ಅದರಲ್ಲಿ ರಾಗತಾಳಗಳನ್ನು ಗುರುತಿಸುವಷ್ಟಾದರೂ ಪ್ರಾಥಮಿಕ ಜ್ಞಾನ ಎಲ್ಲರಲ್ಲೂ ಉಂಟಾಗುವಂತೆ ಮಾಡಬೇಕು. ಎಲ್ಲರೂ ಭೀಮಸೇನ ಜೋಷಿಯವರಂತೆ ಹಾಡಲು ಸಾಧ್ಯವಿಲ್ಲವಾದರೂ ಅವರ ಹಾಡುಗಾರಿಕೆಯನ್ನು ಕೇಳಿ ಆನಂದಿಸುವಷ್ಟಾದರೂ ಸಂಗೀತ ಜ್ಞಾನವನ್ನು ಬೆಳೆಸಿಕೊಳ್ಳುವಂತೆ ಮಾಡಬೇಕು.

ಇದನ್ನು ಹೇಳಿ ಕೊಡುವುದು ಹೇಗೆ? ಹೇಳಿ ಕೊಡುವವರು ಯಾರು?

ಶಾಸ್ತ್ರ ಕಲೆಗಳು ವಿಜ್ಞಾನ ಇದ್ದಂತೆ ಅವುಗಳಿಗೆ ತಮ್ಮದೇ ಆದ ಪರಿಭಾಷೆ ಇದೆ. ಅದರಲ್ಲಿ ಪರಿಣತಿ ಇದ್ದವರಿಗೆ ಮಾತ್ರ ಅದು ಅರ್ಥವಾಗುತ್ತದೆ ಮತ್ತು ಅದು ಅವರಿಗಾಗಿ ಮಾತ್ರ ಇದೆ ಎಂಬ ಮಾತುಗಳು ಇವೆ–ವಿಜ್ಞಾನದಲ್ಲಿ ಮೊದಲಿನಂತೆ ವಿಜ್ಞಾನಿಗಳಾಗಿ ವಿಜ್ಞಾನ ಎಂಬಂತೆ ಆದರೆ ಈಗ ಪರಿಸ್ಥಿತಿ ಬದಲಾಗುತ್ತಿದೆ. ವಿಜ್ಞಾನವನ್ನು ಮುಖ್ಯ ವಿಷಯವಾಗಿ ಓದದ ಜನಸಾಮಾನ್ಯರೂ ಓದಿ ಅರ್ಥಮಾಡಿಕೊಳ್ಳಲು ಸಾಧ್ಯವಿರುವಂತೆ ಸರಳ ಶೈಲಿಯಲ್ಲಿ ವೈಜ್ಞಾನಿಕ ಲೇಖನಗಳನ್ನು ಬರೆದು ಜನಪ್ರಿಯಗೊಳಿಸುವ ಕೆಲಸ ನಡೆಯುತ್ತಿದೆ. ಇದೇ ರೀತಿಯಾಗಿ ನಮ್ಮ ಶಾಸ್ತ್ರ ಕಲೆಗಳ ಪ್ರಾಥಮಿಕ ಪಾಠಗಳನ್ನು ಯಾರು ಬೇಕಾದರೂ ಓದಿ ತಿಳಿದುಕೊಳ್ಳಬಹುದಾದಂತ ರೀತಿಯಲ್ಲಿ ಪಾಠಗಳನ್ನು ಪ್ರಚುರಪಡಿಸಬೇಕು. ಉದಾ: ರಾಗ ತಾಳಗಳಲ್ಲಿ ಎಷ್ಟು ವಿಧ ? ಅವುಗಳ ನಡುವಿನ ವ್ಯತ್ಯಾಸವೇನು ? ಅಡವುಗಳೆಂದರೇನು ? ಜಾವಳಿ ಗಳೆಂದರೇನು ? ಪ್ರಸಿದ್ಧ ವಿದ್ವಾಂಸರ ಬದುಕು ಸಾಧನೆ ಏನು ಇತ್ಯಾದಿ. ಅಗತ್ಯ ಬಿದ್ದಲ್ಲಿ ರಾಗ ತಾಳ ಸೂಕ್ಷ್ಮಗಳನ್ನು ತಿಳಿಸಲು ಧ್ವನಿಸುರಳಿಗಳನ್ನು ಬಳಸಬೇಕು. ಇದು ಎಲ್ಲ ಶಾಸ್ತ್ರ ಕಲೆಗಳಲ್ಲೂ ಆಗಬೇಕು.

ಶಿಕ್ಷಕರಿಗೆ ವಿವಿಧ ವಿಷಯಗಳಲ್ಲಿ ತರಬೇತಿ ಶಿಬಿರ ನಡೆಯುವಂತೆ ಶಾಸ್ತ್ರ ಕಲೆಗಳಿಗೆ ಸಂಬಂಧಪಟ್ಟ ಶಿಬಿರಗಳನ್ನು ನಡೆಸಿ ಪ್ರಾಥಮಿಕ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಕಲಿಸಲು ಸಮರ್ಥರಾಗುವಂತೆ ಅವರನ್ನು ತಯಾರು ಮಾಡಬೇಕು. ಇಂಗ್ಲಿಷ್ ಪಠ್ಯದಲ್ಲಿ ಬರುವ 'ಸ್ಯಾಟಲೈಟ್' ಅಥವ ಕನ್ನಡ ಪಠ್ಯದಲ್ಲಿ ಬರುವ 'ಅಣು ಚಳಿಗಾಲ' ಕುರಿತಾದ ಜನಪ್ರಿಯ ವಿಜ್ಞಾನ ಪಾಠಗಳನ್ನು ಮಾಡಲು ಭೌತವಿಜ್ಞಾನದ ಉಪನ್ಯಾಸಕರೇನು ಹೋಗುವುದಿಲ್ಲ. ಆಯಾ ಭಾಷಾ ಶಿಕ್ಷಕರೇ ಅದರಲ್ಲಿ ಬರುವ ವಿಜ್ಞಾನದ ಅಂಶಗಳನ್ನು ತಿಳಿದುಕೊಂಡು ಪಾಠ ಮಾಡುತ್ತಾರೆ. ಹಾಗೆಯೆ ಭಾಷಾ ಶಿಕ್ಷಕರೇ ಭಾಷಾ ಪಠ್ಯದ ಒಂದು ಭಾಗವಾಗಿ ಸೇರಿಸಿದ–ಕಥೆ, ಕವನ, ಪ್ರಬಂಧ ಇತ್ಯಾದಿಗಳಂತೆ ಶಾಸ್ತ್ರ ಕಲೆಗಳನ್ನು ಕುರಿತಾದ ಪಾಠಗಳನ್ನು ಮಾಡಬಹುದು. ಮತ್ತಿದನ್ನು ಪರೀಕ್ಷಾ ವಿಷಯವಾಗಿ ಅದರಲ್ಲಿ ಸೇರಿಸುವುದರಿಂದ ವಿದ್ಯಾರ್ಥಿಗಳು ಅಷ್ಟಿಷ್ಟು ಕಲಿಯಲೇ ಬೇಕಾಗುತ್ತದೆ.

ಜೊತೆ ಜೊತೆಗೆ ಎಲ್ಲ ಶಾಸ್ತ್ರಕಲೆಗಳ ಸರಳ ರೂಪಗಳನ್ನು ಪ್ರಚಾರಕ್ಕೆ ತಂದು ಅವು ಜನರಿಗೆ ಹೆಚ್ಚು ಹತ್ತಿರವಾಗುವಂತೆ ಮಾಡಬೇಕು. ಜನರು ತಾವೇ ಸುಲಭವಾಗಿ ಅನುಕರಿಸಿ ಆಗೀಗ ಸಭೆ ಸಮಾರಂಭಗಳಲ್ಲಿ ಪ್ರದರ್ಶಿಸುವಂತಿರಬೇಕು. ಉದಾ: ಎಲ್ಲರೂ ಮಾಡಬಹುದಾದ ಸರಳ ಹೆಜ್ಜೆಗಳು, ಎಲ್ಲರೂ ಸುಲಭವಾಗಿ ನುಡಿಸಬಹುದಾದ ಕೆಲವು ಮಟ್ಟುಗಳು ಇತ್ಯಾದಿ. ಜನರಿಗೆ ಪ್ರಿಯವಾಗದ್ದು, ಅವರ ಮಧ್ಯೆ ಬಾಳದ್ದು, ಆತ್ಮೀಯವಾಗದ್ದು ಮತ್ತು ದಕ್ಕದ್ದು ಯಾವುದೂ ಬಾಳಲಾರದು. ಆಟೋ ರೊಥೆಲ್ಡ್ ಹೇಳುವಂತೆ: "For every art the great safegaurd and vivifying influence is a popular practice of its easier forms". ಪ್ರತಿಯೊಂದು ಕಲೆಗೂ ಅತಿದೊಡ್ಡ ರಕ್ಷಣೆ ಮತ್ತು ಚೈತನ್ಯದಾಯಿ ಪ್ರಭಾವವೆಂದರೆ ಅದರ ಸುಲಭ ರೂಪಗಳ ಜನಪ್ರಿಯ ಆಚರಣೆ.

‘ ಋತು ಪರ್ವ ’

ಟಿ. ಯಲ್ಲಪ್ಪ

ಮಾಗಿಯಲಿ ಮೈಯ
ನರನರವೆಲ್ಲ ಬಿರಿಸಿ
ಉಪ್ಪು ಕಾರವ ಸುರಿಸಿ ಉರಿಸಿದವಳೆ
ವಸಂತದಲ್ಲಿ ಚಿಗುರ ತೇರನಿರಿಸಿ
ಮುಗಿಲುದ್ದ ಉರಿಯ ಭಾವುಟವ ಬೀಸಿದವಳೆ

ಶ್ರಾವಣಕೆ ಜರತಾರಿ ಸೀರೆಯುಡಿಸಿ
ಸಿಂಗರಿಸಿ ಮಾರಗಿಡದ ನರ ನರದ
ತುಂಬೆಲ್ಲ ಹೂನಗೆಯ ಹೊಸ ರವಿಕೆ ತೊಡಿಸಿ
‘ಸೀಮಂತ ಗಾನವ’ ಹಾಡಿದವಳೆ

ಹೇಮಂತದಲಿ...
ನಗುವ ಧೀಮಂತ ದಿಟ್ಟ
ಬೆಳ್ನಗೆ ಗಡಲಿಗೆ ಹೆಪ್ಪಿಕ್ಕಿ
ಬಿಳಿಮಣಿ ಮುಕುಟ ಮಾಲೆಯನು
ಎದೆಗೆ ಸಿಂಗರಿಸಿ
ಕುಳಿರು ಗಾಲದಲಿ ಚಳಿಯ
ಮುಹುರ್ ಮುಹುರ್ ಗೈಸಿ
ಕೋಗಿಲೆಯ ಕಂಠಕೂ ನಡುಕ ಬರಿಸಿದದಳೆ

ಆಷಾಡದಲಿ...
ಅಂಗಾಂಗ ಕತ್ತರಿಸಿ ಕಿತ್ತೆಸೆದರೂ
ಕೂಡಿಕೆಗಾರೈಸು ವಧೂವರರ ಅಗಲಿಸಿ
ಹೃದಯ ವಿದ್ರಾವಕ ನಗೆಯ
ನೀಲಿ ನೌಕೆಯ ನಡೆಸಿ
ಶ್ರಾವಣದ ಜೀವ ಸಂಗಮಕೆ
ನೀಲಾಕಾಶದ ಬಾಳ ಬಾನಿನಲಿ

ಮಧುಚಂದ್ರನ ಕರೆಸಿ
ನಕ್ಷತ್ರ ದೀಪ–ಧೂಪಗಳ ಧೂಮಲೀಲೆಯಲಿ
ಆರತಕ್ಷತೆ ನಡೆಸಿದವಳೆ
ಚಂದ್ರಮಂಚಕ್ಕೆ ಕರೆದು ವಧೂವರರ
ಬಾನು ಭೂಮಿಗಳ ಸುರತಕ್ಕೆ
ಶ್ರಾವಣದ ಹಸಿರ ನಿಶಾನೆ ಬೀಸಿದವಳೆ

ಹಕ್ಕಿಗಿಲಕಿಯ ಹಿಡಿಸಿ
"ಬೋಳುಬಾಳನು ಸಗಿಸಿ"
ಗರ್ಭಗುಡಿಯಲ್ಲಿ ವಂಶಜ್ಯೋತಿಯ ಬೆಳಗಿಸಿ
ಮುಗಿಲಿನೆದೆಯಿಂದ
ಹಾಲ ಮಳೆಯನ್ನು ಸುರಿಸಿದವಳೆ

ಓ ಮಾಯಿ, ಭೂತಾಯಿ
ಬತ್ತದಿರಲಿ ನಿನ್ನೊಡಲ ಭತ್ತದ ಗದ್ದೆ
ಹಸಿರು ಪೈರು ಪಚ್ಚೆ

ಕಾಮ್ಯುನ 'ತಪ್ಪಿದ ಎಳೆ' ಒಂದು ವಿವೇಚನೆ

ಬಿ. ಸಿ. ರಾಜಕುಮಾರ್

ಅಸಂಗತವಾದದ ಪ್ರವರ್ತಕನೆಂದೆ ಹೆಸರಾದ ಕಾಮ್ಯುನ ಈ 'ತಪ್ಪಿದ ಎಳೆ' ನಾಟಕವು ಬದುಕಿನ ಬಗೆಗಿನ ಅವನ ತಾತ್ವಿಕ ನಿಲುವನ್ನು ಮುಂಡಿಸುವ ನಾಟಕವಾಗಿದೆ, ನಂಬಿಕೆ ಮತ್ತು ಆಶಾಭಾವನೆಗಳಿಂದ ಚ್ಯುತಿಗೊಂಡ ಈ ಆಧುನಿಕ ಜಗತ್ತಿನಲ್ಲಿ ಮನುಷ್ಯನ ಅಸ್ತಿತ್ವ ನಿರರ್ಥಕವಾದದ್ದು ಎಂಬ ವಿಚಾರವನ್ನು ಎತ್ತಿ ಹಿಡಿಯುವ ನಾಟಕವಾಗಿದೆ.

ಅಸಂಗತ ನಾಟಕಗಳು ವಸ್ತು ರೂಪಕ್ಕೆ ಸಂಬಂಧಿಸಿದ್ದು ಪಾರಂಪರಿಕ ನಾಟಕ ತಂತ್ರಕ್ಕಿಂತ ಭಿನ್ನವಾದವಾಗಿವೆ. ಆಧುನಿಕ ಅಸಂಗತ ನಾಟಕಕಾರರು ಕಾಮ್ಯು ಸಾರ್ತ್ರರನ ನಾಟಕಗಳನ್ನು ಅಸಂಗತ ನಾಟಕಗಳೆಂದು ಪರಿಗಣಿಸಲು ಸಿದ್ಧರಿಲ್ಲ, ಏಕೆಂದರೆ ಹೊಸ ವಿಚಾರಗಳನ್ನು ಹಳೆಯ ಅಚ್ಚಿನಲ್ಲಿ ನಿರೂಪಿಸುತ್ತಾರೆಂದು. ಆಧುನಿಕ ಅಸಂಗತ ನಾಟಕಗಳ ಲಕ್ಷಣಗಳನ್ನು ಕಾಮ್ಯುನ ಈ ನಾಟಕದ ಬೆಳಕಿನಲ್ಲಿ (ಮುಂದೆ) ಪರಿಶೀಲಿಸಿದಾಗ ಅದರ ಸತ್ಯಾಸತ್ಯತೆಯು ವೇದ್ಯವಾಗುತ್ತದೆ.

ಆಧುನಿಕ ಅಸಂಗತ ನಾಟಕಗಳಲ್ಲಿ ಅಂಥ ಗಟ್ಟಿಮುಟ್ಟಾದ ವಸ್ತುವಾಗಲಿ, ಕೆಲವು ಬಾರಿ ಗುರುತಿಸುವಂಥ ಪಾತ್ರವಾಗಲಿ, ಸಾಮಾಜಿಕ ಉದ್ದೇಶವಾಗಲಿ ಅಥವಾ ತಾತ್ವಿಕ ನಿಲುವಾಗಲಿ ಆದಿ ಅಂತ್ಯವಾಗಲಿ, ಪಾತ್ರಗಳ ಹೋರಾಟವಾಗಲಿ ಕಂಡುಬರುವುದಿಲ್ಲ. ಆದರೆ ಕಾಮ್ಯು ಸಾರ್ತ್ರ್‌ನ ನಾಟಕಗಳು ಮೇಲಿನ ಯಾವ ಲಕ್ಷಣವನ್ನು ಹೊಂದಿದವುಗಳಾಗಿರದೆ ಅವಕ್ಕೆ ವಿರುದ್ಧವಾದ ಲಕ್ಷಣವನ್ನೇ ಹೊಂದಿರುವುದನ್ನು ಕಾಣಬಹುದು. ಕಾಮ್ಯುನ ಈ ನಾಟಕದಲ್ಲಿ ಸಹ ಆಧುನಿಕ ಅಸಂಗತ ನಾಟಕಕ್ಕಿಂತ ಭಿನ್ನವಾದ ಲಕ್ಷಣವನ್ನು ಕಾಣಬಹುದು.

'ತಪ್ಪಿದ ಎಳೆ' ನಾಟಕದಲ್ಲಿ ನಾಗರಿಕ ಬದುಕಿನ ಕ್ರೌರ್ಯವನ್ನು ಯಾಂತ್ರಿಕ ನಗ್ನತೆಯನ್ನು ಹಾಗೂ ಮನುಷ್ಯನ ಬಾಳಿನ ನಿರರ್ಥಕತೆಯನ್ನು ಪ್ರಕಟಿಸುತ್ತದೆ. ಮಾರ್ಥಾಳ ಕ್ರೌರ್ಯ ಮರಿಯಾಳ ಅನುರಾಗ ಪಿಯಾನನ ಪ್ರೇಮಗಳೆಲ್ಲ ನಿರರ್ಥಕವಾದವು ಎಂಬುದು ವೇದ್ಯವಾಗುತ್ತದೆ. ಈ ನಾಟಕದಲ್ಲಿ ವ್ಯವಹರಿಸುವ ಪ್ರಮುಖ ಪಾತ್ರಗಳು ನಾಲ್ಕು. ಪರಿಸರದ ಕ್ರೌರ್ಯವೇ ಮೂರ್ತಿ ರೂಪಗೊಂಡ ಮಾರ್ಥಾ, ಅವಳ ಈ ಕ್ರೌರ್ಯವನ್ನು ಪೋಷಿಸುವ ಅವಳ ತಾಯಿ ಕಳೆದುಕೊಂಡ ವಾತ್ಸಲ್ಯವನ್ನು

ಮರಳಿಗಳಿಸಲು ಪಡುವ ತವಕ, ಒಟ್ಟಾರೆ ಈ ನಾಟಕವು ಒಂದು ಕುಟುಂಬದ ವ್ಯಾಪ್ತಿಯಲ್ಲಿ ಜಾಗತಿಕ ವಿಚಾರಗಳನ್ನು ಮಂಡಿಸುತ್ತದೆ. ಸ್ವಾರ್ಥ ಕ್ರೌರ್ಯಗಳ ನಡುವಿನ ಭೀಕರ ಹೋರಾಟದಲ್ಲಿ ಮಾನವ ಬದುಕಿಗೆ ಯಾವುದೇ ಬೆಲೆಯಿಲ್ಲ ಎಂಬುದನ್ನು ಗಮನಿಸಬಹುದು.

ಬಾಲ್ಯದಲ್ಲಿಯೆ ತನ್ನ ಕುಟುಂಬ ತ್ಯಜಿಸಿ ಸಂಪತ್ತನ್ನು ಆರ್ಜಿಸಲು ನಿರ್ಗಮಿಸಿದ ಐಯಾನ್ ಈಗ ಸಂಪತ್ತಿನೊಂದಿಗೆ ಹೆಂಡತಿ ಮಕ್ಕಳೊಂದಿಗೆ ಹಿಂದಿರುಗಿ ತನ್ನ ತಾಯಿ ಸಹೋದರಿಯ ವಾತ್ಸಲ್ಯವನ್ನು ಗಳಿಸಲು ಬಯಸಿ ವಾಮ ಮಾರ್ಗವನ್ನು ಅನುಸರಿಸಿ ತನ್ನ ಭಾವನೆಗಳಿಗೆ ಬಲಿಯಾಗುತ್ತಾನೆ.

ಐಯಾನ್ ತನ್ನ ಪತನಕ್ಕೆ ಕಾರಣನಾಗಿದ್ದಾನೆ ಎಂಬ ವಿಚಾರ ಎರಡು ರೀತಿಯಲ್ಲಿ ಬಿಂಬಿತವಾಗುತ್ತದೆ. ತನ್ನ ಸಂಬಂಧವನ್ನು ತಿಳಿಸದೆ ತನ್ನ ತಾಯಿ ಸಹೋದರಿಯ ಅಗತ್ಯವನ್ನು ಗಮನಿಸಿ ಅವರಿಗೆ ನೆರವಾಗಬೇಕೆಂಬ ಉದ್ದೇಶದಿಂದ ಆ ದಿಕ್ಕಿನಲ್ಲಿ ಕಾರ್ಯ ಪ್ರವೃತ್ತನಾಗುವ ಐಯಾನ್ ಮಾರ್ಥಳ ಸ್ವಾರ್ಥಪೂರಿತ ಕ್ರೌರ್ಯಕ್ಕೆ ಬಲಿಯಾಗುತ್ತಾನೆ. ಹಾಗೆಯೆ ಮಾರ್ಥಾಳ ಕಲ್ಲು ಹೃದಯದಲ್ಲಿ ಪ್ರೇಮ ವಾತ್ಸಲ್ಯದ ಕಾರಂಜಿಯನ್ನು ಹುಟ್ಟಿ ಹಾಕಲು ಬಯಸಿದ್ದು ಅವನ ಪತನಕ್ಕೆ ಕಾರಣವಾಗುತ್ತದೆ. "ನನ್ನ ಮನಸ್ಸು ಒಂದು ನೆಲೆಗೆ ಬಂದದ್ದು ಅವನಿಂದಲೆ......ನಾನು ಯಾವಾಗ್ಲೂ ಎಲ್ಲಿಗೆ ಹೋಗಬೇಕು ಅಂತ ಹಂಬಲಿಸ್ತಾ ಇದ್ನೋ ಆ ದೇಶಗಳ ಬಗೆಗೆ ಮಾತಾಡಿ ಮಾತಾಡಿ ನನ್ನ ಬಯಕೆಗಳನ್ನು ಎಬ್ಬಿಸಿ ನನ್ನದೇನ ಕಲ್ಲು ಮಾಡಿದ: ಎಂಬ ಮಾರ್ಥಾಳ ಮಾತಿನಲ್ಲಿ ಅವನ ಪತನದ ಕಾರಣ ಹಾಗೂ ಪರಿವರ್ತಿಸಲಾಗದ ಮಾರ್ಥಾಳ ಕಲ್ಲು ಹೃದಯ ಎದ್ದು ಕಾಣುತ್ತವೆ.

ಪರಿಸರದ ಕ್ರೌರ್ಯವೇ ಮೂರ್ತ ರೂಪ ತಾಳಿದ ಮಾರ್ಥಾ ಇಲ್ಲಿನ ಓದುಗರ ಹೃದಯವನ್ನು ತಲ್ಲಣಗೊಳಿಸುವಂಥ ಮಹತ್ವ ಪೂರ್ಣ ಪಾತ್ರ. "ಮಧ್ಯ ಯೂರೋಪಿನ ಈ ಸಣ್ಣ ಜಾಗದಲ್ಲಿ ಎರಡು ವರ್ಷ ಒಂದಾದ ಮೇಲೊಂದು ಉರುಳಿ ಹೋಗಿ ಈ ಮನೆ ಮ್ಯದುತ್ತಾನೆಲ್ಲಾ ಕೊಚ್ಚಿಕೊಂಡು ಹೋಗಿದೆ ಸ್ನೇಹ ಬೆಳೆಸಿ ಕೊಳ್ಳಬೇಕು ಅನ್ನೋ ಆಸೇನೆ ಇಲ್ಲಿ ಕಮರಿ ಹೋಗಿದೆ; ಎಂಬ ಮಾತು ಮಾರ್ಥಾ ಪರಿಸರದ ಸಂಬಂಧವನ್ನು ಕುರಿತ ಪ್ರಶ್ನೆಯಾಗಿವೆ, ಮಾರ್ಥಾಳಿಗೆ ಈ ಪ್ರದೇಶದ ದುಃಖದ ನೋವಿನ ಕ್ರೌರ್ಯ ತುಂಬಿದ ಪ್ರದೇಶವಾಗಿದೆ ಇಲ್ಲಿನ ಅವಳ ಒಂಟಿತನ ಅಸಹನೀಯವಾಗಿ ಪರಿನಿಮಿಸಿದೆ. ಇವನ್ನು ನಿವಾರಿಸಲು ಹಾಗೂ ಸಮುದ್ರ ತೀರದಲ್ಲಿ ಸುಖವಾಗಿ ಕಾಲಕಳೆಯಲು ಕೊಲೆಗಡುಕತನದಂಥ ಅನೈತಿಕ ಅಪಮಾರ್ಗದ ಈಕೆ ಸಂಪತ್ತನ್ನು ಗಳಿಸಲು ಮುಂದಾಗುತ್ತಾಳೆ ತನ್ನ ಆಸೆಯ ಪೂರೈಕೆಯ ಕೊನೆಯ ಬಲಿ ತನ್ನ ಸಹೋದರನೇ ಆದಾಗ ಅವಳ ದುರಾದೃಷ್ಟ ಪ್ರಾರಂಭವಾಗಿ ಅವಳ

ಮರಣದವರೆಗೂ ಬೆನ್ನುಹತ್ತುತ್ತದೆ. ಮಾರ್ಥಾ ತನ್ನ ನಂಬಿಕೆಗಳಿಗಾಗಿ ಬದುಕಿದವಳು ಅದನ್ನು ಸಾಧಿಸಿಕೊಳ್ಳಲು ಯಾವ ವಿಚಾರಕ್ಕೂ ಗಮನಕೊಡದೆ ಬಿರುಗಾಳಿಯಂತೆ ಮುನ್ನುಗ್ಗಿದವಳು, 'ನಂಗೆ ಇಪ್ಪತ್ತು ವರ್ಷವಾಗಿದ್ದಾಗ ಏನೇನು ಹುಚ್ಚು ಆಸೆಗಳಿದ್ದವೋ ಅವಿನ್ನೂ ನನ್ನ ಎದೇಲಿ ಮಿಡೀತಾ ಇವೆ'. ಎಂಬ ಮಾತನ್ನು ಗಮನಿಸಬಹುದು ಅವಳು ಯಾವ ಭಾವನಾತ್ಮಕ ಸಂಬಂಧಗಳಿಗೂ ವ್ಯವಸ್ಥೆಗೂ ಬೆಲೆಯಿಲ್ಲ, 'ನೀವು ಮಾನವೀಯ ಭಾವನೆ ಅಂತಿರೋ ಅವ್ರ ನನ್ನಲ್ಲಿ ಅಂಥ ಮೆಚ್ಚೋ ಭಾಗ ಏನಲ್ಲ ನನ್ನಲ್ಲಿ ಮಾನವೀಯ ವಾಗಿರೋದು ನನ್ನ ಆಸೆಗಳು ಮಾತ್ರ'. ಈ ಆಸೆ ಪೂರೈಕೆಗಾಗಿ ನನ್ನ ದಾರೀಲಿ ಬರೋ ಎಲ್ಲ ಅಡಚಣೇನೂ ಹೊಸಕಿ ಹಾಕ್ತೀನಿ ಎಂಬ ಅವಳ ಮಾತಿನಲ್ಲಿ ಬಯಕೆಯ ತೀವ್ರತೆ ವ್ಯಕ್ತವಾಗುತ್ತದೆ.

ಆದರೆ ತನ್ನ ಸಹೋದರ ತನ್ನ ಬಯಕೆಗಾಗಿ ಬಲಿಯಾದಾಗಲೂ ಯಾವುದೇ ಪ್ರತಿಕ್ರಿಯೆ ಇಲ್ಲದ ಮಾರ್ಥಾ ತನ್ನ ತಾಯಿ ತ್ಯಜಿಸಿ ಹೋದಾಗ ಅವಳಿಗೆ ಒಂಟಿತನದ ಭೀಕರತೆಯ ಪರಿಚಯ ಮತ್ತೊಮ್ಮೆ ಆಗುತ್ತದೆ. ಅಸಹಾಯಕತೆ ಹಾಗೂ ಒಂಟಿತನ ಗಳಿಂದ ತತ್ತರಿಸುತ್ತಾಳೆ. ಕಡೆಗೆ ನನಗೆ ಬರಬೇಕಾದ್ದು ಬಂದಾಗ ಒಬ್ಬ ಮನುಷ್ಯ ಸತ್ತ ಎನ್ನೋ ಕಾರಣಕ್ಕಾಗಿ ನೀನು ನನ್ನನ್ನು ಬಿಟ್ಟು ಹೋಗೋಕಾಗೊಲ್ಲ ಹೋಗ ಬಾರದು" ಎಂಬ ಅವಳ ಮಾತಿನಲ್ಲಿ ಹುಚ್ಚು ತುಡಿತದ ದಾವಾನಿಲ ಪರಿಚಯವಾಗು ತ್ತದೆ. ಸೋದರನ ಸಾವಿಗೆ ಕಿಂಚಿತ್ತೂ ದುಃಖಿಸದ ಅವಳನ್ನು ಕಂಡು ನಮ್ಮ ಮನ ವ್ಯಗ್ರವಾಗುತ್ತದೆ. ನಾನು ಅವನ ಗುರುತು ಹಿಡಿದಿದ್ರೂ ಏನೂ ವ್ಯತ್ಯಾಸವಾಗ್ತಾ ಇರಲಿಲ್ಲ ಅಂತ ಈಗ ನಂಗೊತ್ತು" ಎಂಬ ಮಾತು ಅವಳ ಮನಸ್ಸನ್ನು ತೆರೆದಿಡುತ್ತದೆ. ನನ್ನನ್ನೆತ್ತಿ ತುಂಬ ದೂರ ಕರೆದುಕೊಂಡು ಹೋಗೋ ಈ ಮಹಾ ಅಲೆಗೆ ಇಡೀ ಜೀವಮಾನ ಕಾಯ್ತಾ ಇದ್ದೆ ನಂಗೊತ್ತು ಅದಿನ್ನೆಂದೂ ಬರೋಲ್ಲ" ಎಂಬ ಎಲ್ಲ ಕಳೆದು ಕೊಂಡ ನಿರಾಶೆಯ ನೊಂದ ನುಡಿಯನಂತರ "ನಮಗೆ ಮೋಸವಾಗಿದೆ ಮೋಸ ನಮ್ಮಲ್ಲಿ ಹುಚ್ಚೆದ್ದು ಕುಣಿಯೋ ಬಯಕೆಗಳು ನಮ್ಮ ಕರುಳು ಹಿಂಡಿ ಹಾಕೋ ಆಸೆ ಗಳು ಏನೂ ಅರ್ಥವಿಲ್ಲದ್ದು" ಎಂದು ಚೀತ್ಕಾರಗೈಯ್ಯುತ್ತಾಳೆ. ಅವಳಿಗೆ ಅಂತಿಮ ಜೀವ ಸಾಕ್ಷಾತ್ಕಾರದ ಅರಿವಾಗುತ್ತದೆ.

ಸಾಮಾನ್ಯ ವ್ಯಕ್ತಿಗಳಿಗೆ ಮಾರ್ಥಾ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲದ ರೀತಿ ಯಲ್ಲಿ ಬೆಳೆದು ನಿಂತಿದ್ದಾಳೆ. ಮಾರ್ಥಾಳ ಸರಳ ಸಹಜವೆನಿಸುವ ವಿಚಾರಗಳು ಸಾಮಾನ್ಯ ಮನುಷ್ಯನನ್ನು ಪ್ರತಿನಿಧಿಸುವ ಮೌರ್‍ಯಗಳಿಗೆ ಆಘಾತಕಾರಿ ಹಾಗೂ ವಿಚಿತ್ರ ವಾಗಿ ಕಾಣುತ್ತವೆ. "ಮೊದಲು ಅವರ್ನ ನೋಡ್ತೋಕೆ ಬಿಡು ಆಮೇಲೆ ಈ ಊಹೆಗೂ ಮೀರಿದ ಈ ಸಂಗತೀನ ನಂಬೋಣ"–ಎಂಬ ಮೌರ್‍ಯಳ ನುಡಿ ಅವಳ ಕ್ರೌರ್ಯದಿಂದ ತತ್ತರಿಸಿ ಹೋದ ಮೌರ್‍ಯ "ಮಾರ್ಥಾ ನಿನ್ನ ಬಗೆಗೆ ನನಗೆ ಮರುಕವೂ ಇಲ್ಲ ದ್ವೇಷವೂ ಇಲ್ಲ. ಪ್ರೀತಿಸೋ ದ್ವೇಷಿಸೋ ಶಕ್ತೀನೆ ನಾನು ಕಳೆದುಕೊಂಡುಬಿಟ್ಟಿದ್ದೀನಿ. ನನ್ನ ದುರಂತ ನನ್ನ ಪಾಲಿಗೆ ಭಾರೀ ಆಯ್ತು" ಎನ್ನುತ್ತಾಳೆ.

ಮಾರ್ಥಾಳಿಗೆ ದುಃಖ ಸಂತೋಷ ಅರ್ಥವೇ ಇಲ್ಲದ ಶಬ್ದಗಳಾದರೆ ಅಪರಾಧ ಶಿಕ್ಷೆ ಇಂಥ ಮಾತುಗಳು ಹೇಸಿಗೆ ಎನಿಸುತ್ತವೆ. ಮೌರ್‍ಯಳ ಕಣ್ಣೀರು ಅವಳಿಗೆ ಶಾಂತಿಯನ್ನು ತರಿಸುತ್ತವೆ.

ಮಾರ್ಥಾ ತನ್ನ ತೀವ್ರ ಬಯಕೆಯ ವೈಫಲ್ಯದ ಕಾರಣದಿಂದ ಘೋರ ದುರಂತವನ್ನಪ್ಪುತ್ತಾಳೆ. ಅವಳ ಕ್ರೌರ್ಯಕ್ಕೆ ಈ ದುರಂತ ಅನಿವಾರ್ಯ ಎನಿಸುತ್ತದಾದರೂ ಅವಳನ್ನು ಅರ್ಥೈಸಿಕೊಂಡಿರುವ ಓದುಗನಿಗೆ ಅವಳ ಬಗೆಗೆ ಕನಿಕರ ಮೂಡುತ್ತದೆ.

ತೀವ್ರ ಅನುರಾಗ ಭಾವ ತುಂಬಿದ ಮೌರ್‍ಯಳ ಈ ರಾತ್ರಿ ನನ್ನ ಕೈಲಿ ಖಂಡಿತಾ ತಡಕೊಂಡಿರಕ್ಕೆ ಆಗೋಲ್ಲ" ಎಂಬ ಮಾತು ಐಯಾನನ ಮರಣದೊಂದಿಗೆ ಅದು ಅಂತ್ಯವನ್ನೊಂದುತ್ತದೆ.

ಒಟ್ಟಾರೆ ಮನುಷ್ಯ ಬದುಕಿರುವ ಈ ಅಸಂಗತ ಜಗತ್ತಿನಲ್ಲಿ ಪ್ರೇಮ. ವಾತ್ಸಲ್ಯ, ಅನುರಾಗಗಳೆಂಬ ನೈತಿಕ ಭಾವನೆಗಳಿಗೂ ಸಹ ಕ್ರೌರ್ಯ, ಸ್ವಾರ್ಥ, ನಿರಾಶೆ ಒಂಟಿತನಗಳಿಗೂ ಅದೇ ಅವಮರ್ಯಾದೆ ಸಲ್ಲುತ್ತದೆ. ಮನುಷ್ಯನ ಭಾವನೆಗಳಿಗೆ ಯಾವುದೇ ಬೆಲೆಯಿಲ್ಲ ಎಂಬುದು ವೇದ್ಯವಾಗುತ್ತದೆ.

ಯೋಗವು ಆತ್ಮೋನ್ನತಿಯ ಮಾರ್ಗ*

ಡಾ. ಚಂದ್ರಮೌಳಿ ನಾಯ್ಕರ

ಮನುಷ್ಯನು ಯಾವಾಗಲೂ ಸುಖವಾಗಿರಬೇಕೆಂದು ಬಯಸುತ್ತಾನೆ. ಅವನು ಸುಖವಾಗಿದ್ದಾನೆಯೆ? ಎಂಬ ಪ್ರಶ್ನೆ ಸ್ವಾಭಾವಿಕವಾಗಿ ಉದ್ಭವಿಸುವುದು. ಆಧ್ಯಾತ್ಮಿಕ ಗ್ರಂಥಗಳಲ್ಲಿ ಸುಖಿಯಾಗಿರುವವರೆಂದರೆ ಇಬ್ಬರು ಎಂದು ಹೇಳಿದೆ. ಅವರ್ಯಾರು ಎಂದರೆ–ಒಬ್ಬನು ಸತ್ತಿದ್ದಾನೆ, ಇನ್ನೊಬ್ಬನು ಹುಟ್ಟಬೇಕಾಗಿದೆ. ಅಂದರೆ ಈ ಹುಟ್ಟು ಮತ್ತು ಸಾವಿನ ಮಧ್ಯದಲ್ಲಿ ಜೀವಿಸಿರುವ ಮನುಷ್ಯನು ಸುಖಕ್ಕಾಗಿ ಪರದಾಡುತ್ತಿದ್ದಾನೆ.

ಪ್ರಾಪಂಚಿಕ ಜೀವನದಲ್ಲಿ ಸಿಕ್ಕು ಒದ್ದಾಡುವ ಮಾನವ, ಶಾಶ್ವತ ಸುಖ ಪಡೆಯಬಲ್ಲ. ಮಹಾದೇವನಾಗಲು ಸಾಂಸಾರಿಕ ಅಂದರೆ ಪ್ರೇಯೋ ಮಾರ್ಗವನ್ನು ಬಿಟ್ಟು ಆಧ್ಯಾತ್ಮಿಕ ಸಾಧನೆಯ ಶ್ರೇಯೋ ಮಾರ್ಗವನ್ನು ಆಶ್ರಯಿಸಬೇಕಾಗುತ್ತದೆ. ಇದು ಎಲ್ಲರಿಗೂ ಸಾಧ್ಯವಿಲ್ಲ. ಯಾಕೆಂದರೆ 'ಆಧ್ಯಾತ್ಮವು ದುರ್ಬಲರ ಹಾಗೂ ಮೂರ್ಖರ ಕ್ಷೇತ್ರವಲ್ಲ'ವೆಂದು ಶ್ರೇಷ್ಠರು ಹೇಳಿರುವರು.

ಇಂಥ ಆಧ್ಯಾತ್ಮಿಕ ಸಾಧನೆ ಮಾಡಬೇಕಾದರೆ ಅದರ ಅವಿಭಾಜ್ಯ ಭಾಗವಾದ ಯೋಗವನ್ನು ಕೈಗೊಳ್ಳಬೇಕಾಗುವುದು.

1. 'ಯೋಗಃ ಕರ್ಮಸು ಕೌಶಲಮ್'
2. 'ಸಮತ್ವಂ ಯೋಗ ಉಚ್ಚತೆ'
3. 'ದುಃಖ ಸಂಯೋಗ ವಿಯೋಗಂ ಯೋಗ ಸಂಜ್ಞಕಮ್'

ಇತ್ಯಾದಿಯಾಗಿ ಯೋಗದ ಸಾಮಾನ್ಯ ವ್ಯಾಖ್ಯೆಗಳನ್ನು ತಿಳಿಯಬಹುದಾಗಿದೆ. ಇವೆಲ್ಲ ವನ್ನೂ ಸಾಧಿಸಲು ಅಥವಾ ಜೀವನದಲ್ಲಿ ಏನನ್ನಾದರೂ ಸಾಧಿಸಲು 'ಮನೋ ನಿರ್ಧಾರ' ಅವಶ್ಯ. ಅಂಥ ಮನಸ್ಸನ್ನು ನಿರ್ಧರಿಸಲು ಅದು ನಮ್ಮ ವಶದಲ್ಲಿರಬೇಕು. ಆದುದರಿಂದ ನಾವು ಆ ಮನಸ್ಸನ್ನು ನಿಗ್ರಹಿಸಬೇಕು. ಅದರಲ್ಲಿ ನಾವು ಯಶಸ್ವಿ ಯಾದರೆ ನಮಗೆ ಮೋಕ್ಷ ಅಥವಾ ಬಿಡುಗಡೆ ಸಿಗುವುದು. ಇಲ್ಲದಿದ್ದರೆ ಬಂಧನ ವಾಗುತ್ತದೆ. ಆದ್ದರಿಂದ ಬಂಧ-ಮೋಕ್ಷಗಳಿಗೆ ಮನವೇ ಕಾರಣವೆಂದು ಹೇಳಲಾದ

* ದಿನಾಂಕ 26.10.1994ರಂದು, ವಿಜಾಪುರದ ಎ. ವಿ. ಸಮಿತಿಯ ಆಯುರ್ವೇದ ಮಹಾ ವಿದ್ಯಾಲಯದ 1994-95ರ 'ಯೋಗ ಕಮ್ಮಟ'ದಲ್ಲಿ ನೀಡಿದ ವಿಶೇಷ ಉಪನ್ಯಾಸ.

ಹಿನ್ನೆಲೆಯಲ್ಲಿ ಪತಂಜಲಿ ಮಹರ್ಷಿಗಳು 'ಯೋಗಶ್ಚಿತ್ತವೃತ್ತಿ ನಿರೋಧಃ' ಎಂದು ಹೇಳಿದರು. 'ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ' ಎಂಬ ನುಡಿಗೆ ಪತಂಜಲಿಗಳ (ಮಾತು) ಉಪದೇಶ ಸಾರ್ಥಕವಾಗಿದೆ.

ಇಲ್ಲಿ 'ಯೋಗಶ್ಚಿತ್ತವೃತ್ತಿ ನಿರೋಧಃ' ಎಂಬಲ್ಲಿ ಚಿತ್ತವೃತ್ತಿಯೇ ಯೋಗದ ಪರಮ ಗುರಿಯಲ್ಲದಿದ್ದರೂ ಪರಮ ಗುರಿಯಾದ ಶಿವಾದ್ವೈತವನ್ನು ಸಾಧಿಸಲು ಈ ಚಿತ್ತವೃತ್ತಿ ನಿರೋಧ ಬಹೂಪಯುಕ್ತವಾಗಿದೆ. ಚಿತ್ತವೆಂಬುದು ಸ್ವಾಭಾವಿಕವಾಗಿ ಚಂಚಲವಾಗಿದೆ. ಆದ್ದರಿಂದ ಇದಕ್ಕೆ ಮರ್ಕಟ ಮನಸ್ಸು ('Monkey mind or restless beast') ಎಂಬುದಾಗಿ ಹೇಳಲಾಗಿದೆ. ಇದನ್ನು ಸಮಾಧಾನಗೊಳಿಸುವ ಪ್ರಯತ್ನ ಮಾಡಬೇಕಾಗುತ್ತದೆ. (Harnessing the monkey mind). ಈ ಪ್ರಯತ್ನಕ್ಕೂ ಮನಸ್ಸು ಮಾಡಬೇಕಾಗುವುದು. ಆವಾಗಲೇ ಮುಕ್ತಿ ಪಡೆಯಲು ಸಾಧ್ಯ. ಅಂದರೆ 'Freedom from bondage is Liberation' ಎಂದು ಹೇಳಲಾಗಿದೆ.

> 'Philosophy is the way of thinking'
> 'Yoga is the way of doing'
> 'Realization is the way of undoing'.

ಮುಕ್ತಿ ಅಥವಾ ಆತ್ಮಸಾಕ್ಷಾತ್ಕಾರ ಸಾಧನೆಯೂ ಬಹು ಸುಲಭವಲ್ಲ. ಅದಕ್ಕಾಗಿಯೇ ಶ್ರೇಷ್ಠರು ಹೇಳಿದಂತೆ ಇದು ದುರ್ಬಲರ ಹಾಗೂ ಮೂರ್ಖರ ಕ್ಷೇತ್ರವಲ್ಲ. ಇದನ್ನು ಬಹಳ ನಿಷ್ಠೆಯಿಂದ ಮತ್ತು ನಿಯಮಿತತನದಿಂದ ಮಾಡಬೇಕಾಗುತ್ತದೆ. ಈ ರೀತಿ ಮಾಡಬೇಕಾದ ಕಾರ್ಯಕ್ಕೆ ಯೋಗವು ಬಹು ಪ್ರಯೋಜನಕಾರಿಯಾಗಿದೆ.

ಈ ಯೋಗವೆಂಬುದು ಜ್ಞಾನಯೋಗ, ಕರ್ಮಯೋಗ, ಜೈನಯೋಗ, ಬೌದ್ಧ ಯೋಗ, ಜಪಯೋಗ, ತಪಯೋಗ, ಮಂತ್ರಯೋಗ, ಲಯಯೋಗ, ಹಠಯೋಗ ಹಾಗೂ ರಾಜಯೋಗವೆಂದು ಹಲವು ಬಗೆಯಾಗಿದೆ. ಪ್ರಮುಖವಾದವುಗಳೆಂದರೆ ಮಂತ್ರ, ಲಯ, ಹಠ ಹಾಗೂ ರಾಜಯೋಗವೆಂಬ ಚತುರ್ವಿಧಗಳು. (ಮಂತ್ರೋ ಲಯೋ ಹಠೋ ರಾಜಯೋಗಶ್ಚೇತಿ ಚತುರ್ವಿಧವ್'). ಇವುಗಳು ಕೆಲವು ಅಂಗ ಗಳನ್ನು ಹೊಂದಿರುವುದರಿಂದ ಅವುಗಳಿಗೆ ಯೋಗಾಂಗಗಳೆಂದು ಹೇಳುವರು. ಪತಂಜಲಿಗಳ ಯೋಗವು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿಗಳಿಂದ ಕೂಡಿದ ಅಷ್ಟಾಂಗಯೋಗವಾಗಿದೆ. ಗೋರಕನಾಥ ಮೊದಲಾದವರು ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ,

ಸಮಾಧಿಗಳಿಂದ ಕೂಡಿದ ಷಡಂಗಯೋಗವನ್ನು ಪ್ರಚುರಪಡಿಸಿದರು. ಹಠಯೋಗವನ್ನು ಪ್ರಚುರಪಡಿಸಿದ ಸ್ವಾತ್ಮಾರಾಮರು ಆಸನ, ಪ್ರಾಣಾಯಾಮ, ದಶಮುದ್ರೆ ಮತ್ತು ನಾದಾನುಸಂಧಾನ ಎಂಬ ಚದುರಂಗಯೋಗವನ್ನು ನಿರೂಪಿಸಿದ್ದು–

'ಆಸನಂ ಕುಂಭಕಂ ಚಿತ್ರಂ ಮುದ್ರಾಖ್ಯಂ ಕರಣಂ ನಥಾ।
ಅಥ ನಾದಾನುಸಂಧಾನಂ ಅಭ್ಯಾಸಾನುಕ್ರಮೋ ಹಠೆ ॥

ಎಂದು ಸ್ವಾತ್ಮಾರಾಮರು ಸಾದರಪಡಿಸಿದ ಹಠಯೋಗವು ರಾಜಯೋಗದ ಸೋಪಾನವಾಗಿದೆ. ಇಲ್ಲಿ 'ಹ' ಅಂದರೆ 'ಪಿಂಗಳಾ' ಅಥವಾ ಸೂರ್ಯ ನಾಡಿ ಅಥವಾ ಬಲ ಹೊರಳೆ, 'ಠ' ಅಂದರೆ 'ಇಡಾ' ಅಥವಾ ಚಂದ್ರನಾಡಿ ಅಥವಾ ಎಡಹೊರಳೆ. ಇವೆರಡರ ಮೂಲಕ ಆಚರಿಸಬೇಕಾದ (ಪ್ರಾಣಾಯಾಮ) ಪೂರಕ, ಕುಂಭಕ, ರೇಚಕ ವಿಧಾನವಾದ ಪ್ರಾಣಾಯಾಮವೆಂಬುದು ಇಲ್ಲಿ ಸ್ಪಷ್ಟವಾಗಿ ತಿಳಿಸಲ್ಪಡುವುದು. ಈ 'ಹಠಯೋಗ' ವನ್ನು. ಸ್ವಾತ್ಮಾರಾಮರು ಹೇಳಿರುವಂತೆ ಜಾಣರ ಜಾಣ, ರಾಜರ ರಾಜ, ಒಡೆಯರ ಒಡೆಯ, ನಾಥರ ನಾಥ, ಆದಿನಾಥ, ಪರಶಿವ ಈ ಯೋಗವನ್ನು ಹೇಳಿದ್ದಾಗಿ ತಮ್ಮ ಹಠಪ್ರದೀಪಿಕೆಯಲ್ಲಿ ಬರೆದಿರುವರು.

ಹಠಯೋಗವು ದೈಹಿಕ ವಿಕಾಸಗೊಳಿಸುವುದು. ಆ ಮೂಲಕವಾಗಿ ರಾಜಯೋಗವು ಮಾನಸಿಕ ವಿಕಾಸಗೊಳಿಸುವುದು. ಹೀಗೆ ಯೋಗವು ಸಿದ್ಧಿಸುವುದು. ಬೇರೆ ನುಡಿಗಳಲ್ಲಿ ಹೇಳಬೇಕೆಂದರೆ, ದೈಹಿಕ ಪ್ರಗತಿಯು ಮಾನಸಿಕ ಪ್ರಗತಿಗೆ ದಾರಿ ಮಾಡಿಕೊಡುತ್ತದೆ. ಅದರ ನಂತರ ಮಾನಸಿಕ ಪ್ರಗತಿಯಿಂದ ಆತ್ಮ ಸಾಕ್ಷಾತ್ಕಾರವು ಲಭಿಸುತ್ತದೆ.

ಯೋಗದ ಸಾಮಾನ್ಯ ಆಚರಣೆಗಳಾದ ಆಸನಗಳು ಮುಗಿದ ಮೇಲೆ ದೇಹವನ್ನು ಸ್ವಚ್ಛಗೊಳಿಸಿಕೊಳ್ಳಬೇಕಾದ ಸಾಧಕನ–ಷಟ್ಕ್ರಿಯೆಗಳಾದ ಧೌತಿ, ಬಸ್ತಿ, ನೇತಿ, ತ್ರಾಟಕ, ನೌಲಿಕ, ಕಪಾಲಭಾತಿಗಳ ತಂತ್ರಗಳನ್ನು ಅವುಗಳ ಪ್ರಯೋಜನಗಳನ್ನು ವರ್ಣಿಸಲಾಗಿದೆ. ಈ ಮಲಶೋಧನ ಕ್ರಿಯೆಗಳು ಮುಗಿದ ಮೇಲೆ ನಾಡಿಶೋಧನದ ಸಾಧನವಾದ ಪ್ರಾಣಾಯಾಮದ ಮೂರು ಸ್ಥಿತಿಗಳನ್ನು, ಬೆವರು, ಕಂಪನ, ಬ್ರಹ್ಮರಂಧ್ರ, ಪ್ರವೇಶವೆಂಬ ಸ್ಥಿತಿಗಳು ಹೇಳಲ್ಪಟ್ಟಿವೆ. ಅಲ್ಲಿ ಅಷ್ಟಕುಂಭಕಗಳಾದ ಸೂರ್ಯಭೇದನ, ಉಜ್ಜಾಯೀ, ಸೀತ್ಕಾರೀ, ಶೀತಲೀ, ಭಸ್ತ್ರಿಕಾ, ಭ್ರಾಮರೀ, ಮೂರ್ಛಾ ಹಾಗೂ ಪ್ಲಾವಿನೀ ಇವುಗಳು ದೇಹದಲ್ಲಿರುವ 72000 ನಾಡಿಗಳನ್ನು ಶುದ್ಧಗೊಳಿಸಿ ಸಾಧಕನನ್ನು ಬಹಳ ಆಕರ್ಷಕನನ್ನಾಗಿ ಮಾಡುತ್ತದೆ. 'ಯೋಗಿನೀ ಚಕ್ರ ಸಮ್ಮಾನ್ಯಃ'ವೆಂಬ ಮಾತು ಯೋಗಿನಿಯರಿಗೂ ಈತನು ಆಕರ್ಷಕನಾದವನೆಂಬುದು ಅವನ ಆಕರ್ಷಕತ್ವವನ್ನು ಮಾತ್ರ ಸೂಚಿಸುವುದೇ ಹೊರತು ಯೋಗಿನಿಯರಿಗೆ ಆಕರ್ಷಕನಾಗಲು ಈ ಕುಂಭಕವನ್ನು ಆಚರಿಸಬೇಕೆಂದಲ್ಲ.

ಈ ಅಷ್ಟ ಕುಂಭಕಗಳನ್ನಾಚರಿಸುವ ಸಾಧಕನು ಪ್ರಗತಿಯ ಮಾರ್ಗದಲ್ಲಿ ಬಂದೊದಗುವ ರುದ್ರಗ್ರಂಥಿ, ವಿಷ್ಣುಗ್ರಂಥಿ ಹಾಗೂ ಬ್ರಹ್ಮಗ್ರಂಥಿಗಳೆಂಬ ಗ್ರಂಥಿತ್ರಯ ಗಳನ್ನು ದಾಟಿ ಮುಂದುವರೆಯುವನು. ಗ್ರಂಥಿತ್ರಯಗಳನ್ನು ಭೇದಿಸಿ ವಾಯುವು ಸುಷುಮ್ನಾ ನಾಡಿಯ ಮೂಲಕ ಪ್ರವೇಶಿಸಿ ಸಹಸ್ರಾರದ ವರೆಗೆ ನಿರಾಯಾಸವಾಗಿ ಸಾಗುವದು, ಈ ಹಂತದಲ್ಲಿ ಸಾಧಕನಿಗೆ ಕುಂಡಲಿನಿ ಶಕ್ತಿಯು ಜಾಗೃತವಾಗಲು ಸಹಾಯವಾಗುವುದು.

ಕುಂಡಲಿನಿಯೆಂದರೆ ಒಂದು ವಿಶೇಷ ಸಿದ್ಧಿಯ ಅವಸ್ಥೆ—'Gaining a kind of Rich Experience' ಎಂದು ಅದರ ವರ್ಣನೆ ಮಾಡಲಾಗಿದೆ.

ಮಹಾಮುದ್ರೆ, ಮಹಾಬಂಧ, ಮಹಾವೇಧ, ಖೇಚರೀ, ಉಡ್ಡೀಯಾನಬಂಧ, ಮೂಲಬಂಧ, ಜಾಲಂಧರ ಬಂಧ, ವಿಪರೀತಕರಣೀ, ವಜ್ರೋಲಿ ಹಾಗೂ ಶಕ್ತಿಚಾಲನ ವೆಂಬ ದಶಮುದ್ರೆಗಳು, ಸಾಧಕನ ಜನನೇಂದ್ರಿಯ ಹಾಗೂ ಗುದ ಇವುಗಳ ಮಧ್ಯ ವಿರುವ ಒಂಭತ್ತು ಇಂಚು ಉದ್ದ ಹಾಗೂ ನಾಲ್ಕು ಅಂಗುಲ ಅಗಲವಿರುವ ಕೊಳ್ಳ ಪ್ರದೇಶದಲ್ಲಿ ಸುಪ್ತವಾಗಿರುವ ಕುಂಡಲಿನಿ ಎಂಬ ಶಕ್ತಿಯನ್ನು ಜಾಗೃತಗೊಳಿಸಲು ನೇರವಾದ ಸಹಾಯವನ್ನು ಮಾಡುವವು.

ಅನಂತರ ಸಾಧಕನು ನಾದಾನುಸಂಧಾನವೆಂಬ ಅವಸ್ಥೆಯಲ್ಲಿ ಲಯವಾಗುವನು. ಒಂದು ಕೋಟಿ ಇಪ್ಪತ್ತೈದು ಲಕ್ಷ ಲಯಾವಸ್ಥೆಗಳಿದ್ದು, ಅವುಗಳಲ್ಲಿ ಅತಿ ಶ್ರೇಷ್ಠವಾದ ಈ ನಾದಾನುಸಂಧಾನವೆಂಬ ಅವಸ್ಥೆಯಲ್ಲಿ ಲೀನನಾದ ಯೋಗಿಯು ಸಮಾಧಿಯನ್ನು ಹೊಂದುವನು.

ನಾದಾನುಸಂಧಾನವೆಂಬುದು ಆರಂಭಾವಸ್ಥೆ, ಘಟಾವಸ್ಥೆ, ಪರಿಚಯಾವಸ್ಥೆ ಹಾಗೂ ನಿಷ್ಪತ್ತ್ಯಾವಸ್ಥೆಯೆಂದು ನಾಲ್ಕು ಬಗೆಯಾಗಿದೆ. ನಾದಾನುಸಂಧಾನವೆಂಬುದೇ ರಾಜಯೋಗವಾಗಿದೆ. ಆಸನ, ಪ್ರಾಣಾಯಾಮ ಮತ್ತು ಮುದ್ರೆಗಳ ವಿಷಯವಾಗಿ ತಿಳಿದುಕೊಂಡ ಮೇಲೆ ಅವುಗಳ ಫಲಸ್ವರೂಪವಾದ ರಾಜಯೋಗವೇ ನಾದಾನು ಸಂಧಾನವಾಗಿದೆಯೆಂದು ಹೇಳಬಹುದು. ಜೀವನ್ಮುಕ್ತಿ ಸ್ವರೂಪವೇ ನಾದಾನು ಸಂಧಾನವಾಗಿದೆಯೆಂತಲೂ ಹೇಳಬಹುದಾಗಿದೆ.

ರಾಜಯೋಗ, ಸಮಾಧಿ, ಉನ್ಮನೀ, ಮನೋನ್ಮನೀ, ಅಮರತ್ವ, ಲಯ, ತತ್ತ್ವ, ಶೂನ್ಯಾಶೂನ್ಯ, ಪರಮಪದ, ಅಮನಸ್ಕ, ಅದ್ವೈತ ನಿರಾಲಂಬ, ನಿರಂಜನ, ಜೀವನ್ಮುಕ್ತಿ, ಸಹಜಾವಸ್ಥೆ, ತುರ್ಯಾವಸ್ಥೆ ಎಂಬೆಲ್ಲವೂ ಏಕವಾಚಕ ಪದಗಳಾಗಿವೆ ಯೆಂಬುದನ್ನು ನಾವು ಮರೆಯುವಂತಿಲ್ಲ.

ನೀರಿನಲ್ಲಿ ಉಪ್ಪು ಬೆರೆಯುವಂತೆ ಆತ್ಮ ಮತ್ತು ಮನಸ್ಸು ಬೆರೆತಾಗ ಸಮಾಧಿ ಯೆನಿಸುತ್ತದೆ. ಜೀವಾತ್ಮ ಪರಮಾತ್ಮರ ಐಕ್ಯಕ್ಕೆ ಸಮಾಧಿಯೆನ್ನುವರು. ಮನಸ್ಸಿನ ವ್ಯಾಪಾರಗಳೆಲ್ಲ ಅಂದರೆ ಸಂಕಲ್ಪಗಳೆಲ್ಲ ನಾಶವಾಗುವ ಸ್ಥಿತಿಗೆ ಸಮಾಧಿಯೆಂದೆನ್ನುವರು.

ಮನೋ ಯಂತ್ರ ವಿಲೀಯತೇ ಪವನಸ್ತತ್ರ ಲೀಯತೆ ।
ಪವನೋ ಲೀಯತೇ ಯತ್ರ ಮನಸ್‌ತತ್ರ ವಿಲೀಯತೆ ॥

ಮನಸ್ಸು ಲೀನವಾಗುವಲ್ಲಿಯೇ ವಾಯು ಲೀನವಾಗುತ್ತದೆ. ಪ್ರಾಣ ಲೀನವಾಗುವಲ್ಲಿ ಮನಸ್ಸೂ ಲೀನವಾಗುತ್ತದೆ. ವಾಯುಕ್ರಿಯೆ ನಡೆಯುತ್ತಿರುವಾಗ ಮನೋ ವ್ಯಾಪಾರವೂ ನಡೆಯುತ್ತದೆ. ಮನೋವ್ಯಾಪಾರ ನಡೆಯುತ್ತಿರುವಾಗ ವಾಯು ಪ್ರವೃತ್ತಿ ನಡೆಯುತ್ತದೆ. ಇದರಿಂದ ಇಂದ್ರಿಯಗಳು ಕಾರ್ಯಪ್ರವೃತ್ತವಾಗುತ್ತವೆ. ಅವುಗಳ ನಿರೋಧವೇ ಮೋಕ್ಷಸಿದ್ಧಿ (ಸೋಪಾನ) ಯಾಗಿದೆ.

ಜಾಗೃತ್, ಸ್ವಪ್ನ ಹಾಗೂ ಸುಷುಪ್ತಿ ಎಂಬ ಮೂರು ಅವಸ್ಥೆಗಳು ಶ್ರೀಸಾಮಾನ್ಯನಿಗೂ ಸಮಾನವಾಗಿದ್ದು ಯೋಗಿ ಮೊದಲಾದ ಸತ್ಪುರುಷರಿಗೆ ಮಾತ್ರ ನಾಲ್ಕನೇ ಅವಸ್ಥೆಯಿದೆ. ಅದಕ್ಕೆ ತೂರ್ಯ ಅಥವಾ ತುರೀಯ ಅವಸ್ಥೆಯೆಂದು ಕರೆಯಲಾಗಿದೆ. ಇಲ್ಲಿ ಯೋಗಿಯು ಪರಬ್ರಹ್ಮದಲ್ಲಿ ಆತ್ಮವನ್ನು ಲೀನಗೊಳಿಸಬೇಕು, ಮತ್ತು ಆತ್ಮನಲ್ಲಿ ಪರಬ್ರಹ್ಮನನ್ನು ಸಮರಸಗೊಳಿಸಬೇಕು. ಹೀಗೆ ಎಲ್ಲೆಡೆಯಲ್ಲಿಯೂ ಆತ್ಮದರ್ಶನ ಮಾಡುತ್ತ ಬೇರೆ ಏನನ್ನೂ ಚಿಂತಿಸಬಾರದು. ಇದಕ್ಕೆ 'Constant remembrance' ಎಂದು ಕರೆದಿದ್ದಾರೆ.

ನಾದಾನುಸಂಧಾನದಲ್ಲಿ '–ನಾದ'ವೆಂದರೆ ಅನಾಹತನಾದವೆಂದು ಅರ್ಥ. ಅಂದರೆ ಮುಕ್ತಾಸನದಲ್ಲಿ ಕುಳಿತ ಯೋಗಿಯು ಶಾಂಭವೀ ಮುದ್ರೆಯ ಅಭ್ಯಾಸ ಮಾಡುತ್ತಿರು ವಾಗ ಬಲಗಿವಿಯಲ್ಲಿ ಕೇಳಿಸುವ ಆಂತರಿಕ (ಅನಾಹತ) ನಾದವೆಂದು ಅರ್ಥ. ಎರಡೂ ಕಿವಿ, ಎರಡೂ ಕಣ್ಣು, ಮೂಗಿನ ಹೊರಳೆ ಹಾಗೂ ಬಾಯಿಯನ್ನು ಮುಚ್ಚಿದಾಗ ಕೇಳಿಬರುವ ಪರಿಶುದ್ಧವಾದ ಸುಷುಮ್ನಾ ನಾಡಿಯಲ್ಲಿಯ ನಿರ್ಮಲವಾದ ನಾದವು ಕೇಳುವುದು. ಅದುವೇ ಅನಾಹತನಾದವೆಂದು ವರ್ಣಿತವಾಗಿದೆ.

ನಾದಾನುಸಂಧಾನದ ಮೊದಲ ಅವಸ್ಥೆಯಾದ 'ಆರಂಭಾವಸ್ಥೆ'ಯಲ್ಲಿ ಹೃದಯ ದಲ್ಲಿರುವ ಅನಾಹತಚಕ್ರದಲ್ಲಿಯ 'ಬ್ರಹ್ಮಗ್ರಂಥಿ'ಯು ಭೇದವಾಗುವುದು. ಆಗ ಶೂನ್ಯ ಸಂಭವವಾದ ಆನಂದ ಉಂಟಾಗುವುದು. ಅಂದರೆ ಜಣಜಣ ಶಬ್ದಗೈಯುವ ವಿಚಿತ್ರ ವಾದ ಅನಾಹತನಾದವು ಕೇಳಿಬರುತ್ತದೆ. ಆಗ ಯೋಗಿಯು ದಿವ್ಯ ದೇಹ ಅಥವಾ ಪ್ರಕಾಶಮಾನವಾದ ದೇಹವುಳ್ಳವನೂ, ರೋಗರಹಿತನೂ ಮತ್ತು ಪರಿಪೂರ್ಣ ಹೃದಯ ವುಳ್ಳವನೂ ಆಗುತ್ತಾನೆ. ಅಲ್ಲದೇ ವಾಯುವು ಶೂನ್ಯಪದವಿಯೆಂಬಲ್ಲಿ ಲೀನವಾಗು ವುದು.

ನಾದಾನುಸಂಧಾನದ ಎರಡನೆಯ ಅವಸ್ಥೆಯಾದ 'ಘಟಾವಸ್ಥೆ'ಯಲ್ಲಿ ಶುದ್ಧವಾದ ವಾಯುವು ಮಧ್ಯದ ಸುಷುಮ್ನಾ ನಾಡಿಯಲ್ಲಿ ಸಂಚರಿಸುತ್ತದೆ. ದೃಢವಾದ ಆಸನವುಳ್ಳ ಯೋಗಿಯು ಜ್ಞಾನಿಯೂ, ದೇವಸಮಾನ ಕಾಂತಿಯುತನೂ ಆಗುತ್ತಾನೆ. ಕಂಠದಲ್ಲಿಯ ವಿಶುದ್ಧ ಚಕ್ರದಲ್ಲಿರುವ ವಿಷ್ಣುಗ್ರಂಥಿಯ ಭೇದದಿಂದಾಗಿ ಪರಮಾನಂದ ಸೂಚಕವಾದ ಭೇರಿ ಶಬ್ದವು ಅತಿ ಶೂನ್ಯದಲ್ಲಿ ಕೇಳಿಬರುತ್ತದೆ.

ನಾದಾನುಸಂಧಾನದ ಮೂರನೆಯ ಅವಸ್ಥೆಯಾದ 'ಪರಿಚಯಾವಸ್ಥೆ'ಯಲ್ಲಿ ಮದ್ದಳೆಯ ದನಿ ಆಕಾಶದಲ್ಲಿ ಕೇಳಿಬರುತ್ತದೆ. ಆಗ ಪ್ರಾಣವು ಸರ್ವಸಿದ್ಧಿಗಳ ಆಶ್ರಯವಾದ ಮಹಾಶೂನ್ಯ ಅಂದರೆ ಭ್ರೂಮಧ್ಯವನ್ನು ಹೊಂದುತ್ತದೆ. ಚಿತ್ತಾನಂದವನ್ನು ಮೀರಿ ಯೋಗಿಯು ಸಹಜಾನಂದವನ್ನು ಪಡೆಯುತ್ತಾನೆ. ಆಗ ದೋಷ, ದುಃಖ, ಮುಪ್ಪು, ರೋಗ, ಹಸಿವು ಮತ್ತು ನಿದ್ರೆಗಳಿಂದ ಮುಕ್ತನಾಗುತ್ತಾನೆ.

ನಾದಾನುಸಂಧಾನದ ನಾಲ್ಕನೆಯ ಅವಸ್ಥೆಯಾದ 'ನಿಷ್ಪತ್ತ್ಯವಸ್ಥೆ'ಯಲ್ಲಿ ಭ್ರೂಮಧ್ಯದ ಆಜ್ಞಾಚಕ್ರದಲ್ಲಿರುವ ರುದ್ರಗ್ರಂಥಿಯನ್ನು ಭೇದಿಸಿ ವಾಯು ಶಿವಸ್ಥಾನವನ್ನು ಮುಟ್ಟಿ ಅಲ್ಲಿ ಲೀನವಾಗುತ್ತದೆ. ಈ ನಿಷ್ಪತ್ತಿ ಅವಸ್ಥೆಯಲ್ಲಿ ಶ್ರುತಿ ಮಾಡಿದ ವೀಣೆಯ ಧ್ವನಿ ಕೇಳಿಬರುತ್ತದೆ.

ಈ ಅವಸ್ಥೆಯಲ್ಲಿ ಯೋಗಿಯು ಸೃಷ್ಟಿ ಸಂಹಾರಕರ್ತೃವಾದ ಈಶ್ವರನಿಗೆ ಸಮನಾಗುತ್ತಾನೆ. ಸಕಲ ಯೋಗಾಭ್ಯಾಸಗಳ ಫಲಸ್ವರೂಪವಾದ ಈ ಅವಸ್ಥೆಯಲ್ಲಿ ಯೋಗಿಗೆ ಮಾಡಬೇಕಾದದ್ದು ಏನೂ ಉಳಿದಿರುವುದಿಲ್ಲ. ಆದ್ದರಿಂದಲೇ ಈಶ್ವರನಂತೆ ಸೃಷ್ಟಿ ಸಂಹಾರ ಕಾರ್ಯದಲ್ಲಿ ಶಕ್ತನಾಗುತ್ತಾನೆಂದು ಹೇಳಲಾಗಿದೆ. ಅಲ್ಲದೆ ಈ ಅವಸ್ಥೆಯಲ್ಲಿ ಮುಕ್ತಿ ಇದ್ದರೂ ಅಥವಾ ಇಲ್ಲದಿದ್ದರೂ ಅಖಂಡವೂ ಆದ ನಿರ್ವಿಘ್ನವೂ ಆದ ಸುಖವಿರುತ್ತದೆ. ಲಯದಿಂದ ಉದ್ಭವಿಸಿದ ಈ ಸೌಖ್ಯವನ್ನು ರಾಜಯೋಗದಿಂದ ಪಡೆಯಲು ಸಾಧ್ಯವಿದೆ. ಇದರ ತಾತ್ಪರ್ಯವಿಷ್ಟೆ : ಅಖಂಡಿತ ಹಾಗೂ ನಿರ್ವಿಘ್ನವಾದ ಆನಂದವನ್ನೇ ರಾಜಯೋಗವೆಂದು ಕರೆಯಬಹುದು.

ಈ ರೀತಿ ನಾದಾನುಸಂಧಾನದಲ್ಲಿ ಕಿವಿಗಳನ್ನು ಕೈಗಳಿಂದ ಮುಚ್ಚಿಕೊಂಡು ಕೇಳಿಬರುವ ಧ್ವನಿಯಲ್ಲಿಯೇ ಮುನಿಯು ಚಿತ್ತವನ್ನು ಸ್ಥಿರಗೊಳಿಸಬೇಕು. ಅದು ಅಲ್ಲಿ ಸ್ಥಿರವಾಗುವಂತೆ ಮಾಡಬೇಕು.

ಬಾಹ್ಯ ಧ್ವನಿಶ್ರವಣ ಜ್ಞಾನವುಂಟಾಗುವವರೆಗೂ ಅಂತರಂಗದಲ್ಲಿಯ ಅನಾಹತನಾದ ಶ್ರವಣ ಅಸಾಧ್ಯವೆಂಬುದು ವ್ಯಾವಹಾರಿಕ ಸತ್ಯ. ಆದ್ದರಿಂದ ಕಿವಿಗಳನ್ನು ಮೊದಲು ಮುಚ್ಚಿಕೊಂಡು ಹೊರಗಿನ ನಾದ ಶ್ರವಣ ನಿಲ್ಲುವಂತೆ ಮಾಡುವುದೇ

ಮೊದಲ ಹೆಜ್ಜೆಯಾಗಿದೆ. ಹೊರ ಜಗತ್ತಿಗಿಂತಲೂ ಒಳಜಗತ್ತು ಹೆಚ್ಚು ಸುಂದರ ಹಾಗೂ ಶ್ರೇಷ್ಠವಾಗಿದೆಯೆಂದು ಸಿದ್ಧಿಯೋಗದ ಕರ್ತೃ ಮುಕ್ತಾನಂದರ ಅಭಿಪ್ರಾಯ ವನ್ನಿಲ್ಲಿ ಸ್ಮರಿಸಬಹುದು.

ಬಾಹ್ಯ ಧ್ವನಿಯೇ ಮುಂತಾದ ವಿಷಯಗಳ ಅನುಭವ ಹೊಂದುವಾಗ ಚಿತ್ತ ಚಂಚಲವಾಗುತ್ತದೆ. ಆದರೆ ಅನಾಹತನಾದ ಶ್ರವಣದಿಂದ ಏಕಾಗ್ರಚಿತ್ತವೂ, ಯೋಗಿಗೆ ಅಲೌಕಿಕ ಆನಂದವನ್ನೂ ನೀಡುತ್ತದೆ.

ಪ್ರಾರಂಭದ ಅವಸ್ಥೆಯಲ್ಲಿ ನಾನಾ ಬಗೆಯ ದೊಡ್ಡ ಶಬ್ದ ಕೇಳಿಬರುತ್ತದೆ. ಆಮೇಲೆ ಅಭ್ಯಾಸವು ವೃದ್ಧಿ ಹೊಂದಲು ಅತಿ ಸೂಕ್ಷ್ಮ ಧ್ವನಿಯು ಕೇಳುತ್ತದೆ. ಅಂದರೆ ಪ್ರಾರಂಭಿಕ ಹಂತದಲ್ಲಿ ಸಮುದ್ರ, ಮೋಡ, ಭೇರಿ ಮತ್ತು ಚಕ್ರತಾಳಗಳ ಧ್ವನಿಯು, ಮಧ್ಯದ ಹಂತದಲ್ಲಿ ಮದ್ದಳೆ, ಶಂಖ, ಗಂಟೆ ಮತ್ತು ಜಾಗಟೆ (ಕಂಸಾಳ) ಗಳನ್ನು ಹೋಲುವ ಧ್ವನಿಯೂ ಮತ್ತು ಕೊನೆಯ ಹಂತದಲ್ಲಿ ಗೆಜ್ಜೆ, ಕೊಳಲು, ವೀಣೆ ಹಾಗೂ ಭ್ರಮರಗಳನ್ನು ಹೋಲುವ ಧ್ವನಿಯೂ ಕೇಳಿಬರುತ್ತದೆ. ಈ ರೀತಿ ನಾನಾ ಬಗೆಯ ನಾದಗಳು ದೇಹದಲ್ಲಿಯೇ ಕೇಳಿಬರುತ್ತವೆ.

ಮೊದಲು ಕೇಳಿಬರುವ ಸಮುದ್ರದ ಹಾಗೂ ಮೋಡದ ಗರ್ಜನೆಯನ್ನು ಹೋಲುವ ಧ್ವನಿಯನ್ನು ಕೇಳಿದಾಗ ಸಾಧಕನು ಹೆದರುವ ಸಂಭವವಿದ್ದು, ಅವನು ಹೆದರದೇ ನಾದಾನುಸಂಧಾನವನ್ನು ಮುಂದುವರೆಸಿಕೊಂಡು ಹೋಗಬೇಕು. ಯಾಕಂದರೆ ನಾದಾಸಕ್ತವಾದ ಮನಸ್ಸೇ ಸಮಾಧಿ ಸ್ಥಿತಿಯನ್ನು ಹೊಂದಲು ಸಮರ್ಥವಾಗಿದೆ.

ಕಟ್ಟಿಗೆಗೆ ಹತ್ತಿದ ಬೆಂಕಿ ಕಟ್ಟಿಗೆಯ ಜೊತೆ ಶಾಂತವಾಗುತ್ತದೆ. ಅದೇ ರೀತಿ ನಾದದಲ್ಲಿ ಪ್ರವರ್ತಿತವಾದ ಚಿತ್ತವು ನಾದದಲ್ಲಿಯೇ ಲೀನವಾಗುತ್ತದೆ. ನಾದರೂಪ ದಿಂದ ಕೇಳಿಬರುವುದೇ ಶಕ್ತಿಯಾಗಿದೆ. ತತ್ತ್ವವನ್ನು ಮೀರಿದ ನಿರಾಕಾರವಾದುದೇ ಪರಮಾತ್ಮವಾಗಿದೆ.

ಸದಾ ನಾದಾನುಸಂಧಾನದಿಂದ ಪಾಪವೆಲ್ಲ ನಾಶಹೊಂದುವುದು. ಆಗ ನಿಶ್ಚಿತ ವಾಗಿ ಚಿತ್ತವು ಮತ್ತು ವಾಯುವು ಚೈತನ್ಯದಲ್ಲಿ ನಿರಂಜನ ಬ್ರಹ್ಮದಲ್ಲಿ ಲೀನವಾಗುತ್ತದೆ. ಆಗ ಶಂಖ ದುಂದುಭಿಗಳ ನಾದವು ಕೇಳುವುದಿಲ್ಲ. ಏಕೆಂದರೆ ಉನ್ಮನೀ ಅವಸ್ಥೆಯಿಂದ ಸಾಧಕನ ಶರೀರ ನಿಜವಾಗಿಯೂ ಕಟ್ಟಿಗೆಯಂತಾಗುವುದು. ಸರ್ವಾವಸ್ಥೆಗಳಿಂದ ಮುಕ್ತನೂ, ಸರ್ವ ಚಿಂತೆಗಳಿಂದ ದೂರನೂ ಆದ ಯೋಗಿಯು ಸತ್ತವನಂತೆ ಉಳಿಯು ತ್ತಾನೆ. ಅವನೇ ಮುಕ್ತನೆಂಬಲ್ಲಿ ಸಂಶಯವಿಲ್ಲ. ಅಂದರೆ ತುರೀಯಾವಸ್ಥೆಯಲ್ಲಿರುವ ಸಕಲ ಚಿಂತೆಗಳಿಂದ ಮುಕ್ತನಾದ ಯೋಗಿಯು ಸಮಾಧಿಸ್ಥಿತಿಯಲ್ಲಿರುತ್ತಾನೆ.

ಗೀತೆಯಲ್ಲಿ ನಿರೂಪಿತ ಸ್ಥಿತಪ್ರಜ್ಞನ ಲಕ್ಷಣವನ್ನು ಇದು ಸ್ಮರಣೆಗೆ ತರುತ್ತದೆ.

ಯೋಗಿಯು ಜಾಗೃದವಸ್ಥೆಯಲ್ಲಿ ಸುಪ್ತನಂತೆ ಸ್ವಸ್ಥನಾಗಿರುತ್ತಾನೆ ಮತ್ತು ಶ್ವಾಸ-ನಿಃಶ್ವಾಸ ಹೀನನಾಗಿ ಮುಕ್ತನಾಗಿರುತ್ತಾನೆ.

ಈ ರೀತಿ ಹಠಯೋಗವು ಆತ್ಮೋನ್ನತಿಯ ಮಾರ್ಗವಾಗಿದೆ. ಲಿಂಗಭೇದ, ವಯೋಭೇದ ಇಲ್ಲಿ ಇಲ್ಲ. ಅಷ್ಟೇ ಅಲ್ಲ, ಜಾತಿಭೇದವೂ ಇಲ್ಲಿ ಇರುವುದಿಲ್ಲ.

ಡಾ॥ ವಿಜಯ ಕುಮಾರ ಮಹಾನುಭಾವಿಗಳು

ಸಕಲ ಜಗದೊಡೆಯ ಜೀವಜಾಲಕೆ ಅಭಯ ದಯಾಮಯ ಕರುಣಿಸನವರತ ।
ಸಕಲ ವಿಭುವಂದಿತ ಪ್ರಮಥಗಣ ಸಂಪ್ರೀತ ಮಹಾದೇವ ಕರುಣಿಸನಭವಾ ॥ ೧ ॥

ಲೋಕಾಂತವ ಬಿಡಿಸಿದೆ ಏಕಾಂತವ ನೀಡಿದೆ ಕರುಣೆ ನಿನ್ನೊಲುಮೆ ಘನವು ॥
ಏಕಾಂತದ ಶಿವಪೂಜೆ ಲೋಕಾಂತವ ಬೆಳಗಿ ಜಗವೆಲ್ಲ ಭಕ್ತಿ ತುಂಬಿರಲಿ ॥ ೨ ॥

ಅಡವಿಗೆಳೆತಂದೆ ಒಪ್ಪಿದೆ ಅಡವಿ ಮಠ ಮಾಡಿ ಶಿವಶಿವಾ ನೆನೆದೆ
ಅಡವಿ ಸುಖ ದುಃಖ ಒಂದೆ ಎರಡೆ ಬೇಡೆನ್ನದಿರುವೆ ಕರುಣಿಸಭವಾ ॥ ೩ ॥

ಎನ್ನೊಳಗೆ ತಪ್ಪಿರಲಿ ಕುಂದೇನು ತಂದೆ ಕಂದನ ಸಲಹಯ್ಯ ಕರುಣೀ
ಎನ್ನ ತಪ್ಪುಗಳ ತಿದ್ದಿ ಕರ್ಮಗಳ ಕಳೆದು ಅರಿವು ಭಕ್ತಿಯ ಕರುಣಿಸಘವಾ ॥ ೪ ॥

ಏನು ಮನವಿದು ಶಿವನೆ ಕಳವಳಿಪುದು ಕಡುದುಃಖಿಪುದು ಹಸಿವು ಆಸರೆಗೆ
ಏನು ಭವನೇ ಶಿವನೇ ಧರ್ಮ ಕಾಯಕ ಯೋಗ ನಿರುತ ನಡೆಸಯ್ಯ ತಂದೆ ॥ ೫ ॥

ಕಾಯಕವು ಇಲ್ಲದಿರೆ ಬದುಕು ಬಲು ದುರ್ಲಭವು ಸುಡು ಸುಡು ಮನವಿದನು ಶಿವನೆ ।
ಮಾಯದ ಒಡಲಿದನು ಎಂತು ದಂಡಿಪೆನು ಎಂತು ಶಿಕ್ಷಿಪೆನು ಕರುಣಿಸಯ್ಯ ಹರನೇ ॥ ೬ ॥

ಭಕ್ತಿಯನು ಮಾಡುವರು ಕೆಟ್ಟಹುದು ಇಲ್ಲುಂಟೆ ಭಕ್ತಿಯೇ ಘನವೆಂದೆ ಶಿವನೇ
ಭಕ್ತಿಯ ಮನವಿತ್ತು ಭಕ್ತಿಯ ಒಡಲಿತ್ತು ಭಕ್ತಿಯ ಎಡೆಕೊಳ್ಳೊ ಹರನೇ ॥ ೭ ॥

ಹಸಿವು ತೃಷೆಗಳ ಹಿಡಿದು ಅಟ್ಟಿ ಬಂದಿಹವು ಕಡುದುಃಖ ಶೋಕಗಳು ।
ಹಸಿವು ತೃಷೆಗಳ ಗೆದ್ದು ಅನುಭಾವ ಪಥದಲ್ಲಿ ದೃಢದಿಂದ ನಡೆಸು ॥ ೮ ॥

ಅಶನ ವಿಷಯಗಳು ಬಲುಹಿಡಿದು ಕಾಡಿಹವು ಗೆಲ್ಲುವ ಪರಿಯೆಂತು ಅಭವಾ ।
ಅರಸದಾತುರ ಹೋಗಿ ಭಕ್ತಿಯಮೃತ ಸವಿವ ದೃಢಭಕ್ತಿ ಕರುಣಿಸು ಅಭವಾ ॥ ೯ ॥

ಹುಲಿಯಂತ ಒಡಲಿದುವು ನರಿಯಂತ ಮನವಿದುವು ಹೇಗಿಲ್ಲಿ ಬಾಳಲಿ ಹರನೇ
ಉಲ್ಲಾಸದೀ ಭಕ್ತಿ ಅರಳಿದಂತಾಗಿಹುದು ಅನುಗ್ರಹದ ರಕ್ಷೆ ಪಾಲಿಸಲವು ॥ ೧೦ ॥

ಕೊಟ್ಟು ಕೊಂಡಿಹೆ ನಿನ್ನ ಸನ್ನಿಧಿಗೆ ಬಂದಿಹೆನು ತಿದ್ದಿ ಪೊರೆಯುವ ತಂದೆ ನೀನೆ ।
ಬಿಟ್ಟು ಹೋಗಲಿ ಭವವು ಒಡಲ ಕರ್ಪೂರವಿಹುದ ಬೆಳಗಿನಾರತಿಯು ನಿನಗೆ ॥ ೧೧ ॥

ನನ್ನವರು ತನ್ನವರು ಬಂಧುಗಳು ಗೆಳೆಯರು ಎಲ್ಲರನು ತೊರೆದಿಹೆ ಹರನೇ ।
ಬನ್ನಗಳು ಹೋಗಿಲ್ಲ ಆಶೆಗಳು ಅಳಿದಿಲ್ಲ ಬರು ಭಕ್ತಿ ನಡೆದಿದೇ ಶಿವನೇ ॥ ೧೨ ॥

ದಟ್ಟ ಅಡವಿಗೆ ನಡೆದು ಗುಡ್ಡಗಾಡಿಗೆ ಬಂದೆ ಹರಿಯುವ ಹೊಳೆಯೊಳಗೆ ನಿಂದೆ ।
ಇಷ್ಟಲಿಂಗವ ತಂದು ಕರತಲವು ತುಂಬಿ ಮನಭ್ರಮರವಾಗಿಹುದು ಅಭವಾ ॥ ೧೩ ॥

ಒಮ್ಮನದಿ ನೆನೆದಿಲ್ಲ ಒಮ್ಮನವು ಬಂದಿಲ್ಲ ಇಮ್ಮನದ ಭಕ್ತಿಯು ತರಳ ।
ಒಮ್ಮನವ ನೀಗಿತ್ತು ಒಮ್ಮನದಿ ನೆನೆವಂತೆ ಅರಳಿಸು ಪದತಲದಿ ಅರಳ ॥ ೧೪ ॥

ನಿರ್ಜನರ ವನವಿಹುದು ಏಕಾಂತ ತಾನಿಹುದು ಮನದಿ ಕಳವಳ ತುಂಬಿದೇ ।
ಸಜ್ಜನರು ಬೇರೆಂಬ ಅನುಕೂಲ ಇರಲೆಂಬ ಭಾವನೆಯು ಮನದಲ್ಲಿ ನಿಂದೆ ॥ ೧೫ ॥

ಏನು ತರಳನು ಇವನು ಭಕ್ತಿಯು ಪಥವರಿಯೆ ಪ್ರಾರ್ಥನೆಯ ಮಹವರಿಯೆ ಶಿಶುವೂ ।
ತನು ಪ್ರೀತಿ ಬಲುಬೆಳೆದು ಮೋಹದ ಕಳೆ ಬೆಳೆದು ಮನವಿದುವು ಮಾಯೆಯ ನೆಲೆಯು ॥ ೧೬ ॥

ಉರಿನೇತ್ರ ನೀನು ಮನಜನದಹಿಸು ಉರಿಸಿತನು ನನ್ನ ಬೇಡಿದೆನು ಅಭವಾ ।
ಅರಿವಿನಾ ಪ್ರಣತೆ ನಿರುತ ಬೆಳಗಿರಲಿ ಹೃದಯ ಪೀಠದಿ ಬಂದು ನೆಲೆಸಯ್ಯಾ ಭವನೇ ॥ ೧೭ ॥

ಅರಿವಾಗಿ ಬಂದೆ ಮನದಲ್ಲಿ ನಿಂದೆ ಅನುಭಾವ ಪಥದಿ ದೃಢದಿಂದ ನಡೆದೆ ।
ಗುರುವಾಗಿ ನಿಂದೆ ಗುರುಪಥವ ಹಿಡಿದೆ ಶಿವ ಶಿವಾ ಎನುವ ಶಿವಮಂತ್ರ ನುಡಿದೆ ॥ ೧೮ ॥

ತನುವಿಡಿದ ಕರ್ಮಗಳ ಕಳೆದುಕೊಳ್ಳುವ ಛಲದಿ ಶರಣ ಬಂದೆನು ಶಿವನ ಪದಕೆ
ತನು ಮೋಹವಳಿವಂಥ ಅರಿವು ಭಕ್ತಿಯು ನೀಡು ಅನುಭಾವ ಪಥದಲ್ಲಿ ಬರುವೇ ॥ ೧೯ ॥

ಹಸಿವಿಹುದು ತೃಷೆಯಿಹುದು ಜರೆಯುಹುದು ಸಾವಿಹುದು ಹಿಡಿಹುದು ಒಡಲನ್ನು ಕರ್ಮ ।
ಹಸಿವಿಂಗೆ ಆಳಾಗಿ ಸಾವಿಂಗೆ ವರವಾಗಿ ಭವದಿ ಬಂದುದು ಸಾಕು ಪೊರೆಯಯ್ಯ ಧರ್ಮ ॥ ೨೦ ॥

ತನುವಿಡಿದು ವಿಷಯಗಳು ತನುವಿಡಿದು ಲೋಭಗಳು ಹಿರಿದಾದ ಧಾಳಿ ಅಭವಾ
ತನುವಿದಕೆ ಶಕ್ತಿಯನು ಮನವಿದಕೆ ಭಕ್ತಿಯನು ಅನುಗ್ರಹಿಸು ಹಿರಿದಾಗಿ ಕರುಣೀ ॥ ೨೧ ॥

ಕೊರಡು ತೇಯಲು ಗಂಧ ಬೆರಣಿ ದಹಿಸಲು ಭಸ್ಮ ನಿನ್ನೊಲುಮೆ
ಬರಲಾನು ಧನ್ಯ ।
ಕರಣವಿಂದ್ರಿಯ ಗಣಕೆ ತವ ಕರುಣೆ ಹರಿದು ಬರೆ ಏಳೇಳು ಜನ್ಮದ ಭಾಗ್ಯ ॥ ೨೨ ॥

ಅಣುರೇಣು ತೃಣವಾಗಿ ಭವದಿ ಬಂದುದು ಸಾಕು ಭವಗಣದೊಡೆಯ ಸಲಹು
ಕಣ ಕಣದ ತನುವೆಲ್ಲ ಝೇಂಕರಿಸಿ ದನಿಗೊಡಲಿ ಓಂ ನಮಃ ಶಿವಾಯ
ಎಂಬ ಪದವಾ ॥ ೨೩ ॥

ಭವ ಬಾಳು ಕಳೆದು ಶಿವ ಬಾಳು ಬೆಳೆದು ಹರ ಭಕ್ತಿ ಧರೆಯಲ್ಲಿ ತುಂಬಿ ।
ಭವ ಜೀವರೆಲ್ಲ ಭವ ನಿನ್ನ ನೆನೆದು ಶಿವಪಾದ ಕಮಲದಲಿ ಜೀವಾತ್ಮ
ತುಂಬಿ ॥ ೨೪ ॥

ಅಕ್ಕರವು ಆರು ವಿದ್ಯೆಯಲಿ ಮಿಗಿಲು ಜೀವದೊಳು ಮಿಗಿಲು ಶಿವಶರಣ
ಗಣವು ।
ಅಕ್ಕರೆಯ ಭಕ್ತಿ ಶಿವಪಥದಿ ಘನವು ಕಣ ಕಣವ ತುಂಬಿ ಇರಲೆನಗೆ ಅಭವಾ । ॥ ೨೫ ॥

ಭಕ್ತಿಯಿಂದಲಿ ಶಕ್ತಿ ಭಕ್ತಿಯಿಂದಲಿ ಮುಕ್ತಿ ಭಕ್ತಿಯೇ ಸರ್ವಸ್ವ ಅಭವಾ ।
ಭಕ್ತಿಯಿಂದಲಿ ಜ್ಞಾನ ಭಕ್ತಿಯಿಂದಲಿ ಧ್ಯಾನ ಭಕ್ತಿಯೆ ಘನವೆಂದೆ ಅಭವಾ ॥ ೨೬ ॥

ಭವನೆ ಭಕ್ತಿಯ ಘನಕೆ ಮನಸೋತು ಬಂದೆ ಮತಿಬಿಟ್ಟು ಕಾಸೊಳಗೆ ಮಠ
ಮಾಡಿದೇ ।
ಶಿವನೊಲುಮೆ ಘನವೆಂದು ಬಾಳಿರಲು ಘಟ್ಟದಲಿ ಕೆಡುಕುಗಳು ಹಿರಿದಾಗಿ
ಶಿವನೇ ॥ ೨೭ ॥

ಆಸಲಾರೆನು ಕೆಡುಕ ನಿನ್ನುಳಿದು ಯಾರಿಲ್ಲ ನೀನಿರಲು ಬವಣೆಯೆ ಶಿವನೇ ।
ನೀನುಳಿಯೆ ಸಾವವನು ನೀನುಳಿಸೆ ನಲಿವವನು ದಯಾಘನ ನೀನೆ ಸಲಹು ॥ ೨೮ ॥

ಬನ್ನವನು ಕಳೆವವನೆ ಕರ್ಮವನು ಸುಡುವವನೆ ಬೇಡಿದೆನು ಭಕ್ತಿ
ಅನುಗಾಲವು ।
ಹೊನ್ನನು ಸುರಿದವನೆ ಭಾಗ್ಯವನು ಕೊಡುವವನೆ ನಿಜಭಕ್ತಿ ನೀಡಯ್ಯ
ನಿಡುಗಾಲವು ॥ ೨೯ ॥

ವಿಷಯ ಬಂಧುಗಳೆನ್ನ ಸಿಳ್ಳೆಹಾಕುತ ಕೆರೆದು ಇಂದ್ರಿಯಗಳ ಜಾತ್ರೆಗೆ ಎಳೆದು ।
ವಿಷಯವಾಗಿದೆ ಒಡಲು ವಿಷಯಗಳಿಚ್ಛೆಯಲಿ ಕರಣಗಳು ರಿಪುವಾಗಿ ಅಭವಾ ॥ ೩೦ ॥

ಚಿರತೆಧಾಳಿಯು ಬಹಳ ಹುಲಿಸಿಂಹವಾಗಿಹವು ಕಣ್ಣು ಕಿವಿ ಇಂದ್ರಿಯಗಳು
ಎನಗೆ ।
ಒರಗುವ ಗತಿಯೊವಗಿ ಜೀವಾತ್ಮ ಹುಲ್ಲೆಯನು ಆರಯ್ಯ ಶಿವಾ ಶಿವಾ
ಕರುಣೆ ॥ ೩೧ ॥

ಸಂಕಟವು ಕಂಟಕವು ಅಜ್ಞಾನ ಘನವಾಗಿ ಭವಭವಾ ಈ ಬಾಳು ವಿಷಯು ।
ಶಂಕರನೆ ಕಿಂಕರನೆ ಉದ್ಧರಿಸಿ ಸಲಹೆನ್ನ ಸದ್‌ಭಕ್ತಿ ದಾರಿಯಲಿ ಹರಸಿ ॥ ೩೨ ॥

ಒಡಲೇಕೆ ಇತ್ತೆ ಹಸಿವೇಕೆ ಕೊಟ್ಟೆ ವಿಷಯ ರಾಗಗಳ ರುಚಿ ಏಕೆ ನನಗೆ ।
ಒಡಲ ಗೆಲ್ಲುವ ಬಲವ ಹಸಿವ ಗೆಲ್ಲುವ ಅರಿವ ಮಿಗಿಲಾಗಿ ಅನುಗ್ರಹಿಸು
ಅಭವಾ ॥ ೩೩ ॥

ಏಳು ಎದ್ದೇಳು ಬೆಳಗಿಸಲಿ ನಲಿದೇಳು ಸುಖ ನಿದ್ದೆ ಸಾಕಿನ್ನು ಏಳು ।
ಬಾಳನ್ನು ಬೆಳಗಿರಲಿ ಆನಂದ ಹೊಮ್ಮಿರಲಿ ಬರಲಿಲ್ಲ ಸುಜ್ಞಾನ ಸಾಲು ॥ ೩೪ ॥

ಬಾಳು ಶಿವಭಕ್ತಿಯಲಿ ಬಾಳು ಹರಭಕ್ತಿಯಲಿ ಆನಂದ ಆನಂದ ಶಿವನೇ ।
ಏಳು ಶಿವಧ್ಯಾನದಲಿ ಬಾಳು ಶಿವಪೂಜೆಯಲಿ ನಲಿದಾಡು ಶಿವಶಿವ ಹರನ ॥ ೩೫ ॥

ಶಿವಾ ಎಂದಾಡದೆ ಶಿವಾ ಎಂದೋದದೆ ಕಳೆದಿಹೆ ಭವದಲ್ಲಿ ಬಾಳು
ಶಿವಾ ಎಂದೋದುವ ಶಿವಾ ಎಂದಾಡುವ ಅನುಭಾವ ಇರಲೆನಗೆ ಅಭವಾ ॥ ೩೬ ॥

ನಿನ್ನೊಲುಮೆ ತಾನಿಲ್ಲ ಸದ್‌ಭಕ್ತಿ ಮೊದಲಿಲ್ಲ ಅನುಭಾವ ಎನ್ನೊಳಗೆ ಇಲ್ಲ ।
ಚೆನ್ನಂತ ನುಡಿಯರಲಿ ಅನುಭಾವ ನಡೆದಿರಲಿ ಕಾಯಕವೆ ಅನುಭಾವ ಎನಗೆ ॥ ೩೭ ॥

ಭವದಲ್ಲಿ ಎಳೆತಂದೆ ಬಲುಹಾಗಿ ಕಾಡಿರುವೆ ಶರಣು ಶರಣೆಂಬ ನುಡಿ ನನ್ನದು ।
ಭವಕೆ ಅಲಸಿರುವೆ ಭವ ಬೇಡ ಎಂದಿರುವೆ ಸಲಹಯ್ಯ ಶರಣಾರ್ಥಿ ಒಲಿದು ॥ ೩೮ ॥

ಲೌಕಿಕದಿ ಬಾಳಿರುವೆ ಇಂದ್ರಿಯಕೆ ಸಿಕ್ಕಿರುವೆ ಉರಿದಿಹುದು ವ್ಯಸನದಾ
ಉರಿಯು ।
ಲೌಕಿಕವು ಬಲುಹಾಗಿ ಅನುಭಾವ ಮರೆಯಾಗಿ ಧಾಳಿಯಿಟ್ಟರೆ ಕ್ರೂರ
ಹುಲಿಯು ॥ ೩೯ ॥

ಶಿವಮಂತ್ರ ಔಷಧಿಯು ಶಿವಮಂತ್ರ ಓಗರವು ಶಿವಮಂತ್ರವೆ ಪ್ರಸಾದವೆನಗೆ ।
ಶಿವಮಂತ್ರ ಧಾರೆಯಿದು ಅನುಭಾವ ಪಲ್ಲವಕೆ ಶಿವ ಶಿವಾ ಉದ್ಧರಿಸು ಕರೆದೆ ॥ ೪೦ ॥

ಮಂಥನ

ರವಳಿ ಘೋಷಿಸು–ಎಂದರೇನು ?

ಯುದ್ಧಸಿದ್ಧತೆಯ ವರ್ಣನೆಗಳಲ್ಲಿ ಬರುವ ಶಬ್ದಗಳಲ್ಲಿ ಒಂದು 'ರವಳಿ ಘೋಷಿಸು' ಎಂಬುದು. ಈ ಶಬ್ದ ಪ್ರಯೋಗವಾದ ಕೆಲವು ಉದಾಹರಣೆಗಳು ಹೀಗಿವೆ :

"ನಿರಂತರಂ ರವಳಿ ಘೋಷಿಸುಗೆ"[1]
"ಆಗಳೆರಡುಂ ಬೀಡುಗಳೊಳಂ ಭೋರೆಂದಾರ್ದು ರವಳಿ ಘೋಷಿಸಿ
ಕೊಳ್ಳಿವೀಸಿದಾಗಳ್"[2]
"ಸುಭಟಾಲಾಪಮನಾಲಿಸುವ ರವಳಿ ಘೋಷಿಸುವ ದಂದುಗದಿನಿರುಳಂ ಕಳೆಯೆ"[3]

ಈ ಶಬ್ದದ ವಿಷಯದಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಪಂಪ ಭಾರತದಲ್ಲಿ 'ವಾದ್ಯವಿಶೇಷ' ಎಂದು ಅರ್ಥಕೊಟ್ಟಿದ್ದರೆ, ಪಂಪಭಾರತ ದೀಪಿಕೆಯಲ್ಲಿ ಕೊಟ್ಟ ವಿವರಣೆ ಈ ರೀತಿ ಇದೆ:– "ರವಳಿ-(ತೆ) ರವಲಿ, ರವಳಿ-ಶಬ್ದ, ಗದ್ದಲ ಎಂದರ್ಥ; (ತೆ) ರವಳಿಂಚು ಎಂಬ ಕ್ರಿಯಾ ರೂಪವೂ ಇದೆ; ರೌತುಲಾ ರವಳಿತೋ-ರಾವುತರ ರವಳಿಯಿಂದ ಎಂಬ ಪ್ರಯೋಗವೂ ಇದೆ, ಸ್ವಲ್ಪ ದೂರಕ್ಕೆ ಕೇಳಿಬರುವ ಸಂತೆಯ ಶಬ್ದ."[4]

ಈ ವಿವರಣೆಯಲ್ಲಿ ರವಳಿ ಎಂದರೆ ಶಬ್ದ, ಗದ್ದಲ ಎಂದರ್ಥವೆಂದು ಸ್ಪಷ್ಟ ಪಡಿಸಲಾಗಿದೆ. ರವಳಿ, ರವಲಿ ಎಂಬುದು ಧ್ವನಿ, ಶಬ್ದ ಎಂಬರ್ಥವನ್ನು ಕೊಡುವ 'ರವ'ಶಬ್ದದಿಂದ ನಿಷ್ಪನ್ನವಾದ ರೂಪವಾದಾಗ ರವಳಿ ಎಂಬುದಕ್ಕೆ ಶಬ್ದ, ಗದ್ದಲ ಎಂಬ ಅರ್ಥ ಸಮಂಜಸವಾಗುತ್ತದೆ. ಆದರೆ ಈ ಮೇಲೆ ಉದ್ಧೃತವಾದ ವಾಕ್ಯಗಳಲ್ಲಿ ರವಳಿಯನ್ನು ಘೋಷಿಸುವುದು ಎಂದು ಹೇಳಿದೆಯಲ್ಲವೆ. ರವಳಿಯೆಂಬುದಕ್ಕೆ ಶಬ್ದ, ಗದ್ದಲ ಎಂಬರ್ಥವನ್ನು ಸ್ವೀಕಾರ ಮಾಡಿದರೆ ಶಬ್ದವನ್ನಾಗಲಿ, ಗದ್ದಲವನ್ನಾಗಲಿ ಘೋಷಣೆ ಮಾಡುವುದೆಲ್ಲಿಂದ ಬಂತು? ಘೋಷಣೆ ಮಾಡುವುದು ಯಾವುದನ್ನು ? ಯಾವುದಾದರೂ ವಿಶೇಷವಾದ ವಿಷಯವನ್ನಲ್ಲವೆ! ಹೀಗಿರುವಾಗ ಗದ್ದಲವನ್ನು

---

1. ಪಂಪಭಾರತ 10-32
2. ಪಂಪಭಾರತ 10-35ವ
3. ರಾಮಚಂದ್ರ ಚರಿತ ಪುರಾಣಂ 13-11ವ
4. ಪಂಪಭಾರತ ದೀಪಿಕೆ ಪು. 350

ಘೋಷಿಸುವ ದಂದುಗವನ್ನೇಕೆ ಮಾಡಬೇಕು ಎಂಬಿತ್ಯಾದಿ ಸಂಶಯಗಳು ಮೂಡುತ್ತವೆ. ಆದುದರಿಂದ 'ರವಳಿ ಘೋಷಿಸು' ಎಂಬಲ್ಲಿ ಗದ್ದಲವನ್ನು ಘೋಷಿಸು ಎಂಬರ್ಥವಿರದೆ ಬೇರೆ ಇನ್ನಾವುದೊ ಒಂದು ಅರ್ಥವಿರಬೇಕೆಂದೆನ್ನಿಸುತ್ತದೆ.

ಪ್ರಾಕೃತದಲ್ಲಿ 'ರಾವಳಾರ' ಎಂಬ ಶಬ್ದವೊಂದಿದೆ ಇದನ್ನು 'ರವಳಾರ' ಎಂದೂ ಪ್ರಯೋಗಿಸುವುದುಂಟು ಪ್ರಾಕೃತ ರೂಪವಾದ ಕೊಂಕಣಿ ಭಾಷೆಯಲ್ಲಿ ಇಂದಿಗೂ ಈ ಶಬ್ದದ ಪ್ರಯೋಗವಿದೆ. ಅದರ ಅರ್ಥ ರಾಜನಮನೆ, ಅರಮನೆ ಎಂದು. ಈ ಶಬ್ದದ ನಿಷ್ಪತ್ತಿ ರಾಜಕುಲಾರ > ರಾವಳಾರ > ರವಳಾರ ಎಂದಾಗಿದೆ. ಅದೇ ರೀತಿ ರವಳಿ ಎಂಬ ಶಬ್ದದ ನಿಷ್ಪತ್ತಿಯೂ ರಾಜಾವಲೀ > ರಾವಳಿ > ರವಳಿ ಎಂದಾಗಿರುತ್ತದೆ, ಅಂದರೆ ಇದರ ಅರ್ಥ ರಾಜರ ವಂಶಾವಳಿ ಎಂಬುದು. ರಾಜರ ವಂಶಾವಳಿಯನ್ನು ಘೋಷಣೆ ಮಾಡುವುದೇ ರವಳಿ ಘೋಷಿಸುವುದು.

ಯುದ್ಧ ನಡೆಯುತ್ತಿರುವಾಗ ವೀರರು ಪರಸ್ಪರ ತಮ್ಮ ತಮ್ಮ ವೀರತೆಯನ್ನು ಹೇಳಿಕೊಳ್ಳುವುದಿಲ್ಲವೆ; ಇದನ್ನು ವೀರಾಲಾಪವೆನ್ನುತ್ತೇವೆ ಹಾಗೆಯೇ ಯುದ್ಧದ ಸಮಯದಲ್ಲಿ ತಮ್ಮ-ತಮ್ಮ ರಾಜರ ವಂಶಾವಳಿಯ ಹಿರಿಮೆ-ಗರಿಮೆಗಳನ್ನು, ಶೌರ್ಯ ಪ್ರತಾಪಗಳನ್ನು ಘೋಷಣೆ ಮಾಡುವ ಪದ್ಧತಿ ಇದ್ದಿರಬೇಕು, ಹಾಗೂ ಯುದ್ಧ ಮಾಡಲು ಸೈನಿಕರಿರುವಂತೆ ರಾಜರ ವಂಶಾವಳಿಯನ್ನು ಘೋಷಿಸುವವರೂ ಇದ್ದಿರ ಬೇಕು, ಸ್ತುತಿಪಾಠಕರಂತೆ. ಏಕೆಂದರೆ ರಾಮಚಂದ್ರ ಚರಿತ ಪುರಾಣದಲ್ಲಿ 'ರವಳಿ ಘೋಷಿಸುವ ದಂದುಗ(ಕೆಲಸ)ದಿಂದ ಇರುಳನ್ನು ಕಳೆಯಲು' ಎಂದು ಹೇಳಿರುವುದ ರಿಂದ 'ರವಳಿ ಘೋಷಿಸುವ' ಒಂದು ಉದ್ಯೋಗ ನಡೆಯಬೇಕಾದರೆ ಅದಕ್ಕಾಗಿಯೇ ವಿಾಸಲಾದವರು ಇರಬೇಕು, ಆದುದರಿಂದ 'ರವಳಿ ಘೋಷಿಸು' ಎಂದರೆ ಬರೆ ಗದ್ದಲ ಘೋಷಿಸು, ಗದ್ದಲ ಮಾಡುವುದು ಎಂಬರ್ಥವಾಗಿರದೆ ರಾಜರ ವಂಶಾವಳಿಯನ್ನು ಘೋಷಿಸುವುದು ಎಂಬುದೇ ಸಮಂಜಸವಾದ ಅರ್ಥವಾಗಿದೆ, ಜನ್ನಕವಿ ತನ್ನ ಅನಂತ ನಾಥ ಪುರಾಣದಲ್ಲಿ "......ಒಂದೆ ಕೆಯ್ಯೊಳಿಕ್ಕಿದೆರಡು ಕಂಕಣದ ಝಣಝಣತ್ಕಾರಂ ಜಡಿವ ಬಾಳಕುಣಿವ ಕೊಂಕಿಂಗೆ ಕಿಂಕಿಣೀರವಮನಳಂಕೆಗೊಳಿಸಿಯುಮೋದುವ ರಾಯ ವಾಡದ..........."[1] ಎಂದು ವರ್ಣಿಸಿದ ರಣಶಿಬಿರದ ಈ ವರ್ಣನೆಯಲ್ಲಿ ಬರುವ 'ಓದುವ ರಾಯವಾಡದ' ಎಂಬುದು 'ರವಳಿ ಘೋಷಿಸು' ಎಂಬುದಕ್ಕೆ ಪರ್ಯಾಯ ವಾಗಿ ಬಂದುದಾಗಿದೆ. ರಾಯವಾಡ ಎಂದರೂ ರಾಜಾವಲೀ ಎಂದರೂ ಎರಡರ ಅರ್ಥ ಒಂದೇ ರಾಜರ ವಂಶಾವಳಿ ಎಂಬುದು. ಈ ರಾಜರ ವಂಶಾವಳಿಯನ್ನು ಘೋಷಿಸುವುದೇ 'ರವಳಿ ಘೋಷಿಸು'.

ಎಂ. ಮಾಧವ ಪೈ

---

1. ಅನಂತನಾಥ ಪುರಾಣ 11-85ವ

ಈ ಸಂಚಿಕೆಯ ಲೇಖಕರು

1) ಡಾ॥ ಕಮಲಾ ಹಂಪನಾ — ಪ್ರಾಧ್ಯಾಪಕರು,
ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗ,
ಮೈಸೂರು ವಿಶ್ವವಿದ್ಯಾಲಯ.

2) ಡಾ॥ ಹಂಪ ನಾಗರಾಜಯ್ಯ — ಪ್ರಾಧ್ಯಾಪಕರು, ಕನ್ನಡ ಅಧ್ಯಯನಕೇಂದ್ರ,
ಬೆಂಗಳೂರು ವಿಶ್ವವಿದ್ಯಾಲಯ,
ಜ್ಞಾನಭಾರತಿ, ಬೆಂಗಳೂರು-560056.

3) ಎಂ. ಜಿ. ಮಂಜುನಾಥ — ಸಂಶೋಧನಾ ವಿದ್ಯಾರ್ಥಿ,
ಕನ್ನಡ ಅಧ್ಯಯನ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾಲಯ,
ಜ್ಞಾನಭಾರತಿ, ಬೆಂಗಳೂರು-560056.

4) ಶಿವರತ್ನ ಅ.ನ.ಹಳ್ಳಿ — ದ್ವಿತೀಯ ಎಂ.ಎ. ವಿದ್ಯಾರ್ಥಿನಿ,
ಕನ್ನಡ ಅಧ್ಯಯನ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾಲಯ,
ಜ್ಞಾನಭಾರತಿ, ಬೆಂಗಳೂರು–560056.

5) ಜಿ. ಕೆ. ದೇವರಾಜಸ್ವಾಮಿ — ಗಾಯತ್ರಿನಗರ,
ಬೆಂಗಳೂರು-560 021.

6) ಎಂ. ಎಲ್. ಶಿವಶಂಕರ್ — ಉಪನಿರ್ದೇಶಕರು,
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ,
ಇಲಾಖೆ, ಮೈಸೂರು.

7) ಸವಿತಾರೆಡ್ಡಿ. — ಪ್ರಥಮ ಎಂ.ಎ. ವಿದ್ಯಾರ್ಥಿನಿ,
ಕನ್ನಡ ಅಧ್ಯಯನ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾಲಯ,
ಜ್ಞಾನಭಾರತಿ, ಬೆಂಗಳೂರು–560056.

8) ಎಸ್, ಶಿವಣ್ಣ	ಸಂಪಾದಕರು. ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ. ಜ್ಞಾನಭಾರತಿ, ಬೆಂಗಳೂರು-560056.
9) ಹೊ.ನ. ನೀಲಕಂಠೇಗೌಡ	ಉಪನ್ಯಾಸಕರು, ಕನ್ನಡ ವಿಭಾಗ, ಚಾಮರಾಜಪೇಟೆ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು–560018.
10) ತಲಘಟ್ಟಪುರ ನಟರಾಜ	ದ್ವಿತೀಯ ಎಂ. ಎ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು–560056.
11) ಡಾ॥ ಬಸವಲಿಂಗಸೊಪ್ಪಿನಮಠ	ಮುಖ್ಯಸ್ಥರು, ಕನ್ನಡ ವಿಭಾಗ, ಎಲ್.ವ್ಹಿ.ಡಿ. ಕಾಲೇಜು, ರಾಯಚೂರು–584101.
12) ಡಾ॥ ಟಿ. ಬಿ. ಬಸವರಾಜು	ಅಧ್ಯಾಪಕರು, ತತ್ವಶಾಸ್ತ್ರ ಅಧ್ಯಯನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು–560056.
13) ಆರ್. ಜಗದೀಶ್	ಉಪನ್ಯಾಸಕರು, ಕನ್ನಡ ವಿಭಾಗ, ಸರ್ವೋದಯ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು.
14) ಎಂ. ಬೈರೇಗೌಡ	ನಂ. 119, 3ನೇ ತಿರುವು, 8ನೇ ಮುಖ್ಯ ರಸ್ತೆ, ಆರ್.ಪಿ.ಸಿ. ಬಡಾವಣೆ, ಬೆಂಗಳೂರು–560040.
15) ಡಾ॥ ಎಂ.ಪಿ. ಭುವನೇಶ್ವರ ಪ್ರಸಾದ್	ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ, ವಿವೇಕಾನಂದ ಪದವಿ ಕಾಲೇಜು, ರಾಜಾಜಿನಗರ ಎರಡನೆಯ ಹಂತ, ಬೆಂಗಳೂರು–560010.

16)	ಎ. ಓ. ಆವಲಮೂರ್ತಿ.	ಉಪನ್ಯಾಸಕರು, ಭೌತಶಾಸ್ತ್ರ ವಿಭಾಗ, ಶ್ರೀ ಕೊಂಗಾಡಿಯಪ್ಪ ಪದವಿಪೂರ್ವ ಕಾಲೇಜು, ದೊಡ್ಡಬಳ್ಳಾಪುರ-561203.
17)	ಟಿ. ಯಲ್ಲಪ್ಪ	ಎಂ. ಫಿಲ್. ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು-560056.
18)	ಬಿ. ಸಿ. ರಾಜಕುಮಾರ್	ಬಸವನಗುಡಿ ಪಾಳ್ಯ ನಾರಸಂದ್ರ ಅಂಚೆ ಕುದೂರು ಹೋಬಳಿ ಮಾಗಡಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
19)	ಡಾ॥ ಚಂದ್ರಮೌಳಿನಾಯ್ಕರ್	ಮುಖ್ಯಸ್ಥರು, ಸಂಸ್ಕೃತ-ಪ್ರಾಕೃತ ಹಾಗೂ ಯೋಗ ಅಧ್ಯಯನ ವಿಭಾಗ, ಕರ್ನಾಟಕ ಕಾಲೇಜು, ಧಾರವಾಡ.
20)	ಡಾ॥ ವಿಜಯಕುಮಾರ ಮಹಾನುಭಾಗಳು	ನಂ. 608, ಸಿದ್ದ, 3ನೇ ವಿಭಾಗ, 3ನೇ ಹಂತ, 7ನೇ ಮುಖ್ಯ ಬೀದಿ, ಬಸವೇಶ್ವರನಗರ, ಬೆಂಗಳೂರು-560079.
21)	ಎಂ. ಮಾಧವ ಪೈ.	ನಿವೃತ್ತ ಪ್ರಾಂಶುಪಾಲರು, ಶ್ರೀನಿವಾಸ, ಡಿ.ವಿ.ಎಸ್. ಹೈಸ್ಕೂಲು ಮೈದಾನದ ಸಮೀಪ, ವಿನೋಬನಗರ, ಶಿವಮೊಗ್ಗ–577201.

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560 056